ಸಂಪಾದಕರು :
ಎಂ.ಎಸ್. ವಿಕಾಸ್

ಮಂಗಳವಾರ, ಏಪ್ರಿಲ್ 23, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 342 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999



## ಗಾಳಿಪಟದಲ್ಲಿ ಮತದಾನ ಜಾಗೃತಿ

ದಾವಣಗೆರೆ, ಏ.22- ಜಿಲ್ಲಾಡಳಿತ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಸೋಮವಾರ ನಗರದ ಹೈಸ್ಕೂಲ್ ಮೈದಾನದಲ್ಲಿ ಗಾಳಿಪಟ ಹಾರಿಸುವ ಮೂಲಕ ಮತದಾನ ಜಾಗೃತಿ ಮೂಡಿಸಲಾಯಿತು. ಜಿ.ಪಂ. ಸಿಇಒ ಹಾಗೂ ಸ್ವೀಪ್ ಸಮಿತಿ ಅಧ್ಯಕ್ಷ ಸುರೇಶ್ ಬಿ.ಇಟ್ನಾಳ್, ಚುನಾವಣಾ ಐಕಾನ್ ಚಿತ್ರನಟ ಪೃಥ್ವಿ ಶಾಮನೂರ್ ಇತರರು ಈ ಸಂದರ್ಭದಲ್ಲಿದ್ದರು.

## ಆಸ್ತಿ ಹಂಚಿಕೆ : ಮೋದಿ ವಿರುದ್ಧ ಕಾಂಗ್ರೆಸ್ ದೂರು

ಕೊಚ್ಚಿ, ಏ. 22 – ಆಸ್ತಿ ಮರು ಹಂಚಿಕೆಗೆ ಸಂಬಂಧಿಸಿದಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸುಳ್ಳು ಹರಡುತ್ತಿದ್ದಾರೆ. ಈ ಬಗ್ಗೆ ದೂರು ದಾಖಲಿಸಲಾಗುವುದು ಎಂದು ಕಾಂಗ್ರೆಸ್ ಹೇಳಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಪ್ರಧಾನ ಮಂತ್ರಿಗೆ ಕಾಂಗ್ರೆಸ್ ಪ್ರಣಾಳಿಕೆ ಪ್ರತಿ ಕಳಿಸಲಾಗುವುದು. ಪ್ರಣಾಳಿಕೆ ಬಗ್ಗೆ ಪ್ರಧಾನಿಗೆ ಅರಿವು ಮೂಡಿಸಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಮಯ ಕೇಳಿದ್ದಾರೆ ಎಂದರು. ಎಲ್ಲಾ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭ್ಯರ್ಥಿಗಳು ನಮ್ಮ (2ನೇ ಪುಟಕ್ಕೆ)

## ಬರ ಪರಿಹಾರಕ್ಕೆ ಚುನಾವಣಾ ಆಯೋಗದ ಒಪ್ಪಿಗೆ

ನವದೆಹಲಿ, ಏ. 22 – ಕರ್ನಾಟಕಕ್ಕೆ ಬರ ಪರಿಹಾರ ನೀಡಲು ಚುನಾವಣಾ ಆಯೋಗ ಒಪ್ಪಿಗೆ ನೀಡಿದೆ. ಕೇಂದ್ರ ಸರ್ಕಾರ ಈ ವಿಷಯವನ್ನು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಸಂದೀಪ್ ಮೆಹ್ತ ಅವರನ್ನು ಒಳಗೊಂಡ ಪೀಠದ ಎದುರು ಮಾಹಿತಿ ದಾಖಲಿಸಿರುವ ಕೇಂದ್ರ ಸರ್ಕಾರ, ಈ ವಿಷಯಕ್ಕೆ ಸಂಬಂಧಿಸಿದಂತೆ ಚುನಾವಣಾ ಆಯೋಗ ಒಪ್ಪಿಗೆ ನೀಡಿದೆ. ಈ ಬಗ್ಗೆ ತ್ವರಿತವಾಗಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದೆ.

ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಅಟಾರ್ನಿ ಜನರಲ್ ಆರ್. ವೆಂಕಟರಮಣಿ, ಮುಂದಿನ ವಾರ ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು. ಈ ಬಗ್ಗೆ ಸೌಹಾರ್ದಯುತವಾಗಿ ಕ್ರಮ ತೆಗೆದುಕೊಳ್ಳಬೇಕು. (2ನೇ ಪುಟಕ್ಕೆ)

# ಚುನಾವಣೆಗೆ ಮೊದಲೇ ಅರಳಿದ ಕಮಲ !

### ಗುಜರಾತ್‌ನ ಸೂರತ್‌ನಲ್ಲಿ ಬಿಜೆಪಿ ಅಭ್ಯರ್ಥಿ ಅವಿರೋಧ ಆಯ್ಕೆ

ಸೂರತ್, ಏ. 22 – ಗುಜರಾತ್‌ನ ಸೂರತ್ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿಯ ಮುಕೇಶ್ ದಲಾಲ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಯ ನಾಮಪತ್ರ ತಿರಸ್ಕೃತವಾದ ನಂತರ, ಉಳಿದ ಎಲ್ಲಾ ಅಭ್ಯರ್ಥಿಗಳು ಕಣದಿಂದ ಹಿಂದೆ ಸರಿದಿದ್ದಾರೆ.

ಮೇ 7ರಂದು ಗುಜರಾತ್‌ನ ಎಲ್ಲಾ 26 ಲೋಕಸಭಾ ಕ್ಷೇತ್ರಗಳಿಗೆ ಒಂದೇ ಹಂತದಲ್ಲಿ ಚುನಾವಣೆ ನಡೆಯಬೇಕಿತ್ತು. ಈಗ ಚುನಾವಣೆಯ ಮೊದಲೇ ದಲಾಲ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಾಮಪತ್ರ ವಾಪಸ್ ಪಡೆಯುವ ಕೊನೆಯ ದಿನವಾದ ಸೋಮವಾರದಂದು ನಾಲ್ವರು ಸ್ವತಂತ್ರ ಅಭ್ಯರ್ಥಿಗಳು ಹಾಗೂ ಮೂರು ಸಣ್ಣ ಪಕ್ಷಗಳ ಅಭ್ಯರ್ಥಿಗಳು ಮತ್ತು ಬಿ.ಎಸ್.ಪಿ.ಯ ಪ್ಯಾರೆಲಾಲ್ ಭಾರತಿ ಕಣದಿಂದ ಹಿಂದೆ ಸರಿದಿದ್ದಾರೆ.

ಸೂಚಕರ ಸಹಿಯಲ್ಲಿ ವ್ಯತ್ಯಾಸಗಳು ಕಂಡು ಬಂದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ನೀಲೇಶ್ ಕುಂಭನಿ ಅವರ ನಾಮಪತ್ರ ತಿರಸ್ಕರಿಸಿರುವುದಾಗಿ ಚುನಾವಣಾ ಅಧಿಕಾರಿ ಹೇಳಿದ್ದರು. ಕಾಂಗ್ರೆಸ್‌ನ ಹೆಚ್ಚುವರಿ ಅಭ್ಯರ್ಥಿಯಾಗಿದ್ದ ಸುರೇಶ್ ಪಡ್ಸಲ ಅವರ ನಾಮಪತ್ರ ಸಹ ಅಸಿಂಧುವಾಗಿತ್ತು.

ಮುಕೇಶ್ ಕುಮಾರ್ ದಲಾಲ್ ಅವರು ಸೂರತ್ ಕ್ಷೇತ್ರದಿಂದ ಗೆದ್ದಿರುವ ಪ್ರಮಾಣ ಪತ್ರವನ್ನು ಚುನಾವಣಾ ಅಧಿಕಾರಿ ಸೌರಭ್ ಪರ್ಧಿ ಅವರು ಅಭ್ಯರ್ಥಿಗೆ ನೀಡಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಬಿಜೆಪಿ ರಾಜ್ಯಾಧ್ಯಕ್ಷ ಸಿ.ಆರ್. ಪಾಟೀಲ್, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಸೂರತ್ ಮೊದಲ ಕಮಲವನ್ನು ಸಮರ್ಪಿಸಿದೆ. ಸೂರತ್ ಕ್ಷೇತ್ರದ ನಮ್ಮ ಅಭ್ಯರ್ಥಿ ಮುಕೇಶ್ ದಲಾಲ್ ಅವಿರೋಧವಾಗಿ ಆಯ್ಕೆಯಾಗಿರುವುದಕ್ಕೆ ಅಭಿನಂದಿಸುತ್ತೇನೆ ಎಂದಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿಯ ಸೂಚಕರನ್ನು ಅಪಹರಿಸಲಾಗಿದೆ ಎಂದು ಕಾಂಗ್ರೆಸ್ ಚುನಾವಣೆಗೆ ಮುಂಚೆ ನಾಟಕ ಮಾಡಿತ್ತು. ಈ ಆರೋಪವನ್ನು ಆ ಪಕ್ಷದ ಅಭ್ಯರ್ಥಿಯೇ ತಳ್ಳಿ ಹಾಕಿದ್ದರು. ನಂತರ ಚುನಾವಣಾ ಅಧಿಕಾರಿಗಳ ಮೇಲೆ ಒತ್ತಡ ಹೇರಲು ಹಾಗೂ ಗಾಳಿ ಸುದ್ದಿ ಹರಡಲು ಯತ್ನಿಸಿದ್ದರು. ಆ ಪ್ರಯತ್ನಗಳು ವಿಫಲವಾಗಿವೆ ಎಂದು (4ನೇ ಪುಟಕ್ಕೆ)

## ಬಿಜೆಪಿ ಬಂಡಾಯ ಅಭ್ಯರ್ಥಿ ಈಶ್ವರಪ್ಪ ಉಚ್ಚಾಟನೆ



ಬೆಂಗಳೂರು, ಏ. 22 – ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಅವರನ್ನು ಬಿಜೆಪಿಯಿಂದ ಆರು ವರ್ಷಗಳ ಅವಧಿಗೆ ಉಚ್ಚಾಟಿಸಲಾಗಿದೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಬಿಜೆಪಿ ವಿರುದ್ಧ ಸೆಡ್ಡು ಹೊಡೆದು ಶಿವಮೊಗ್ಗ ಲೋಕಸಭೆ ಚುನಾವಣೆಯಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವ ಕಾರಣ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಶಿವಮೊಗ್ಗ ಲೋಕಸಭೆ ಚುನಾವಣೆಯಿಂದ ನಾಮಪತ್ರ ವಾಪಸ್ ಪಡೆಯುವಂತೆ ಈಶ್ವರಪ್ಪ ಅವರಿಗೆ (4ನೇ ಪುಟಕ್ಕೆ)

## ತಂದೆ-ತಾಯಿ ಕೊಲೆಗೆ ಮಗ ಸುಪಾರಿ

### ಗದಗದ ನಾಲ್ವರ ಹತ್ಯೆ ಸಂಚು ಬಯಲಿಗೆಳೆದ ಪೊಲೀಸರು

ಗದಗ, ಏ. 22 – ಕಳೆದ ಏಪ್ರಿಲ್ 19ರಂದು ಬೆಟಗೇರಿಯಲ್ಲಿ ನಡೆದ ನಾಲ್ವರ ಹತ್ಯೆ ಸುಪಾರಿ ಪ್ರಕರಣ ಎಂದಿರುವ ಪೊಲೀಸರು, ತಂದೆ - ತಾಯಿಯ ಕೊಲೆಗಾಗಿ ಮಗ ವಿನಾಯಕ್ ಬಾಕಳೆ ಸಂಚು ನಡೆಸಿದ್ದ ಎಂದು ತಿಳಿಸಿದ್ದಾರೆ.

ಆದರೆ, ಮೊದಲ ಹೆಂಡತಿಯ ಮಗ ವಿನಾಯಕ್ ಬಾಕಳೆ ನಡೆಸಿದ ಸಂಚು ಯಶಸ್ವಿಯಾಗದೇ, ನಾಲ್ವರು ಅಮಾಯಕರು ಸುಪಾರಿ ಹಂತಕರಿಗೆ ಬಲಿಯಾಗಿದ್ದಾರೆ.

ಪ್ರಕಾಶ್ ಬಾಕಳೆ ಅವರ ಎರಡನೇ ಮಗ ಕಾರ್ತಿಕ್ ಬಾಕಳೆ ಹಾಗೂ ಸಂಬಂಧಿಕರಾದ ಪರಶುರಾಮ್ ಹಾದಿಮನಿ, ಲಕ್ಷ್ಮಿ ಹಾದಿಮನಿ ಹಾಗೂ ಆಕಾಂಕ್ಷ ಹಾದಿಮನಿ ಅವರು ಹತ್ಯೆಗೀಡಾಗಿದ್ದರು.

ತಂದೆ ಪ್ರಕಾಶ್ ಬಾಕಳೆ ಹಾಗೂ ಸುನಂದ ಬಾಕಳೆ ಬದುಕುಳಿದಿದ್ದಾರೆ. ಪ್ರಕಾಶ್ ಬಿಜೆಪಿ ಮುಖಂಡರಾಗಿದ್ದರೆ, ಸುನಂದ ಅವರು ಗದಗ – ಬೆಟಗೇರಿ ನಗರಸಭೆಯ ಉಪಾಧ್ಯಕ್ಷೆಯಾಗಿದ್ದಾರೆ.

ಕಾರ್ತಿಕ್ ಮದುವೆ ನಿಶ್ಚಿತಾರ್ಥದಲ್ಲಿ ಪಾಲ್ಗೊಳ್ಳಲು ಹಾದಿಮನಿ ಕುಟುಂಬದವರು ಬಂದಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಮನೆಯಲ್ಲಿನ ಆಭರಣ, ಅಮೂಲ್ಯ (4ನೇ ಪುಟಕ್ಕೆ)



## ಹಳೇಪೇಟೆ ವೀರಭದ್ರೇಶ್ವರ ಸ್ವಾಮಿ ಗುಗ್ಗುಳ

### ಕೆಂಡ ತುಳಿದ ಸಚಿವ ಎಸ್ಸೆಸ್ಸೆಂ, ಪುತ್ರ, ಪುತ್ರಿ

### ವಿಶೇಷ ಪೂಜೆ ಸಲ್ಲಿಸಿದ ಪ್ರಭಾ ಮಲ್ಲಿಕಾರ್ಜುನ್

ದಾವಣಗೆರೆ, ಏ.22- ಹಳೆಪೇಟೆಯ ಶ್ರೀ ವೀರಭದ್ರೇಶ್ವರ ಸ್ವಾಮಿ ರಥೋತ್ಸವದ ಹಿನ್ನೆಲೆಯಲ್ಲಿ ದೇವಸ್ಥಾನದ ಆವರಣದಲ್ಲಿ ಸೋಮವಾರ ಗುಗ್ಗುಳ ಹಾಗೂ ಅಗ್ನಿ ಕುಂಡ ನಡೆಯಿತು.

ಪ್ರತಿ ವರ್ಷದಂತೆ ಈ ವರ್ಷವೂ ಸಹ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕೆಂಡ ತುಳಿದರು.

ಸಚಿವರೊಂದಿಗೆ ಪುತ್ರ ಸಮರ್ಥ್ ಹಾಗೂ ಪುತ್ರಿ ಶ್ರೇಷ್ಠ ಕೆಂಡ ತುಳಿದರು. ಈ ಸಂದರ್ಭದಲ್ಲಿ ಸಚಿವರ ಪತ್ನಿ ಡಾ.ಪ್ರಭಾ ಮಲ್ಲಿಕಾರ್ಜುನ್ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜನರ ಒಲವು ಕಾಂಗ್ರೆಸ್ ಪರ ಇದೆ. ರಾಜ್ಯ ಸರ್ಕಾರದ ಗ್ಯಾರಂಟಿಗಳು ಬಡವರಿಗೆ, ಮಹಿಳೆಯರಿಗೆ ಅನುಕೂಲ ಆಗಿವೆ. ಮಹಿಳೆಯರು ಕಾಂಗ್ರೆಸ್ ಕೈ ಹಿಡಿಯಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ನಾವು ಕೆಲಸ ಮಾಡಿದ್ದೇವೆ, ವೋಟ್ ಕೊಡಿ ಎಂದು ಕೇಳುತ್ತಿದ್ದೇವೆ. ನಮ್ಮ ಯೋಜನೆಗಳಿಂದ ಆರ್ಥಿಕವಾಗಿ ಜನರು ಸುಧಾರಣೆಯಾಗುತ್ತಾರೆ ಎಂದರು.

ನಾವು ಯಾರನ್ನು ಆಪರೇಷನ್ ಮಾಡಿ ಪಕ್ಷಕ್ಕೆ ಸೇರಿಸಿಕೊಂಡಿಲ್ಲ. ಆ ಪಕ್ಷದಲ್ಲಿ ಗೌರವ ಇಲ್ಲದ ಕಾರಣಕ್ಕಾಗಿ ಬೇಸತ್ತು ನಮ್ಮ ಪಕ್ಷಕ್ಕೆ ಬರುತ್ತಿದ್ದಾರೆ ಎಂದರು.

ಬಿಜೆಪಿಯಲ್ಲಿ ಒಡಕಿದೆ. ಹಿರಿಯ ಮುಖಂಡರಿಗೂ ಅಭ್ಯರ್ಥಿ ಬಗ್ಗೆ ಅಸಮಾಧಾನವಿದೆ. ಈಗಾಗಲೇ ಯಡಿಯೂರಪ್ಪ ಬಂದು ರಾಜೀ ಸಂಧಾನ ಮಾಡಿ ಹೋಗಿದ್ದಾರೆ. ಜಾತಿಗೆ ಒಬ್ಬರಂತೆ ಮುಖಂಡರನ್ನು ಕರೆಸುತ್ತಿದ್ದಾರೆ ಎಂದು ಎಸ್ಸೆಸ್ಸೆಂ ಕುಟುಕಿದರು.

ಸಿದ್ದೇಶ್ವರ ಅವರು ಸಂಸದರಾಗಿ ಏನೂ ಅಭಿವೃದ್ಧಿ ಕೆಲಸ ಮಾಡಿಲ್ಲ. ಈಗ ಚುನಾವಣೆ ಸಮಯದಲ್ಲಿ ಮೋದಿ ಫೋಟೋ ಇಟ್ಟುಕೊಂಡು ಮತ ಕೇಳುತ್ತಾರೆ. ಆದರೆ ವೈಯಕ್ತಿಕವಾಗಿ ಅವರದ್ದು ಶೂನ್ಯ (2ನೇ ಪುಟಕ್ಕೆ)

## ನೇಮಕಾತಿ ಅಕ್ರಮ : 25 ಸಾವಿರ ಶಾಲಾ ಸಿಬ್ಬಂದಿ ನೇಮಕ ರದ್ದು

ಕೊಲ್ಕೊತಾ, ಏ. 22 - ಪಶ್ಚಿಮ ಬಂಗಾಳದ ಅನುದಾನಿತ ಹಾಗೂ ಪ್ರಾಯೋಜಿತ ಶಾಲೆಗಳ ನೇಮಕಕ್ಕಾಗಿ ನಡೆಸಲಾದ ಪರೀಕ್ಷೆ ಅಸಿಂಧು ಎಂದು ಕಲ್ಕತ್ತಾ ಹೈಕೋರ್ಟ್ ರದ್ದುಗೊಳಿಸಿದೆ. ಇದರಿಂದಾಗಿ 25,753 ಸಿಬ್ಬಂದಿ ಹುದ್ದೆಗಳನ್ನು ಕಳೆದುಕೊಂಡಿದ್ದಾರೆ.

ನ್ಯಾಯಮೂರ್ತಿಗಳಾದ ದೇಬಾಂಗ್ಸು ಬಸಕ್ ಹಾಗೂ ಮೊಹಮ್ಮದ್ ಶಬ್ಬರ್ ರಶಿದಿ ಅವರನ್ನು ಒಳಗೊಂಡ ಪೀಠ ಈ ತೀರ್ಪು ನೀಡಿದ್ದು, ನೇಮಕಾತಿ ಪ್ರಕ್ರಿಯೆ ಕುರಿತು ಸಿ.ಬಿ.ಐ. ಹೆಚ್ಚಿನ ತನಿಖೆ ನಡೆಸಿ ಮೂರು ತಿಂಗಳಲ್ಲಿ ವರದಿ ನೀಡಬೇಕು ಎಂದೂ ತಿಳಿಸಿದೆ.

2016ರಲ್ಲಿ ನಡೆಸಲಾದ ರಾಜ್ಯ ಮಟ್ಟದ ಆಯ್ಕೆ ಪರೀಕ್ಷೆಯಲ್ಲಿ 23 ಲಕ್ಷ ಅಭ್ಯರ್ಥಿಗಳು ಭಾಗಿಯಾಗಿದ್ದರು. ನಂತರ 25,753 ನೇಮಕಾತಿ ಆದೇಶಗಳನ್ನು ಹೊರಡಿಸಲಾಗಿತ್ತು. ಈ ಆದೇಶಕ್ಕೆ ತಡೆ ನೀಡಬೇಕು ಎಂದು ಕೆಲ ಅರ್ಜಿದಾರರು ಮಾಡಿಕೊಂಡ ಮನವಿಯನ್ನು ಹೈಕೋರ್ಟ್‌ನ ವಿಭಾಗೀಯ ಪೀಠ ತಳ್ಳಿ ಹಾಕಿದೆ.

ತೀರ್ಪಿನ ನಂತರ ಹೇಳಿಕೆ ನೀಡಿರುವ ಆಕಾಂಕ್ಷಿಗಳು, ವರ್ಷಗಳ ಕಾಲ ಬೀದಿಗಿಳಿದು ಹೋರಾಟ ನಡೆಸಿದ್ದೆವು. ಅಂತಿಮವಾಗಿ ನ್ಯಾಯ ದೊರೆತಿದೆ ಎಂದಿದ್ದಾರೆ.

ನೇಮಕಾತಿ ಪ್ರಕ್ರಿಯೆ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಕಲ್ಕತ್ತಾ ಹೈಕೋರ್ಟ್ (4ನೇ ಪುಟಕ್ಕೆ)

## ಸಿಇಟಿ: ಪಠ್ಯ ಹೊರತಾದ ಪ್ರಶ್ನೆ ಸಂಖ್ಯೆ ಖಚಿತ ಪಡಿಸಿಕೊಳ್ಳಲು ತಜ್ಞರ ಸಮಿತಿ

ಬೆಂಗಳೂರು, ಏ.22 -ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಪಠ್ಯಕ್ರಮದಿಂದ ಹೊರತಾಗಿರುವ ಪ್ರಶ್ನೆಗಳ ಸಂಖ್ಯೆಗಳನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು 4 ವಿಷಯಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ತಜ್ಞರ ಸಮಿತಿ ರಚಿಸಿದೆ.

ತಜ್ಞರ ಸಮಿತಿಯು ತನ್ನ ವರದಿಯನ್ನು ತಕ್ಷಣವೇ ನೀಡುವಂತೆ ಸರ್ಕಾರ ಆದೇಶಿಸಿದೆ. ಸಿಇಟಿ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೆಇಎಯು ಕಾರ್ಯ ನಿರ್ವಹಿಸಲಿದೆ. ತಜ್ಞರ ಸಮಿತಿಯ ವರದಿಯನ್ನು ಆಧರಿಸಿ ಈ ಬಗ್ಗೆ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು. ವಿದ್ಯಾರ್ಥಿಗಳ ಹಿತಾಸಕ್ತಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಮತ್ತು ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗುವುದಿಲ್ಲ ಎಂದು ಉನ್ನತ ಶಿಕ್ಷಣದ ಸರ್ಕಾರದ ಪ್ರಧಾನ ಕಾರ್ಯದರ್ಶಿ ತಿಳಿಸಿದ್ದಾರೆ.

ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಏಪ್ರಿಲ್ 18 ಮತ್ತು 19ರಂದು ನಡೆಸಿದ್ದು, ಸಿಇಟಿ ಪರೀಕ್ಷೆಯನ್ನು 4 ವಿಷಯಗಳಿಗೆ (ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಮತ್ತು ಜೀವಶಾಸ್ತ್ರ) ನಡೆಸಲಾಗಿದೆ. ರಾಜ್ಯಾದ್ಯಂತ 3 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.

ಪರೀಕ್ಷೆಗಳು ನಡೆದ ನಂತರ, ಪತ್ರಿಕೆಗಳ ವರದಿಗಳು ಹಲವಾರು ಪ್ರಶ್ನೆಗಳು ಸಿಇಟಿಯ ಪಠ್ಯಕ್ರಮದ ಹೊರತಾಗಿವೆ (2ನೇ ಪುಟಕ್ಕೆ)

# ದೇಶದ ಯುವಕರಿಗೆ ಮೋದಿಯೇ ಗ್ಯಾರಂಟಿ

### ಹರಪನಹಳ್ಳಿ ತಾಲ್ಲೂಕಿನ ವಿವಿಧೆಡೆ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಪ್ರಚಾರ



ಹರಪನಹಳ್ಳಿ, ಏ.22- ಯುವಕರು ಈ ದೇಶದ ಭವಿಷ್ಯ. ಅಂತಹ ಯುವಕರಿಗೆ ಮೋದಿ ಜೀ ಅವರೇ ಒಂದು ನಿಜವಾದ ಗ್ಯಾರಂಟಿ. ಅಗ್ನಿವೀರ್ ನೇಮಕಾತಿ ಮೂಲಕ ಯುವಕರಿಗೆ ಉದ್ಯೋಗ ಕೊಡುವ ಜೊತೆಗೆ ರಾಷ್ಟ್ರ ಪ್ರೇಮ ಜಾಗೃತಗೊಳಿಸುವ ಕೆಲಸ ಮಾಡುತ್ತಿದ್ದಾರೆ. ಮೇಕ್ ಇನ್ ಇಂಡಿಯಾ, ಮೇಡ್ ಇನ್ ಇಂಡಿಯಾ, ಸ್ಟಾರ್ಟಪ್ ಇಂಡಿಯಾ, ಮುದ್ರಾ ಯೋಜನೆ ಸೇರಿದಂತೆ ಅನೇಕ ಯೋಜನೆಗಳ ಮೂಲಕ ಹೊಸ ಉದ್ಯಮ ಮತ್ತು ಕೋಟ್ಯಂತರ ಉದ್ಯೋಗ ಸೃಷ್ಟಿಗೆ ಕಾರಣೀಕರ್ತರಾಗಿ ಈ ದೇಶದ ಯುವಕರಿಗೆ ನಿಜವಾದ ಗ್ಯಾರಂಟಿಯಾಗಿದ್ದಾರೆ ಎಂದು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ತಿಳಿಸಿದರು.


ಹರಪನಹಳ್ಳಿ ತಾಲ್ಲೂಕಿನ ಬಾಗಳಿ, ಮೈದೂರು, ಚಿಗಟೇರಿ ಸೇರಿದಂತೆ ವಿವಿಧ ಭಾಗಗಳಲ್ಲಿ ಮಾಜಿ ಸಚಿವ ಜಿ.ಕರುಣಾಕರ ರೆಡ್ಡಿ ಅವರ ಜೊತೆ ಮತ ಯಾಚಿಸಿ ಮಾತನಾಡಿದ ಅವರ, ಕಾಂಗ್ರೆಸ್ ಸರ್ಕಾರ ರಾಜ್ಯದ ಜನರಿಗೆ ಸುಳ್ಳಿನ ಗ್ಯಾರಂಟಿ ನೀಡಿದೆ. ಅದೇ ಮೋದಿ ಅವರು ದೇಶದ ಯುವಕರಿಗೆ, ಸಾಮಾನ್ಯ ಜನರಿಗೆ ನಿಜವಾದ ಗ್ಯಾರಂಟಿ ನೀಡಿದ್ದಾರೆ ಎಂದರು.

ರಾಜ್ಯ ಸರ್ಕಾರ ನಿರುದ್ಯೋಗಿ ಯುವಕರಿಗೆ ಯುವ ನಿಧಿ ನೀಡುತ್ತೇವೆ ಎಂದು ಹೇಳಿ ಯಾಮಾರಿಸಿದೆ. ಇಲ್ಲಿ ಇರುವ ಎಷ್ಟು ಯುವಕರಿಗೆ ಯುವ ನಿಧಿ ಹಣ ಬಂದಿದೆ ಕೈ ಎತ್ತಿ ನೋಡೋಣ ಎಂದರು. ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಗೆ ಮರುಳಾದರೆ ನಮಗೆ ಮತ್ತು ನಮ್ಮ ಮಕ್ಕಳಿಗೆ ಭವಿಷ್ಯ ಇರುವುದಿಲ್ಲ. ದೇಶದ ರಕ್ಷಣೆ, ನಮ್ಮ ನಿಮ್ಮ ರಕ್ಷಣೆ, ಅಭಿವೃದ್ಧಿಗಾಗಿ ಮೋದಿ ಜೀ ಅವರು ಮತ್ತೊಮ್ಮೆ ಪ್ರಧಾನಿ ಆಗಬೇಕಿದೆ. ನೀವೆಲ್ಲರೂ ನನ್ನ ಕ್ರಮ ಸಂಖ್ಯೆ 1, ಹೆಸರು ಗಾಯತ್ರಿ ಸಿದ್ದೇಶ್ವರ್, ಗುರುತು ಕಮಲಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಮತ ಚಲಾಯಿಸಿದರೆ ಮೋದಿ ಅವರು ಮತ್ತೊಮ್ಮೆ ಪ್ರಧಾನಿ ಆಗುವುದು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ ಎಂದರು.

**ಗುಳೇ ತಪ್ಪಿಸಲು ಕ್ರಮ :** ಹರಪನಹಳ್ಳಿ ಭಾಗದ ಕೆಲ ಗ್ರಾಮಗಳ ಜನ ಉದ್ಯೋಗ ಅರಸಿಕೊಂಡು ಮಲೆನಾಡಿನ ಕಾಫಿ ತೋಟಗಳ ಕಡೆಗೆ ಗುಳೇ ಹೋಗುವುದು ಸರ್ವೇ ಸಾಮಾನ್ಯವಾಗಿದೆ. ಗುಳೇ ಹೋಗುವುದನ್ನು ಶಾಶ್ವತವಾಗಿ ತಡೆಗಟ್ಟಿ ಅವರವರ ಗ್ರಾಮಗಳಲ್ಲಿಯೇ ಉದ್ಯೋಗ ಖಾತ್ರಿ ಯೋಜನೆ ಮೂಲಕ ಉದ್ಯೋಗ ದೊರಕಿಸಿಕೊಟ್ಟು ಈ ಭಾಗದ ಕೂಲಿ ಕಾರ್ಮಿಕರು ಗುಳೇ ಹೋಗದೆ ಸ್ವಗ್ರಾಮಗಳಲ್ಲಿಯೇ ನೆಮ್ಮದಿಯಿಂದ ಜೀವನ ನಡೆಸುವಂತಾಗಲು ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ (4ನೇ ಪುಟಕ್ಕೆ)

## ಕಣದಲ್ಲಿ ಉಳಿದ ವಿನಯ್

### ಸಿಲಿಂಡರ್ ಚಿಹ್ನೆ ನೀಡಿದ ಆಯೋಗ



ದಾವಣಗೆರೆ, ಏ.22- ದಾವಣಗೆರೆ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಚುನಾವಣಾ ಕಣದಲ್ಲಿ ಉಳಿದಿದ್ದಾರೆ. ನಾಮಪತ್ರ ವಾಪಸ್ ಪಡೆಯಲಿದ್ದಾರೆ ಎಂದು ಕೆಲವರು ವದಂತಿ ಹಬ್ಬಿಸಿದ್ದರು. ಈ ವದಂತಿಗೆ ಈಗ ತೆರೆ ಬಿದ್ದಿದೆ. ಚುನಾವಣಾ ಕಣದಲ್ಲಿ ಗೆಲುವಿಗೆ ಸೆಣಸಾಡಲಿದ್ದಾರೆ.

ನಾಮಪತ್ರ ವಾಪಸ್ ಪಡೆಯಲು ಇಂದು ಕೊನೆ ದಿನವಾಗಿತ್ತು. ಇನ್ನು ವಿನಯ್ ಕುಮಾರ್ ಅವರಿಗೆ ಸಿಲಿಂಡರ್ ಗುರುತನ್ನು ಚುನಾವಣಾ ಆಯೋಗ ನೀಡಿದೆ.

ಚಿಹ್ನೆ ಸಿಕ್ಕ ಬಳಿಕ ಮಾತನಾಡಿದ ವಿನಯ್ ಕುಮಾರ್, ಕೆಲವರು ನನ್ನ ವಿರುದ್ಧ ಅಪಪ್ರಚಾರ ನಡೆಸಿದ್ದರು. ಕೊನೆ ಕ್ಷಣದಲ್ಲಿ ನಾಮಪತ್ರ ವಾಪಸ್ ಪಡೆಯುತ್ತೇನೆ ಎಂಬ ಸುಳ್ಳು ಸುದ್ದಿ ಹಬ್ಬಿಸಿದ್ದರು. ನಾಮಪತ್ರ ವಾಪಸ್ ಪಡೆಯಲು ಇಂದು ಕೊನೆಯ ದಿನವಾಗಿತ್ತು. ಆದ್ರೆ, ವಾಪಸ್ ಪಡೆದಿಲ್ಲ. ಕಣದಲ್ಲಿ ಉಳಿದಿದ್ದೇನೆ. ದಿನಕಳೆದಂತೆ ಜನರ ಬೆಂಬಲ ಹೆಚ್ಚಾಗುತ್ತಿದೆ. ಲೋಕಸಭೆ ಚುನಾವಣೆಯಲ್ಲಿ ಗೆಲ್ಲುವ ವಿಶ್ವಾಸ ಇದೆ ಎಂದು ಹೇಳಿದರು.

ನನಗೆ ಸಿಲಿಂಡರ್ ಚಿಹ್ನೆಯನ್ನು ಕೇಂದ್ರ ಚುನಾವಣಾ ಆಯೋಗವು ನೀಡಿದೆ. ಸಿಲಿಂಡರ್ ಅನ್ನು ಪ್ರತಿಯೊಬ್ಬ ಮಹಿಳೆಯೂ ಉಪಯೋಗಿಸುತ್ತಾರೆ. ಜನರಿಗೆ ಬೇಕಾಗಿರುವ ಅವಶ್ಯಕವೂ ಹೌದು. ಎಲ್ಲರಿಗೂ ಗೊತ್ತಿರುವ ಸಿಲಿಂಡರ್ ಗುರುತು ನನ್ನದಾಗಿದ್ದು, ಈ ಚಿಹ್ನೆಗೆ ಮತ ಹಾಕುವ ಮೂಲಕ ಗೆಲ್ಲಿಸಿ ಕೊಡಿ ಎಂದು ಮನವಿ ಮಾಡಿದರು.

ಪುಣ್ಯಸ್ಮರಣೆ




ಶ್ರೀಮತಿ ಅನ್ನಪೂರ್ಣಮ್ಮ
ನಿಧನ : 28.04.2012

ಶ್ರೀ ಎನ್. ಸತೀಶ್ (ನಾಯಕ)
ನಿಧನ : 23.04.2016
ಹಿಂದೂ ಯುವಶಕ್ತಿ ಸಂಸ್ಥಾಪಕ ಅಧ್ಯಕ್ಷರು
ನಗರ ಸಭಾ ಸದಸ್ಯ, ಎಪಿಎಂಸಿ ಪ್ರಭಾರಿ ಅಧ್ಯಕ್ಷರು

ಕಣ್ಣಿಗೆ ದೂರ ಮನಸ್ಸಿಗೆ ಹತ್ತಿರ...
ದಣಿವರಿಯದ ಅತಿಥಿ ಸತ್ಕಾರ, ಕೌಟುಂಬಿಕ ಕಾಳಜಿ ಇವು ನಿಮ್ಮ ಬಳುವಳಿ... ನಿಮ್ಮ ಶ್ರೇಷ್ಠ ಸಂಸ್ಕಾರ, ಶಿಸ್ತು, ಆದರ್ಶ ನಮ್ಮೆಲ್ಲರ ಪಾಲಿಗೆ ದಾರಿ ದೀಪವಾಗಿವೆ. ನಿಮ್ಮ ನೆನಪು ಸದಾ ಹಸಿರು....

ಪ್ರೊ. ಸಿ. ನರಸಿಂಹಪ್ಪ
ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಸ್ನೇಹ ಬಳಗ

# 17ನೇ ವಾರ್ಡಿನಲ್ಲಿ ಪ್ರಭಾ ಪರವಾಗಿ ಮಹಿಳಾ ಮುಖಂಡರಿಂದ ಮತಯಾಚನೆ



ದಾವಣಗೆರೆ, ಏ. 22 - ನಗರದ ವಾರ್ಡ್ ನಂಬರ್ 17ರ ಮುದ್ದಳ್ಳಿ ತೋಟದಲ್ಲಿ ಲೋಕಸಭಾ ಚುನಾವಣಾ ಅಂಗವಾಗಿ ದಾವಣಗೆರೆ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಪರವಾಗಿ ಶ್ರೀಮತಿ ಲತಿಕಾ ದಿನೇಶ್ ಶೆಟ್ಟಿ ಅವರ ನೇತೃತ್ವದಲ್ಲಿ ವಾರ್ಡ್ ಅಧ್ಯಕ್ಷರಾದ ಗೀತಾ ಜಗದೀಶ್ ಅವರ ಅಧ್ಯಕ್ಷತೆಯಲ್ಲಿ ವಾರ್ಡ್ ಮುಖಂಡರಾದ ಜ್ಯೋತಿ ಅವರ ಸಮ್ಮುಖದಲ್ಲಿ ಮುದ್ದಳ್ಳಿ ತೋಟದ ಮಹಿಳೆಯರ ಜೊತೆ ಪೂರ್ವಭಾವಿ ಸಭೆಯನ್ನು ಇಂದು ನಡೆಸಲಾಯಿತು.

ಸಭೆಯಲ್ಲಿ ಕರ್ನಾಟಕ ಸರ್ಕಾರದ ಯೋಜನೆಗಳು ಹಾಗೂ ಕೇಂದ್ರ ಸರ್ಕಾರದ ಯೋಜನೆಗಳು ಮಹಿಳೆಯರಿಗೆ ತಿಳಿಸುವುದರ ಮುಖಾಂತರ ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಮತ ಚಲಾಯಿಸಿ ಎಂದು ವಾರ್ಡ್ ಮಹಿಳೆಯರಲ್ಲಿ ಮನವಿ ಮಾಡಿಕೊಂಡರು.

## ನಗರದಲ್ಲಿ ಇಂದು ಪೂರ್ವಭಾವಿ ಸಭೆ

ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಅವರಿಗೆ ಸಿಲಿಂಡರ್ ಗುರುತು ಸಿಕ್ಕ ಹಿನ್ನೆಲೆಯಲ್ಲಿ ಮತದಾರರ ಮನವೊಲಿಸುವ ಕುರಿತಂತೆ ಚರ್ಚಿಸಲು ಇಂದು ಪೂರ್ವಭಾವಿ ಸಭೆ ಕರೆಯಲಾಗಿದೆ. ಸಭೆಯಲ್ಲಿ ಸಿಲಿಂಡರ್ ಚಿಹ್ನೆ ಸಿಕ್ಕಿರುವ ಕಾರಣ ಮತದಾರರಿಗೆ ಯಾವ ರೀತಿ ತಲುಪಿಸಬೇಕು, ಮತದಾರರಿಗೆ ಮನದಟ್ಟು ಮಾಡಲು ಯೋಜನೆ ರೂಪಿಸುವ ಕುರಿತಂತೆ ಸುದೀರ್ಘವಾಗಿ ಚರ್ಚಿಸಲಾಗುವುದು.

# ಮೊದಲ ಬಾರಿಗೆ ಬಿಜೆಪಿ ಅಭ್ಯರ್ಥಿ ಅವಿರೋಧ ಆಯ್ಕೆ

## 35 ವರ್ಷಗಳ ನಂತರ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧೆಯಿಲ್ಲದೇ ಗೆಲುವು

ಅಹಮದಾಬಾದ್, ಏ. 22 – ಇದೇ ಮೊದಲ ಬಾರಿಗೆ ಬಿಜೆಪಿ ಅಭ್ಯರ್ಥಿಯೊಬ್ಬರು ಲೋಕಸಭೆಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಗುಜರಾತ್‌ನ ಸೂರತ್‌ನಿಂದ ಬಿಜೆಪಿಯ ಮುಕೇಶ್ ದಲಾಲ್ ಅವಿರೋಧ ಆಯ್ಕೆಯಾಗಿದ್ದಾರೆ. ಇದು ಗುಜರಾತ್ ರಾಜ್ಯ ರಚನೆಯ ನಂತರ ಮೊದಲ ಅವಿರೋಧ ಆಯ್ಕೆಯೂ ಆಗಿದೆ.

ಈ ಹಿಂದೆ ಸೌರಾಷ್ಟ್ರ ರಾಜ್ಯದಲ್ಲಿ 1951ರಲ್ಲಿ ಅವಿರೋಧ ಆಯ್ಕೆಯಾಗಿತ್ತು. ಗುಜರಾತ್ ರಾಜ್ಯ ರಚನೆಯಾದ 64 ವರ್ಷಗಳಲ್ಲಿ ಯಾರೂ ಅವಿರೋಧ ಆಯ್ಕೆ ಆಗಿರಲಿಲ್ಲ. ಏಪ್ರಿಲ್ 1980ರಲ್ಲಿ ಬಿಜೆಪಿ ರಚನೆಯಾದ ನಂತರ ಆ ಪಕ್ಷದಿಂದ ಸಂಸತ್ತಿಗೆ ಯಾರೂ ಅವಿರೋಧವಾಗಿ ಆಯ್ಕೆಯಾಗಿರಲಿಲ್ಲ.

35 ವರ್ಷಗಳ ಹಿಂದೆ ನ್ಯಾಷನಲ್ ಕಾನ್ಫರೆನ್ಸ್ ನಾಯಕ ಮೊಹಮ್ಮದ್ ಶಫಿ ಭಟ್ ಅವರು ಸಾರ್ವತ್ರಿಕ ಚುನಾವಣೆಯಲ್ಲಿ ಅವಿರೋಧ ಆಯ್ಕೆಯಾಗಿದ್ದರು. 1989ರಲ್ಲಿ ಶ್ರೀನಗರದಿಂದ ಅವರು ಅವಿರೋಧ ಆಯ್ಕೆಯಾಗಿದ್ದರು.

2012ರಲ್ಲಿ ಸಮಾಜವಾದಿ ಪಕ್ಷದ ಡಿಂಪಲ್ ಯಾದವ್ ಅವರು ಉತ್ತರ ಪ್ರದೇಶದ ಕನ್ನೌಜ್ ಕ್ಷೇತ್ರಕ್ಕೆ ನಡೆದ ಉಪ ಚುನಾವಣೆಯಲ್ಲಿ ಅವಿರೋಧ ಆಯ್ಕೆಯಾಗಿದ್ದರು.

ಚುನಾವಣಾ ಆಯೋಗದ ವೆಬ್ ತಾಣದ ಮಾಹಿತಿಯ ಪ್ರಕಾರ, 1951ರಲ್ಲಿ ನಡೆದ ಮೊದಲ ಚುನಾವಣೆ ನಂತರ ಇದು ವರೆಗೂ 25 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇವರಲ್ಲಿ ಬಹುತೇಕರು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು.

1951ರಲ್ಲಿ ಐವರು, 1957ರಲ್ಲಿ ಏಳು, 1962ರಲ್ಲಿ ಮೂವರು, 1967ರಲ್ಲಿ ಇಬ್ಬರು, 1971ರಲ್ಲಿ ಒಬ್ಬರು, 1977ರಲ್ಲಿ ಇಬ್ಬರು, 1980 ಹಾಗೂ 1989ರಲ್ಲಿ ತಲಾ ಒಬ್ಬರು ಅವಿರೋಧವಾಗಿ ಆಯ್ಕೆಯಾಗಿದ್ದರು. 1980ರಲ್ಲಿ ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ ಅವಿರೋಧವಾಗಿ ಆಯ್ಕೆಯಾಗಿದ್ದರು.

ಅವಿರೋಧ ಆಯ್ಕೆ ಪ್ರಜಾಪ್ರಭುತ್ವದಲ್ಲಿ ಉತ್ತಮ ಬೆಳವಣಿಗೆಯಲ್ಲ ಎಂದು ರಾಜಕೀಯ ಪರಿಣಿತರು ಅಭಿಪ್ರಾಯ ಪಡುತ್ತಾರೆ. ಆದರೆ, ತಾಂತ್ರಿಕ ಹಾಗೂ ರಾಜಕೀಯ ಅನಿವಾರ್ಯತೆಗಳ ಕಾರಣದಿಂದಾಗಿ ಕೆಲವೊಮ್ಮೆ ಅವಿರೋಧ ಆಯ್ಕೆಗಳು ನಡೆಯುತ್ತಿವೆ.

ಸೂರತ್ ಲೋಕಸಭಾ ಕ್ಷೇತ್ರದಲ್ಲಿ ಕಳೆದ ಎರಡು ಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿ ಐದು ಲಕ್ಷಕ್ಕೂ ಹೆಚ್ಚು ಮತಗಳಿಂದ ಆಯ್ಕೆಯಾಗಿದ್ದಾರೆ. ಈ ಬಾರಿಯೂ ಬಿಜೆಪಿಗೆ ದೊಡ್ಡ ಸ್ಪರ್ಧೆಯೇನೂ ಎದುರಾಗಿರಲಿಲ್ಲ ಎಂದು ರಾಜಕೀಯ ವಿಶ್ಲೇಷಕ ಶಿರಿಶ್ ಕಾಶಿಕರ್ ಹೇಳಿದ್ದಾರೆ.

ಈ ಬಾರಿ ತಾಂತ್ರಿಕ ಹಾಗೂ ರಾಜಕೀಯ ಎರಡೂ ಕಾರಣಗಳಿಂದ ಅವಿರೋಧ ಆಯ್ಕೆ ಯಾಗಿದೆ. ಸೂರತ್ ಜಿಲ್ಲಾಧಿಕಾರಿಯೂ ಆಗಿರುವ ಚುನಾವಣಾ ಅಧಿಕಾರಿ ತಾಂತ್ರಿಕ ಕಾರಣದಿಂದ ಕಾಂಗ್ರೆಸ್ ಅಭ್ಯರ್ಥಿ ನಾಮಪತ್ರ ತಿರಸ್ಕರಿಸಿದ್ದಾರೆ. ಸೂಚಕರು ನೈಜವಾಗಿರುವಂತೆ ಕಾಂಗ್ರೆಸ್ ಪಕ್ಷ ನೋಡಿಕೊಳ್ಳಬೇಕಿತ್ತು ಎಂದವರು ತಿಳಿಸಿದ್ದಾರೆ. ಅವಿರೋಧವಾಗಿ ಅಭ್ಯರ್ಥಿಗಳ ಆಯ್ಕೆ ಯಾಗುವುದು ಪ್ರಜಾಪ್ರಭುತ್ವಕ್ಕೆ ದುರಾದೃಷ್ಟಕರ ಎಂದು ರಾಜಕೀಯ ವಿಶ್ಲೇಷಕ ಅಮಿತ್ ಧೊಲಾಕಿಯಾ ಅಭಿಪ್ರಾಯ ಪಟ್ಟಿದ್ದಾರೆ.

ಪ್ರಜಾಪ್ರಭುತ್ವದಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಸ್ಪರ್ಧೆ ನಡೆಸಬೇಕು. ಜನರಿಗೂ ಆಯ್ಕೆಗಳು ಲಭ್ಯವಿರಬೇಕು. ಸೂರತ್ ಗುಜರಾತ್‌ನ ಎರಡನೇ ಅತಿ ದೊಡ್ಡ ನಗರವಾಗಿದೆ. ಈ ಬಾರಿ ಜನರ ಆಯ್ಕೆಗೆ ಅವಕಾಶ ಇಲ್ಲದಂತಾಗಿದೆ ಎಂದು ಧೊಲಾಕಿಯ ಹೇಳಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ನಾಮಪತ್ರ ಭರ್ತಿ ಮಾಡಿರುವ ರೀತಿ ಹಾಗೂ ಅದು ತಿರಸ್ಕೃತಗೊಂಡಿರುವುದನ್ನು ನೋಡಿದರೆ, ಜನರು ಆ ಪಕ್ಷದ ಮೇಲಿರುವ ಭರವಸೆಯೂ ಕುಸಿಯುವಂತಾಗಲಿದೆ ಎಂದೂ ಅವರು ಅಭಿಪ್ರಾಯ ಪಟ್ಟಿದ್ದಾರೆ.

# ನಗರದಲ್ಲಿ ಇಂದು ಕದಳಿ ವೇದಿಕೆಯಿಂದ ಅಕ್ಕಮಹಾದೇವಿ ಜಯಂತ್ಯೋತ್ಸವ

ಕದಳಿ ಮಹಿಳಾ ವೇದಿಕೆ, ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಇವರ ಸಹಯೋಗದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ 152ನೇ ಕದಳಿ ಕಮ್ಮಟದಲ್ಲಿ ಅಕ್ಕಮಹಾದೇವಿ ಜಯಂತಿ ಹಾಗೂ ದತ್ತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಗುರು ಬಸವ ಮಂಟಪದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಕದಳಿ ಮಹಿಳಾ ವೇದಿಕೆ ಜಿಲ್ಲಾ ಘಟಕದ ಅಧ್ಯಕ್ಷರಾದ ಗಾಯತ್ರಿ ವಸ್ತ್ರದ್ ಅಧ್ಯಕ್ಷತೆ ವಹಿಸಲಿದ್ದಾರೆ. ಶ್ರೀಮತಿ ಜಿ.ಎಸ್. ಸುನೀತಾ, ಸೂರ್ಯಪ್ರಭಾ ಸುರೇಶ್ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು.

ರಾಜಶೇಖರಯ್ಯ ಮತ್ತು ಆರ್. ದಯಾನಂದ್ ದತ್ತಿ (ದಾಸೋಹಿಗಳು ಶರಣೆ ಪಂಕಜ ದಯಾನಂದ್), ಮಾಗನೂರು ಭರಮಮ್ಮ ಮತ್ತು ಬಿ.ಸಿ. ಆಲದ ಕಟ್ಟಿ ದತ್ತಿ (ದಾಸೋಹಿ ಶರಣ ಮಾಗನೂರು ಗುರುಪಾದಪ್ಪ) ಕಾರ್ಯಕ್ರಮಗಳು ನಡೆಯಲಿದ್ದು, ಎ.ವಿ.ಕೆ. ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಕವಿತಾ ಆರ್.ಜಿ. ಅಕ್ಕನ ಹೋರಾಟದ ವಿಷಯವಾಗಿ ದತ್ತಿ ಅನುಭಾವ ನೀಡುವರು.

ಕಾರ್ಯಕ್ರಮದಲ್ಲಿ ಕೆ.ಬಿ. ಪರಮೇಶ್ವರಪ್ಪ, ವಿನೋದ ಅಜಗಣ್ಣನವರ ಮಮತಾ ನಾಗರಾಜ್, ಪ್ರಮೀಳಾ ನಟರಾಜ್, ಯಶಾ ದಿನೇಶ್, ಉಪಸ್ಥಿತರಿರು ವರು ಎಂದು ಕದಳಿ ಮಹಿಳಾ ವೇದಿಕೆಯ ಖಜಾಂಚಿ ರತ್ನ ಸಿ. ರೆಡ್ಡಿ ತಿಳಿಸಿದರು.

## ಬರ ಪರಿಹಾರಕ್ಕೆ ಚುನಾವಣಾ ಆಯೋಗದ ಒಪ್ಪಿಗೆ

**(1ನೇ ಪುಟದಿಂದ)** ನಾವು ಒಕ್ಕೂಟ ವ್ಯವಸ್ಥೆ ಹೊಂದಿದ್ದೇವೆ ಎಂದು ಹೇಳಿರುವ ಪೀಠ, ವಿಚಾರಣೆಯನ್ನು ಒಂದು ವಾರ ಮುಂದೂಡಿದೆ.

## ಹಳೇಪೇಟೆ ವೀರಭದ್ರೇಶ್ವರ ಸ್ವಾಮಿ ಗುಗ್ಗುಳ

**(1ನೇ ಪುಟದಿಂದ)** ಅಭಿವೃದ್ಧಿ ಎಂದರು. ಅವರ ಆಡಳಿತಾವಧಿಯಲ್ಲಿ ಜಿಲ್ಲೆಯಲ್ಲಿ ಮಂತ್ರಿಯಾಗಲೂ ಯಾರನ್ನೂ ಬಿಡಲಿಲ್ಲ. ಅವರು ದುಡ್ಡಿನ ಭ್ರಮೆಯಲ್ಲಿ ಗೆಲ್ಲುತ್ತೇವೆ ಎಂದು ಕೊಂಡಿದ್ದಾರೆ. ಆದರೆ ಜನರು ತಕ್ಕ ಉತ್ತರ ನೀಡಲಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

## ಕೊಮಾರನಹಳ್ಳಿ : ಇಂದು ಬ್ರಹ್ಮರಥೋತ್ಸವ

ಮಲೇಬೆನ್ನೂರು ಸಮೀಪದ ಕೊಮಾರನಹಳ್ಳಿಯ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ಬ್ರಹ್ಮರಥೋತ್ಸವವು ಇಂದು ಮಧ್ಯಾಹ್ನ 12 ರಿಂದ 12.30 ರವರೆಗೆ ಜರುಗಲಿದೆ.

# ಮಕ್ಕಳಲ್ಲಿ ಪರಿಸರದ ಜಾಗೃತಿ ಅಗತ್ಯ: ಗಾಯತ್ರಿ ಸಿದ್ದೇಶ್ವರ



ದಾವಣಗೆರೆ, ಏ.22- ಪರಿಸರ ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಪ್ರತಿಯೊಬ್ಬರು ಕಾರ್ಯ ಪ್ರವೃತ್ತರಾಗಬೇಕು. ನಮ್ಮ ಮುಂದಿನ ಪೀಳಿಗೆಗೆ ಶುದ್ಧವಾದ ಗಾಳಿ, ನೀರು ಸಿಗಬೇಕು ಅಂದರೆ ಈಗಿನಿಂದಲೇ ಮಕ್ಕಳಿಗೆ ಪರಿಸರದ ಬಗ್ಗೆ ಜಾಗೃತಿ ಮೂಡಿಸುವ, ಪರಿಸರ ಕೆಲಸದಲ್ಲಿ ಅವರನ್ನು ತೊಡಗಿಸಿಕೊಳ್ಳುವ ಕೆಲಸ ಆಗಬೇಕು ಎಂದು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ತಿಳಿಸಿದರು.

ವಿಶ್ವ ಭೂ ದಿನದ ಹಿನ್ನೆಲೆ ಸ್ಥಳೀಯ ವಿದ್ಯಾನಗರ ಪಾರ್ಕ್ ಹಾಗೂ ಜಿ.ಎಂ.ವಿಶ್ವ ವಿದ್ಯಾಲಯದ ಆವರಣದಲ್ಲಿ ಸಸಿ ನೆಟ್ಟು ಅವರು ಮಾತನಾಡಿದರು.

ಜಾಗತೀಕ ತಾಪಮಾನ ಹೆಚ್ಚಾಗಿ ಇಂದು ಇಡೀ ವಿಶ್ವವೇ ಸಂಕಷ್ಟಕ್ಕೆ ಸಿಲುಕಿದೆ. ಅತಿಯಾದ ಪ್ಲಾಸ್ಟಿಕ್ ಬಳಕೆ, ಕಾಡಿನ ವಿನಾಶ, ಮರಗಳ ಮಾರಣ ಹೋಮದಿಂದ ಇಂದು ಹವಾಮಾನ ವೈಪರೀತ್ಯಗಳಾಗುತ್ತಿವೆ.

ಪರಿಸರದಲ್ಲಿ ಅಸಮತೋಲನ ಉಂಟಾಗಿ ವಿಕೋಪಗಳು ಹೆಚ್ಚಾಗುತ್ತಿವೆ. ಈಗಿನಿಂದಲೇ ನಾವೆಲ್ಲರೂ ಪರಿಸರ ಸಂರಕ್ಷಣೆ ಬಗ್ಗೆ ಜಾಗೃತಿ ವಹಿಸದೇ ಹೋದರೆ ಉತ್ತಮ ಗಾಳಿ, ನೀರು, ವಾತಾವರಣಕ್ಕಾಗಿ ಹೊಡೆದಾಡಬೇಕಾಗುತ್ತದೆ ಎಂದರು.


ಮಾಜಿ ಸಚಿವ ಮುರುಗೇಶ್ ನಿರಾಣಿ ಪತ್ನಿ ಕಮಲಾ ನಿರಾಣಿ, ಸಂಸದ ಜಿ.ಎಂ.ಸಿದ್ದೇಶ್ವರ್ ಪುತ್ರಿ ಜಿ.ಎಸ್.ಅಶ್ವಿನಿ, ಮುಖಂಡರಾದ ಕೆ.ಬಿ. ಕೊಟ್ರೇಶ್, ಪಾಲಿಕೆ ಸದಸ್ಯೆ ಗೀತಾ ದಿಳ್ಯಪ್ಪ, ಜಿ.ಎಂ ವಿಶ್ವವಿದ್ಯಾಲಯದ ಕುಲಪತಿ ಎಸ್.ಆರ್.ಶಂಕ ಪಾಲ್, ಉಪ ಕುಲಪತಿ ಡಾ ಎಚ್.ಡಿ ಮಹೇಶಪ್ಪ, ರಿಜಿಸ್ಟ್ರಾರ್ ಡಾ. ಸುನೀಲ್ ಕುಮಾರ್, ಜಿಎಂಐಟಿ ಪ್ರಾಂಶುಪಾಲ ಡಾ. ಸಂಜಯ್ ಪಾಂಡ್ಯ, ಫರ್ಮಾಸಿ ಪ್ರಾಂಶುಪಾಲ ಗಿರೀಶ್ ಬೋಳಕಟ್ಟೆ, ಹಾಲಮ್ಮ ಪಿಯು ಕಾಲೇಜು ಪ್ರಾಂಶುಪಾಲ ಡಾ.ಓಂಕಾರಪ್ಪ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ರಾಣೇಬೆನ್ನೂರಿನಲ್ಲಿ ಇಂದು ವೀರಾಂಜನೇಯ ಸ್ವಾಮಿ ಪ್ರಾಣ ಪ್ರತಿಷ್ಠಾಪನೆ

### ಗರುಡಗಂಬದ ಉದ್ಘಾಟನೆ

ಶ್ರೀ ಸಿದ್ದಾರೂಢ ನಗರದಲ್ಲಿ ಶ್ರೀ ವೀರಾಂಜನೇಯ ಸ್ವಾಮಿ ಪ್ರಾಣ ಪ್ರತಿಷ್ಠಾಪನೆ, ಆಮೆ ಹಾಗೂ ಗರುಡ ಕಂಬದ ಉದ್ಘಾಟನಾ ಕಾರ್ಯಕ್ರಮ, ಧರ್ಮ ಸಭೆ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ. ಬೆಳಗಿನಿಂದ ರಾತ್ರಿ 9ಗಂಟೆ ವರೆಗೆ ಅನ್ನ ಸಂತರ್ಪಣೆ ಇದೆ. ಸಿದ್ದಾರೂಢ ಮಠದ ಮಲ್ಲಯ್ಯಸ್ವಾಮಿ, ಲಿಂಗದಹಳ್ಳಿ ಶ್ರೀ ವೀರಭದ್ರ ಶಿವಾಚಾರ್ಯರು, ವಿವೇಕಾನಂದಾಶ್ರಮದ ಪ್ರಕಾಶಾನಂದ ಮಹಾರಾಜ, ರಟ್ಟೆಹಳ್ಳಿ ಶ್ರೀ ಶಿವಲಿಂಗ ಶಿವಾಚಾರ್ಯರು, ನಂದಿಗುಡಿ ಸಿದ್ದರಾಮೇಶ್ವರ ಶ್ರೀಗಳು ಭಾಗವಹಿಸುವರು. ಸಂಜೆ ಸ್ವರಾತ್ಮಿಕ ಸಂಗೀತ ಕಾರ್ಯಕ್ರಮ ನಡೆಯಲಿದೆ. ಆರ್.ಎನ್. ಕೆಂಚರೆಡ್ಡಿ ಅಧ್ಯಕ್ಷತೆ ವಹಿಸಲಿದ್ದಾರೆ. ಅತಿಥಿಗಳಾಗಿ ಕೃಷ್ಣಪ್ಪ ಬ್ಯಾಡಗಿ, ಪ್ರಭಾಕರ ಮುದಗಲ್ಲ, ಶ್ರೀ ನಿವಾಸ ಕಾಕಿ ಉಪಸ್ಥಿತರಿರುವರು.

## ಹನುಮಜಯಂತಿ ಪ್ರಯುಕ್ತ ಹನುಮಂತನ ಆರತಿ ಹಾಡು



ಆರತಿ ಬೆಳಗೋಣ ಹನುಮಗೆ ಆರತಿ ಬೆಳಗೋಣ
ಕೀರುತಿ ಪಿಡುತ ಮಾರುತಿ ರಾಯಗೆ ಆರತಿ ಬೆಳಗೋಣ

ಇವನಂತೆ ನಾಮ ಜಪಿಸುವ ಸಂಕಲ್ಪ ಮಾಡೋಣ
ಇವನಂತೆ ನಾವೂ ರಾಮನ ಪಾದಸೇವೆ ಮಾಡೋಣ
ಭವಸಾಗರವ ದಾಟುವುದ ಇವನಿಂದ ಕಲಿಯೋಣ
ನವವಿಧಭಕ್ತಿಯ ಮಾಡುವಗೆ ಶಿರಬಾಗಿ ನಮಿಸೋಣ

ಮಾರುತಿರಾಯನ ಮೂರುತಿಯ ಮನದಲಿ ನಿಲಿಸೋಣ
ಅರುತಿ ಬೆಳಕಲಿ ಹೊಳೆಯುವ ಕಂಗಳ ನೋಡೋಣ
ಸಾರಥಿಯಾಗಿ ಕಾಯ್ದವನ ತೋರಿಸು ಎನ್ನೋಣ
ಕರಮುಗಿದು ಶಿರಬಾಗಿ ಭಕ್ತಿಲಿ ನಮಿಸೋಣ

ತೊಟ್ಟಿಲಲಿ ಹನುಮನ ಮಲಗಿಸಿ ಜೋಗುಳ ಹಾಡೋಣ
ಪುಟ್ಟ ಹನುಮನ ಮುದ್ದು ಮುಖದ ಅಂದವ ನೋಡೋಣ
ಮುಟ್ಟಿ ಅವನ ಪಾದ ಪದ್ಮಕೆ ಹೂಮಾಲೆ ಹಾಕೋಣ
ಕಟ್ಟಿರುವ ಭವಪಾಶವ ಬಿಡಿಸು ಎಂದು ಬೇಡೋಣ

ರಾಮನ ಉಂಗುರ ಕೊಟ್ಟು ಸೀತೆಗೆ ಭರವಸೆ ಕೊಟ್ಟವಗೆ
ತಾಮಸ ದೈತ್ಯರ ಕೊಲ್ಲಲು ಸಾಗರ ಹಾರಿದವನಿಗೆ
ಸಮವಿಲ್ಲದ ರಾಮನ ದಾಸ ನಾನೆಂದು ಹೇಳಿದಗೆ
ಅಮರೇಶ ಬಾಲಗೋಪಾಲವಿಠಲನ ಹೃದಯದಲಿಟ್ಟವಗೆ

**- ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**



## ಉಕ್ಕಡಗಾತ್ರಿಯಲ್ಲಿ ಆಲಿಕಲ್ಲು ಮಳೆ

ಮಲೇಬೆನ್ನೂರು, ಏ.22- ಉಕ್ಕಡಗಾತ್ರಿ ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಸೋಮವಾರ ಸಂಜೆ ಬಿರುಗಾಳಿ ಗುಡುಗು, ಸಿಡಿಲು ಸಹಿತ ಆಲಿಕಲ್ಲು ಮಳೆ ಸುರಿದಿದೆ. ನಂದಿಗುಡಿ, ಗೋವಿನಹಾಳ್, ಹಿಂಡಸಘಟ್ಟ, ಕೊಕ್ಕನೂರು, ಕೆ.ಎನ್.ಹಳ್ಳಿ, ವಾಸನ, ಮಳಲಹಳ್ಳಿ, ಪಾಳ್ಯ, ಎಳೆಹೊಳೆ, ಸಿರಿಗೆರೆಯಲ್ಲೂ ಸಾಧಾರಣ ಮಳೆಯಾಗಿರುವ ಬಗ್ಗೆ ವರದಿಯಾಗಿದೆ. ಜಿ.ಬೇವಿನಹಳ್ಳಿ, ಜಿಗಳಿ, ಕುಂಬಳೂರು, ಮಲೇಬೆನ್ನೂರಿನಲ್ಲಿ ಮಳೆಯ ಸಿಂಚನವಾಗಿದೆ.

## ಎಂ.ಜಿ.ಮಂಜುನಾಥ್ ನಿಧನ



ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್ ಬಡಾವಣೆ, ಬಕ್ಕೇಶ್ವರ ಸ್ಕೂಲ್ ರಸ್ತೆ ನಿವಾಸಿ, ಪತ್ರ ಬರಹಗಾರರಾದ

**ಎಂ.ಜಿ.ಮಂಜುನಾಥ್ (68)**

ಇವರು, ದಿನಾಂಕ 22.04.2024ರ ಸೋಮವಾರ ಸಂಜೆ 4.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 23.04.2024ರ ಮಂಗಳವಾರ ಬೆಳಿಗ್ಗೆ 10.30ಕ್ಕೆ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತರು : ಪತ್ನಿ, ಮಂಜುಳಮ್ಮ, ಪುತ್ರಿ : ನಂದಿತ, ಮಾಗಿ ವಂಶಸ್ಥರು, ಜೋಗಪ್ಪ ಕುಟುಂಬ ವರ್ಗದವರು ಮತ್ತು ಬಂಧು-ಮಿತ್ರರು, ಮೊ : 94480 38267**

## ಕೂಲಂಬಿ : ಅನಸೂಯಮ್ಮ ಮಾಳಕ್ಕಳ್ ನಿಧನ



ದಾವಣಗೆರೆ ಎಸ್.ಎಸ್. ಬಡಾವಣೆ 'ಎ' ಬ್ಲಾಕ್ ನಿವಾಸಿ

**ದಿ. ಹನುಮಂತಪ್ಪ ಮಾಳಕ್ಕಳ್** (ಇಂಜಿನಿಯರ್) ಇವರ ಧರ್ಮಪತ್ನಿ

**ಅನಸೂಯಮ್ಮ ಮಾಳಕ್ಕಳ್**

ಇವರು ದಿನಾಂಕ 22.04.2024ರ ಸೋಮವಾರ ರಾತ್ರಿ 11.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 77 ವರ್ಷ ವಯಸ್ಸಾಗಿತ್ತು.

ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 23.04.2024ರ ಮಂಗಳವಾರ ಮಧ್ಯಾಹ್ನ 2.30 ಕ್ಕೆ ಸ್ವಗ್ರಾಮವಾದ ಹೊನ್ನಾಳಿ ತಾಲ್ಲೂಕಿನ ಕೂಲಂಬಿ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತರು : ಶ್ರೀಮತಿ ರೇಖಾ ಎಂ. ಬಸವರಾಜ್ (ಗುತ್ತಿಗಾದರರು)**
**ಶ್ರೀಮತಿ ಉಷಾ ಡಾ. ಮಾಲತೇಶ್, ಮಾಳಕ್ಕಳ್ ವಂಶಸ್ಥರು, ಕೂಲಂಬಿ**
**ಮೊ : 99017 93229, 70199 59993**

## ಸಿಇಟಿ: ಪಠ್ಯ ಹೊರತಾದ ಪ್ರಶ್ನೆ ಸಂಖ್ಯೆ ಖಚಿತ ಪಡಿಸಿಕೊಳ್ಳಲು ತಜ್ಞರ ಸಮಿತಿ

**(1ನೇ ಪುಟದಿಂದ)** ಎಂದು ಉಲ್ಲೇಖಿಸಿವೆ.

ಅನೇಕ ಪ್ರಶ್ನೆಗಳು ಪಠ್ಯಕ್ರಮದ ಹೊರತಾಗಿರುವ ಕಾರಣ ಇದು ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರಿದೆ ಎಂದು ಕೋರಿರುವ ಮನವಿಗಳು ಸಹ ಸ್ವೀಕೃತವಾಗಿವೆ. ಗ್ರೇಸ್ ಅಂಕಗಳನ್ನು ಒದಗಿಸುವಂತೆ ಅಥವಾ ಮರು ಪರೀಕ್ಷೆ ನಡೆಸುವಂತೆ ಬೇಡಿಕೆಗಳನ್ನೂ ಸಹ ಸಲ್ಲಿಸಲಾಗಿದೆ. ಪ್ರಶ್ನೆಗಳಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕೆಇಎಯು ವಿದ್ಯಾರ್ಥಿಗಳಿಗೆ ಏಪ್ರಿಲ್ 27 ರವರೆಗೆ ಅವಕಾಶ ನೀಡಿದೆ. ಈ ಸಂಬಂಧ ಸರ್ಕಾರಕ್ಕೆ ವಿಸ್ತೃತ ವರದಿ ಸಲ್ಲಿಸುವಂತೆ 'ಕೆಇಎ' ಗೆ ಸೂಚಿಸಲಾಗಿದೆ.

## ಎ.ಐ.ಐ.ಎಂ.ಎಸ್. ವೈದ್ಯಕೀಯ ಮಂಡಳಿಯಿಂದ ಕೇಜ್ರಿ ತಪಾಸಣೆ

ನವದೆಹಲಿ, ಏ. 22 – ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಇನ್ಸುಲಿನ್ ಅಗತ್ಯವಿದೆಯೇ ಹಾಗೂ ಅವರು ಬೇರೆ ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆಯೇ ಎಂಬ ಬಗ್ಗೆ ಪರಿಶೀಲಿಸಲು ಎ.ಐ.ಐ.ಎಂ.ಎಸ್.ನ ವೈದ್ಯಕೀಯ ಮಂಡಳಿಯೊಂದನ್ನು ರಚಿಸಬೇಕು ಎಂದು ದೆಹಲಿ ನ್ಯಾಯಾಲಯ ಆದೇಶಿಸಿದೆ.

ವಿಡಿಯೋ ಮೂಲಕ ವೈದ್ಯರ ಜೊತೆ ಸಮಾಲೋಚನೆ ನಡೆಸಲು ಅವಕಾಶ ನೀಡಬೇಕು ಎಂಬ ಕೇಜ್ರಿವಾಲ್ ಮನವಿ ತಳ್ಳಿ ಹಾಕಿರುವ ಸಿ.ಬಿ.ಐ. ಹಾಗೂ ಇ.ಡಿ. ಪ್ರಕರಣಗಳ ವಿಶೇಷ ನ್ಯಾಯಮೂರ್ತಿ ಕಾವೇರಿ ಬಾವೇಜಾ, ವೈದ್ಯಕೀಯ ಮಂಡಳಿ ಮೂಲಕ ಆರೋಗ್ಯ ತಪಾಸಣೆಗೆ ಆದೇಶಿಸಿದ್ದಾರೆ.

ಜೈಲಿನಲ್ಲಿ ತಮಗೆ ಇನ್ಸುಲಿನ್ ನೀಡುತ್ತಿಲ್ಲ. ರಕ್ತದಲ್ಲಿನ ಸಕ್ಕರೆ ಮಟ್ಟ ಅಪಾಯಕಾರಿಯಾಗಿ ಹೆಚ್ಚಾಗಿದೆ ಎಂದು ಕೇಜ್ರಿವಾಲ್ ಶುಕ್ರವಾರ ಆರೋಪಿಸಿದ್ದರು.

## ಪೂಜಾರ್ ನಾಗಪ್ಪ ನಿಧನ



ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದ ವಾಸಿ

**ಗುಡಿ ಹಿಂದ್ಲರ ಪೂಜಾರ್ ನಾಗಪ್ಪನವರು**

ಅವರು ದಿನಾಂಕ : 22.04.2024ರ ಸೋಮವಾರ ರಾತ್ರಿ 9 ಗಂಟೆಗೆ ದೈವಾಧೀನರಾದರು. ಮೃತರಿಗೆ 68 ವರ್ಷ ವಯಸ್ಸಾಗಿತ್ತು. ನಾಲ್ವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 23.04.2024ರ ಮಂಗಳವಾರ ಮಧ್ಯಾಹ್ನ 12ಕ್ಕೆ ಸ್ವಗ್ರಾಮವಾದ ದೊಡ್ಡಬಾತಿ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ : 98864 92238**

# ಮತ್ತೊಮ್ಮೆ ನರೇಂದ್ರ ಮೋದಿ ಪ್ರಧಾನಿ ಮಾಡಲು ಕಾರ್ಯಕರ್ತರು ಬಿಜೆಪಿ ಅಭ್ಯರ್ಥಿ ಗೆಲುವಿಗೆ ಶ್ರಮಿಸಬೇಕು



### ಹರಪನಹಳ್ಳಿಯಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಚನ್ನಬಸವನಗೌಡ ಪಾಟೀಲ್

ಹರಪನಹಳ್ಳಿ, ಏ.22- ನರೇಂದ್ರ ಮೋದಿಯವರನ್ನು ಮತ್ತೊಮ್ಮೆ ಪ್ರಧಾನಿ ಮಾಡಲು ಬಿಜೆಪಿ ಕಾರ್ಯಕರ್ತರು ಪಕ್ಷದ ಅಭ್ಯರ್ಥಿ ಗೆಲುವಿಗೆ ಶ್ರಮಿಸಬೇಕೆಂದು ವಿಜಯನಗರ ಜಿಲ್ಲಾ ಬಿಜೆಪಿ ಅಧ್ಯಕ್ಷ ಚನ್ನಬಸವನಗೌಡ ಪಾಟೀಲ್ ತಿಳಿಸಿದರು.

ಪಟ್ಟಣದ ಕೊಟ್ಟೂರು ರಸ್ತೆಯ ಚಿನ್ನಾರಿ ಆಸ್ಪತ್ರೆಯ ಕಟ್ಟಡದ ಬಳಿಯಿರುವ ನೂತನ ಬಿಜೆಪಿ ಕಚೇರಿಯಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯಿತ್ರಿ ಸಿದ್ದೇಶ್ವರವರ ಪರವಾಗಿ ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಕೆಲಸ ಮಾಡಿ ಹರಪನಹಳ್ಳಿ ತಾಲ್ಲೂಕಿನಿಂದ ಹೆಚ್ಚು ಮತಗಳನ್ನು ಹಾಕಿಸಿ, ಹಾರಿಸಿ ತರಬೇಕೆಂದು ಕರೆ ನೀಡಿದರು.

ನರೇಂದ್ರ ಮೋದಿಯವರನ್ನು ಅಧಿಕಾರದಿಂದ ದೂರ ಇಡಲು ಕಾಂಗ್ರೆಸ್ ಜೊತೆ ಕೆಲ ವಿರೋಧ ಪಕ್ಷಗಳು ಸೇರಿಕೊಂಡಿವೆ. ತಮ್ಮ ಆಸ್ತಿ, ಸಂಪತ್ತನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಈ ಪ್ರಯತ್ನ ಮಾಡುತ್ತಿದ್ದಾರೆ ಎಂದು ದೂರಿದರು.

ವಿರೋಧ ಪಕ್ಷಗಳು ತಮ್ಮ ಸ್ವ-ಹಿತಕ್ಕಾಗಿ ನರೇಂದ್ರ ಮೋದಿಯವರ ಸೋಲನ್ನು ಬಯಸಿದರೆ ಬಿಜೆಪಿ ದೇಶದ ರಕ್ಷಣೆ, ಭದ್ರತೆ ಹಾಗೂ ಅಭಿವೃದ್ಧಿಗಾಗಿ ಮೋದಿಯವರನ್ನು ಮತ್ತೊಮ್ಮೆ ಪ್ರಧಾನಿ ಮಾಡಲು ಬಯಸುತ್ತಿದೆ ಇದು ಬಿಜೆಪಿ ಮತ್ತು ವಿರೋಧ ಪಕ್ಷ ಕಾಂಗ್ರೆಸ್‌ಗಿರುವ ವ್ಯತ್ಯಾಸ ಎಂದು ಹೇಳಿದರು.

ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಮೇಲೆ ದೇಶದ ಆರ್ಥಿಕ ಸ್ಥಿತಿ 5ನೇ ಸ್ಥಾನಕ್ಕೆ ಬಂದಿದೆ. ಇದು ಪ್ರಧಾನಿ ಮೋದಿಯವರಿಂದ ಸಾಧ್ಯವಾಗಿದೆ. ಇನ್ನು ಕೆಲವೇ ದಿನಗಳಲ್ಲಿ ಭಾರತದ ಆರ್ಥಿಕತೆ 3ನೇ ಸ್ಥಾನಕ್ಕೆ ಬರಲಿದೆ ಎಂದ ಅವರು 2047ಕ್ಕೆ ಭಾರತ ವಿಶ್ವದ ನಂಬರ್-1 ದೇಶವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ತಾಲ್ಲೂಕು ಅಧ್ಯಕ್ಷ ಕೆ.ಲಕ್ಷ್ಮಣ್, ಪುರಸಭೆ ಮಾಜಿ ಅಧ್ಯಕ್ಷ ಹೆಚ್.ಎಂ.ಅಶೋಕ್, ಮುಖಂಡರಾದ ಜಿ. ನಂಜನಗೌಡ, ಆರುಂಡಿ ನಾಗರಾಜ್, ಬಾಗಳಿ ಕೊಟ್ರೇಶಪ್ಪ, ಎಂ.ಪಿ.ನಾಯ್ಕ್, ಕಣಿವಿಹಳ್ಳಿ ಮಂಜುನಾಥ್, ಮಂಜ್ಯಾನಾಯ್ಕ್, ಸತ್ತೂರು ಹಾಲೇಶ್, ಮುತ್ತಿಗಿ ವಾಗೀಶ್, ಮುದಕವನವರ್ ಶಂಕರ್, ಬಿ,ವೈ.ವೆಂಕಟೇಶ್, ಚನ್ನನಗೌಡ, ಓಂಕಾರಗೌಡ, ಉದಯ ಕುಮಾರ್, ಕಡತಿ ರಮೇಶ್, ಬೂದಿ ನವೀನ್, ಮಹಿಳಾ ಮೋರ್ಚಾ ಅಧ್ಯಕ್ಷೆ ಸ್ವಪ್ನ ಮಲ್ಲಿಕಾರ್ಜುನ್, ಕುಸುಮ ಜಗದೀಶ್, ರೇಖಾ ಸೇರಿದಂತೆ ಇತರರು ಇದ್ದರು.

## ನಿವೃತ್ತ ಅಂಗನವಾಡಿ ಶಿಕ್ಷಕಿ ಮಂಜುಳ ನಿಧನ



ದಾವಣಗೆರೆ ಎಸ್‌ಓಜಿ ಕಾಲೋನಿ ನಿವಾಸಿ #190, 'ಬಿ' ಬ್ಲಾಕ್, 5ನೇ ಕ್ರಾಸ್ ವಾಸಿ ನಿವೃತ್ತ ಅಂಗನವಾಡಿ ಶಿಕ್ಷಕಿ ಮಂಜುಳ (67) ಇವರು ದಿನಾಂಕ 22.04.2024ರ ಸೋಮವಾರ ಬೆಳಿಗ್ಗೆ ನಿಧನರಾದರು. ಸಹೋದರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 23.04.2024ರ ಮಂಗಳವಾರ ಮಧ್ಯಾಹ್ನ 12 ಕ್ಕೆ ಕೆಎಸ್‌ಆರ್‌ಟಿಸಿ ಡಿಪೋ ಪಕ್ಕದ ರುದ್ರಭೂಮಿಯಲ್ಲಿ ನೆರವೇರಲಿದೆ.

## ಜಿಗಳಿ ಗ್ರಾಮದ ಮಲ್ಲಮ್ಮ ನಿಧನ



ಹರಿಹರ ತಾಲ್ಲೂಕು ಜಿಗಳಿ ಗ್ರಾಮದ ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಡಿ.ಹೆಚ್. ಮಂಜುನಾಥ್ ಅವರ ಸಹೋದರ ಡಿ.ಹೆಚ್. ಮಹಾದೇವಪ್ಪನವರ ಧರ್ಮಪತ್ನಿ ಶ್ರೀಮತಿ ಮಲ್ಲಮ್ಮ (55 ವರ್ಷ) ಇವರು ದಿನಾಂಕ 22.04.2024ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ನಿಧನರಾದರು. ಪತಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 23.04.2024ರ ಮಂಗಳವಾರ ಬೆಳಿಗ್ಗೆ 12ಗಂಟೆಗೆ ಜಿಗಳಿಯಲ್ಲಿ ನೆರವೇರಲಿದೆ.

## ಡಿ.ಆರ್. ಮಂಜುಳಮ್ಮ ನಿಧನ



ದಾವಣಗೆರೆ ಸಿಟಿ, ಸರಸ್ವತಿ ಬಡಾವಣೆ, 2ನೇ ಮೇನ್, 4ನೇ ಕ್ರಾಸ್ ವಾಸಿ ಡಿ.ಆರ್. ಮಂಜುಳಮ್ಮ ದೊಡ್ಡಸಿದ್ದವ್ವನಹಳ್ಳಿ (82) ಇವರು ದಿನಾಂಕ 22.04.2024ನೇ ಸೋಮವಾರ ಮಧ್ಯಾಹ್ನ 2.10ಕ್ಕೆ ನಿಧನರಾದರು. ಓರ್ವ ಪುತ್ರ, ಓರ್ವ ಪುತ್ರಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 23.04.2024ರ ಮಂಗಳವಾರ ಬೆಳಿಗ್ಗೆ 11.30ಕ್ಕೆ ನಗರದ ಎಸ್.ಎಸ್. ಆಸ್ಪತ್ರೆ ಹಿಂಭಾಗ, ರಾಮನಗರ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

## ಮೋದಿ ವಿರುದ್ಧ ಕಾಂಗ್ರೆಸ್ ದೂರು

**(1ನೇ ಪುಟದಿಂದ)** ಪ್ರಣಾಳಿಕೆಯ ಪ್ರತಿಯನ್ನು ಪ್ರಧಾನ ಮಂತ್ರಿಗೆ ಕಳಿಸಲಿದ್ದೇವೆ ಎಂದೂ ಅವರು ಹೇಳಿದರು.

ನಮ್ಮ ಪ್ರಣಾಳಿಕೆಯಲ್ಲಿ ಇಲ್ಲದೇ ಇರುವುದನ್ನು ಪ್ರಧಾನಿ ಹೇಳಿದ್ದಾರೆ. ಚುನಾವಣಾ ಲಾಭಕ್ಕಾಗಿ ಕೋಮು ಧೃವೀಕರಣದ ಪ್ರಯತ್ನ ನಡೆಸಿದ್ದಾರೆ ಎಂದು ವೇಣುಗೋಪಾಲ್ ಆರೋಪಿಸಿದರು. ಎಲ್ಲ ವಿಷಯಗಳಲ್ಲಿ ಮಧ್ಯ ಪ್ರವೇಶಿಸುವ ಚುನಾವಣಾ ಆಯೋಗ ಈ ವಿಷಯದಲ್ಲಿ ಮೌನವಾಗಿದೆ. ಪ್ರಧಾನ ಮಂತ್ರಿ ಎಲ್ಲದರ ಬಗ್ಗೆ ಸುಳ್ಳು ಹೇಳಲು ಆಯೋಗ ಅನುಮತಿ ನೀಡಿದೆಯೇ? ಎಂದೂ ಅವರು ಪ್ರಶ್ನಿಸಿದ್ದಾರೆ.

## ನಗರದ ಅಕ್ಕಮಹಾದೇವಿ ಸಮಾಜದಲ್ಲಿ ಇಂದು ಅಕ್ಕಮಹಾದೇವಿ ಜಯಂತ್ಯೋತ್ಸವ



ಅಕ್ಕಮಹಾದೇವಿ ಸಮಾಜ ವತಿಯಿಂದ ಅಕ್ಕಮಹಾದೇವಿ ಜಯಂತ್ಯೋತ್ಸವ ಹಾಗೂ ವಚನೋತ್ಸವ ಕಾರ್ಯಕ್ರಮವು ಶ್ರೀಮತಿ ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪದಲ್ಲಿ ಇಂದು ಸಂಜೆ ನಡೆಯಲಿದೆ.

ಸಂಜೆ 6 ಗಂಟೆಗೆ ನಡೆಯುವ ಸಭಾ ಕಾರ್ಯಕ್ರಮದ ಸಾನ್ನಿಧ್ಯವನ್ನು ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ಬ್ರಹ್ಮಾಕುಮಾರಿ ರಾಜಯೋಗಿನಿ ಲೀಲಾಜಿ ವಹಿಸಲಿದ್ದು, ಸಮಾಜದ ಅಧ್ಯಕ್ಷರಾದ ಕಂಚಿಕೇರಿ ಸುಶೀಲಮ್ಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಡಾ. ಶ್ರೀಮತಿ ಅನುರಾಧ ಬಕ್ಕಪ್ಪ ಉಪಸ್ಥಿತರಿರು ವರು. ಸಮಾಜದ ಉಪಾಧ್ಯಕ್ಷ ರಾದ ಜಯಮ್ಮ ನೀಲಗುಂದ ಪ್ರಾಸ್ತಾವಿಕ ನುಡಿಗಳ್ನಾಡಿದರು.

ಇದೇ ಸಂದರ್ಭದಲ್ಲಿ ಶ್ರೀ ಅಕ್ಕಮಹಾದೇವಿ ವಧು-ವರರ ಅನ್ವೇಷಣೆ ಕೇಂದ್ರದ ಖಜಾಂಚಿ ಶ್ರೀಮತಿ ಮಾಗಾನಹಳ್ಳಿ ರತ್ನಮ್ಮ ಅವರಿಗೆ ಅಕ್ಕ ಪ್ರಶಸ್ತಿ ನೀಡಿ ಪುರಸ್ಕರಿಸಲಾಗುವುದು. ಅಕ್ಕಮಹಾದೇವಿ ಸಮಾಜದ ಕಾರ್ಯಕಾರಿ ಸಮಿತಿ ಸದಸ್ಯ ರಾದ ಶ್ರೀಮತಿ ಶೋಭಾ ಸಂಜಯ್ ಕಣವಿ ಅವರು ಪ್ರಶಸ್ತಿ ಪುರಸ್ಕೃತ ನುಡಿಗಳನ್ನಾಡುವರು.

## ವೊಡಫೋನ್ ಎಫ್.ಪಿ.ಒ. ಬೇಡಿಕೆ 6 ಪಟ್ಟು ಹೆಚ್ಚಳ

ನವದೆಹಲಿ, ಏ. 22 – ಸಾಂಸ್ಥಿಕ ಹೂಡಿಕೆದಾರರ ಕಾರಣದಿಂದಾಗಿ ವೊಡಫೋನ್ ಐಡಿಯಾದ ಎಫ್.ಪಿ.ಒ. ಬೇಡಿಕೆ ಪ್ರಸ್ತಾಪಿತ ಷೇರುಗಳಿಗಿಂತ ಆರು ಪಟ್ಟು ಹೆಚ್ಚಾಗಿದೆ. ಒಟ್ಟಾರೆ 8,011.29 ಕೋಟಿ ಷೇರುಗಳ ಬೇಡಿಕೆ ಬಂದಿದೆ. 18,000 ಕೋಟಿ ರೂ.ಗಳ ಮೌಲ್ಯದ ಎಫ್.ಪಿ.ಒ.ಗೆ ಪ್ರಸ್ತಾಪಿಸಲಾಗಿತ್ತು. ಪ್ರಸ್ತಾವನೆಗಿಂತ ಬೇಡಿಕೆ 6.99 ಪಟ್ಟು ಹೆಚ್ಚಾಗಿದೆ. ಪ್ರತಿ ಷೇರಿನ ಬೆಲೆ 10-11 ರೂ.ಗಳ ಹಂತದಲ್ಲಿದೆ. ಇದು ಷೇರುಪೇಟೆಯಲ್ಲಿ ಮಾರಾಟವಾಗುತ್ತಿರುವ ದರಕ್ಕಿಂತ ಕಡಿಮೆಯಾಗಿದೆ.

# ಸಮಾನವಾಗಿ ಆಸ್ತಿ ಹಂಚಿಕೆಯಾಗುವುದು ಸಾಮಾಜಿಕ ನ್ಯಾಯ ಪ್ರಧಾನಿ ಹೇಳಿಕೆ ಅವರ ಸ್ಥಾನಕ್ಕೆ ಅಗೌರವ ತರುವಂಥದ್ದು

ಬೆಂಗಳೂರು, ಏ. 22 - ಹಿಂದೂಗಳ ಮಂಗಳಸೂತ್ರವನ್ನು ತೆಗೆದು ಮುಸ್ಲಿಮರಿಗೆ ನೀಡುತ್ತಾರೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳುವುದು ಅವರ ಸ್ಥಾನಕ್ಕೆ ಅಗೌರವ ತರುವಂಥ ಮಾತುಗಳು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಸಿದ್ದರಾಮಯ್ಯ, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಸಮಾನ ಆಸ್ತಿ ಹಂಚಿಕೆ ಮಾಡುತ್ತಾರೆ, ಮಹಿಳೆಯರ ಮಾಂಗಲ್ಯವನ್ನು ಮುಸ್ಲಿಮರಿಗೆ ಕೊಡುತ್ತಾರೆ ಎಂದು ಪ್ರಧಾನಮಂತ್ರಿ ಆರೋಪ ಮಾಡಿರುವ ಬಗ್ಗೆ ಈ ಪ್ರತಿಕ್ರಿಯೆ ನೀಡಿದ್ದಾರೆ.

ಪ್ರಧಾನಿಯಾಗಿ ಅವರು ಇಷ್ಟು ಕೆಳಮಟ್ಟದಲ್ಲಿ ಮಾತನಾಡಬಾರದಿತ್ತು, ದೇಶದ ಪ್ರಧಾನಮಂತ್ರಿಯಾಗಿ ಎಲ್ಲಾ ಜನಾಂಗವನ್ನು ಸಮಾನವಾಗಿ ನೋಡಿಕೊಳ್ಳುವ ಕರ್ತವ್ಯ ಅವರದ್ದು. ಇಂಥ ಮಾತುಗಳು ಅವರಿಗೆ ಶೋಭೆ ತರುವುದಿಲ್ಲ ಎಂದರು.

ಸಮಾನವಾಗಿ ಆಸ್ತಿ ಹಂಚಿಕೆಯಾಗುವುದು ಸಾಮಾಜಿಕ ನ್ಯಾಯ. ಸಮಸಮಾಜ ನಿರ್ಮಾಣವಾಗ ಬೇಕಾದರೆ ಎಲ್ಲರೂ ಮುಖ್ಯವಾಹಿನಿಗೆ ಬರಬೇಕು. ಕೆಲವೇ ಜನರ ಕೈಯಲ್ಲಿ ಅಧಿಕಾರ, ಸಂಪತ್ತು ಇದ್ದರೆ ಇದು ಆಗುವುದಿಲ್ಲ ಎಂದರು.



ಕಾಂಗ್ರೆಸ್ ಜಾಹೀರಾತಿಗೆ ಪ್ರತಿಯಾಗಿ ಬಿಜೆಪಿಯವರು ಕಾಂಗ್ರೆಸ್ ಡೇಂಜರ್ ಎಂಬ ಜಾಹೀರಾತು ಬಿಡುಗಡೆ ಮಾಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಹೆಣ್ಣುಮಕ್ಕಳಿಗೆ ಉಚಿತ ಬಸ್ ಸೌಲಭ್ಯ, ಉಚಿತ ವಿದ್ಯುತ್, ಅನ್ನಭಾಗ್ಯ ಯೋಜನೆಗಳು ಡೇಂಜರ್ ಆಗುತ್ತವೆಯೇ? ಸಮಾಜವನ್ನು ಒಡೆಯುವಂತಹ ಕಾರ್ಯಗಳು, ಮತಗಳ ಧ್ರುವೀಕರಣ ಮಾಡುವುದು ಅಪಾಯಕಾರಿಯೇ ಹೊರತು, ವಿವಿಧತೆಯಲ್ಲಿ ಏಕತೆಯನ್ನು ತರುವುದು ಡೇಂಜರ್ ಅಲ್ಲ. ದೇಶಕ್ಕೆ ಬಿಜೆಪಿ ಪಕ್ಷವೇ ಡೇಂಜರ್ ಹೊರತು, ಕಾಂಗ್ರೆಸ್ ಪಕ್ಷ ಅಲ್ಲ ಎಂದು ತಿಳಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಇದ್ದರೆ, ಭ್ರಷ್ಟಾಚಾರ ಹೆಚ್ಚಾಗಲಿದೆ ಎಂಬ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿ, ಕಾನೂನು ಪ್ರಕಾರ ರೇಡ್ ಮಾಡುವುದನ್ನು ನಾವು ಎಂದೂ ವಿರೋಧಿಸುವುದಿಲ್ಲ. ಬಿಜೆಪಿಯಲ್ಲಿ ಶ್ರೀಮಂತರಿಲ್ಲವೇ? ಯಡಿಯೂರಪ್ಪ, ವಿಜಯೇಂದ್ರ ಭ್ರಷ್ಟಾಚಾರ ಮಾಡಿಲ್ಲವೇ? ಶೋಭಾ ಕರಂದ್ಲಾಜೆ, ಅಶೋಕ್, ಬಸವರಾಜ್ ಬೊಮ್ಮಾಯಿ ಸೇರಿದಂತೆ ಬಿಜೆಪಿಯವರ ಮೇಲೆ ರೇಡ್‌ಗಳು ಏಕೆ ಆಗುತ್ತಿಲ್ಲ? ಆದಾಯ ತೆರಿಗೆಯನ್ನು ಸರಿಯಾಗಿ ಪಾವತಿಸದವರ ಮೇಲೆ ಕ್ರಮವಾಗಲಿ, ಆದಾಯ ಮೀರಿ ಆಸ್ತಿ ಸಂಪಾದಿಸಿದ ಎಲ್ಲರ ಮೇಲೂ ಕಾನೂನು ಕ್ರಮವಾಗಬೇಕು ಎಂದರು.

ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ರಾಜ್ಯದ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂಬ ಆರೋಪ ಸರಿಯಲ್ಲ, 2022ಕ್ಕೆ ಹೋಲಿಸಿದರೆ ಕಾಂಗ್ರೆಸ್ ಸರ್ಕಾರವಿದ್ದಾಗಲೇ ಅಪರಾಧಗಳು ಕಡಿಮೆಯಾಗಿವೆ. 2023ರಲ್ಲಿ 1,295 ಅಪರಾಧ ಪ್ರಕರಣಗಳು ನಡೆದಿದ್ದರೆ, ಬಿಜೆಪಿ ಆಡಳಿತ ಕಾಲ 2022ರಲ್ಲಿ 1,370 ಪ್ರಕರಣಗಳು ನಡೆದಿವೆ ಎಂದರು.

## ಮೋದಿ ಹೇಳಿಕೆ ವಿರುದ್ಧ ಪೊಲೀಸರಲ್ಲಿ ಸಿಪಿಐ (ಎಂ) ದೂರು

ನವದೆಹಲಿ, ಏ. 22 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ರಾಜಸ್ಥಾನದಲ್ಲಿ ಆಸ್ತಿ ಹಂಚಿಕೆ ಕುರಿತು ನೀಡಿರುವ ಹೇಳಿಕೆಯ ವಿರುದ್ಧ ಸಿಪಿಐ (ಎಂ) ದೆಹಲಿ ಪೊಲೀಸ್ ಮುಖ್ಯಸ್ಥರಿಗೆ ದೂರು ಸಲ್ಲಿಸಿದೆ.

ಮೋದಿ ವಿರುದ್ಧ ದೂರು ಸಲ್ಲಿಸಲು ಸಿಪಿಐ (ಎಂ) ನಾಯಕರಾದ ಬೃಂದಾ ಕಾರಟ್ ಹಾಗೂ ಪುಷ್ಪಿಂದ್ರ ಸಿಂಗ್ ಗ್ರೆವಾಲ್ ಅವರು ಮಂದಿರ್ ಮಾರ್ಗ್ ಠಾಣೆಗೆ ತೆರಳಿದ್ದರು. ಆದರೆ, ಅಲ್ಲಿನ ಠಾಣಾಧಿಕಾರಿ ಮೋದಿ ವಿರುದ್ಧ ದೂರು ದಾಖಲಿಸಿಕೊಳ್ಳಲು ನಿರಾಕರಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ದೆಹಲಿ ಪೊಲೀಸ್ ಆಯುಕ್ತರನ್ನು ಭೇಟಿ ಮಾಡಿ ದೂರು ಸಲ್ಲಿಸಲಾಗಿದೆ ಎಂದು ಪಕ್ಷ ತಿಳಿಸಿದೆ. ಚುನಾವಣಾ ಆಯೋಗ ಸಹ ದೂರನ್ನು ಪರಿಗಣಿಸಬೇಕು ಹಾಗೂ ಮೋದಿ ಮತ್ತು ಬಿಜೆಪಿ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಸಿಪಿಐ (ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಒತ್ತಾಯಿಸಿದ್ದಾರೆ.

## ಗೋವಾದ ಮೇಲೆ ಭಾರತದ ಸಂವಿಧಾನ ಹೇರಿಕೆ

**ಕಾಂಗ್ರೆಸ್ ಅಭ್ಯರ್ಥಿ ಫರ್ನಾಂಡೀಸ್**

ಪಣಜಿ, ಏ. 22 – ಗೋವಾ ಮೇಲೆ ಭಾರತದ ಸಂವಿಧಾನವನ್ನು ಬಲವಂತವಾಗಿ ಹೇರಲಾಗಿತ್ತು. ಗೋವಾದ ಭವಿಷ್ಯವನ್ನು ಇಲ್ಲಿನ ಜನರು ನಿರ್ಧರಿಸುವ ಬದಲು, ಬೇರೆಯವರು ನಿರ್ಧರಿಸಿದ್ದಾರೆ ಎಂದು ದಕ್ಷಿಣ ಗೋವಾ ಕಾಂಗ್ರೆಸ್ ಅಭ್ಯರ್ಥಿ ವಿರಿಯಟೋ ಫರ್ನಾಂಡೀಸ್ ಹೇಳಿದ್ದಾರೆ.

ಚುನಾವಣಾ ಸಭೆಯಲ್ಲಿ ಮಾತನಾಡಿದ ಫರ್ನಾಂಡೀಸ್, ಗೋವಾ ತನ್ನ ಭವಿಷ್ಯವನ್ನು ತಾನೇ ನಿರ್ಧರಿಸಲಿದೆ ಎಂದು ಆಗಿನ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರು ಹೇಳಿದ್ದರು. ಆದರೆ, ಆ ರೀತಿ ಆಗಲಿಲ್ಲ ಎಂದಿದ್ದಾರೆ.

ಗೋವಾ ಮೊದಲು ಪೋರ್ಚುಗೀಸರ ವಶದ ಲ್ಲಿತ್ತು. ಅದನ್ನು ವಿಮೋಚನೆ ಗೊಳಿಸಿ ಭಾರತದಲ್ಲಿ ವಿಲೀನಗೊಳಿಸಲಾಗಿತ್ತು. ಗೋವಾದವರಿಗೆ ಭಾರತ ಹಾಗೂ ಪೋರ್ಚುಗೀಸ್‌ಗಳ ದ್ವಿಪೌರತ್ವದ ಆಯ್ಕೆ ನೀಡಬೇಕು ಎಂದು ಫರ್ನಾಂಡೀಸ್ ಬೇಡಿಕೆ ಇಟ್ಟಿದ್ದಾರೆ.

ಫರ್ನಾಂಡೀಸ್ ಅವರು ದ್ವಿಪೌರತ್ವದ ಬೇಡಿಕೆಗೆ ಆಗ್ರಹಿಸುವ ಗೋವಾಂಚೋ ಅವೇ ಎಂಬ ಸರ್ಕಾರತೇರ ಸಂಘಟನೆಯ ಭಾಗವಾಗಿದ್ದರು.

ಭಾರತದ ಸಂವಿಧಾನ ಜನವರಿ 26, 1950ರಲ್ಲಿ ಜಾರಿಗೆ ಬಂದಿತ್ತು. 1961ರಲ್ಲಿ ಪೋರ್ಚುಗೀಸ್ ಆಡಳಿತದಿಂದ ಗೋವಾ ವಿಮೋಚನೆಗೊಳಿಸಲಾಗಿತ್ತು. ಆಗಿನ ಸರ್ಕಾರ ನಮ್ಮ ಮೇಲೆ ಸಂವಿಧಾನ ಹೇರಿತ್ತು. ಈ ವಿಷಯದಲ್ಲಿ ನಮ್ಮ ಅಭಿಪ್ರಾಯ ಪಡೆದಿರಲಿಲ್ಲ ಎಂದು ಫರ್ನಾಂಡೀಸ್ ಹೇಳಿದ್ದಾರೆ. ಗೋವಾ ತನ್ನ ಭವಿಷ್ಯ ತಾನೇ ನಿರ್ಧರಿಸಲಿದೆ ಎಂದು ಆಗಿನ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರು ಹೇಳಿದ್ದರು. ಆದರೆ, ನಮ್ಮ ಭವಿಷ್ಯವನ್ನು ಬೇರೊಬ್ಬರು ನಿರ್ಧರಿಸಿದ್ದಾರೆ ಎಂದೂ ಫರ್ನಾಂಡೀಸ್ ತಿಳಿಸಿದ್ದಾರೆ.

ಈ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಗೋವಾದ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ಗೋವಾ ಭಾರತದ ಅವಿಭಾಜ್ಯ ಅಂಗ ಎಂದು ನಮ್ಮ ಸ್ವಾತಂತ್ರ್ಯ ಹೋರಾಟಗಾರರು ನಂಬಿದ್ದರು. ಕಾಂಗ್ರೆಸ್ ಪಕ್ಷ ಗೋವಾ ವಿಮೋಚನೆ 14 ವರ್ಷ ಕಾಲ ವಿಳಂಬ ಮಾಡಿತ್ತು. ಈಗ ಅದರ ಅಭ್ಯರ್ಥಿ ನಮ್ಮ ಸಂವಿಧಾನ ಕಡೆಗಣಿಸುವ ದಾಷ್ಟ್ಯ ತೋರುತ್ತಿದ್ದಾರೆಯೇ? ಎಂದು ಪ್ರಶ್ನಿಸಿದ್ದಾರೆ.

ಕಾಂಗ್ರೆಸ್ ಪಕ್ಷ ತನ್ನ ಭಾರತ್ ತೋಡೋ ರಾಜಕೀಯ ತಕ್ಷಣ ತಡೆಯಬೇಕು. ಕಾಂಗ್ರೆಸ್‌ನಿಂದ ಪ್ರಜಾಪ್ರಭುತ್ವಕ್ಕೆ ಬೆದರಿಕೆ ಇದೆ ಎಂದೂ ಅವರು ಹೇಳಿದ್ದಾರೆ.

## ನಕ್ಸಲರ ಸ್ಫೋಟಕದಿಂದ ವ್ಯಕ್ತಿ ಸಾವು

ಬಿಜಾಪುರ, ಏ. 22 - ಛತ್ತೀಸ್‌ಘಡದ ಬಿಜಾಪುರ ಜಿಲ್ಲೆಯಲ್ಲಿ ನಕ್ಸಲರು ಅಳವಡಿಸಿದ್ದ ಸುಧಾರಿತ ಸ್ಫೋಟಕಕ್ಕೆ ಸಿಲುಕಿ 18 ವರ್ಷದ ವ್ಯಕ್ತಿಯೊಬ್ಬರು ಸಾವನ್ನಪ್ಪಿದ್ದಾರೆ.

ಮುತ್ವೆಂಡಿ ಎಂಬ ಹಳ್ಳಿಯಲ್ಲಿ ಈ ಸ್ಫೋಟ ಸಂಭವಿಸಿದೆ. ಅರಣ್ಯಕ್ಕೆ ತೆರಳಿದ್ದ ಗಡಿಯ ಎಂಬ ವ್ಯಕ್ತಿ ಸ್ಫೋಟಕದ ಮೇಲೆ ಕಾಲಿಟ್ಟಾಗ, ಅದು ಸಿಡಿದಿದೆ. ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಭದ್ರತಾ ಸಿಬ್ಬಂದಿಯನ್ನು ಗುರಿಯಾಗಿಟ್ಟುಕೊಂಡು ನಕ್ಸಲರು ಸ್ಫೋಟಕ ಅಳವಡಿಸಿದ್ದರು. ಇಂತಹ ಸ್ಫೋಟಕಗಳಿಗೆ ಸಿಲುಕಿ ಗ್ರಾಮಸ್ಥರೂ ಸಾವನ್ನಪ್ಪಿದ ಹಲವು ಘಟನೆಗಳು ನಡೆದಿವೆ.

# 70 ವರ್ಷಗಳಲ್ಲಿ ಆಗದ ಕೆಲಸಗಳನ್ನು ಮೋದೀಜಿ 10 ವರ್ಷಗಳಲ್ಲಿ ಮಾಡಿ ತೋರಿಸಿದ್ದಾರೆ

### ಮಲೇಬೆನ್ನೂರು : ಮಹಿಳಾ ಸಮಾವೇಶದಲ್ಲಿ ಯುವ ವಾಗ್ಮಿ ಹಾರಿಕಾ ಮಂಜುನಾಥ್



ಮಲೇಬೆನ್ನೂರು, ಏ. 22- ಸರಿಯಾದ ನಾಯಕತ್ವದಿಂದ ಒಂದು ದೇಶ ಪ್ರಗತಿ ಸಾಧಿಸಲು ಸಾಧ್ಯ. ಅಂತಹ ನಾಯಕ ನರೇಂದ್ರ ಮೋದಿ ಅವರಿಂದಾಗಿ ಭಾರತ ವಿಕಸಿತಗೊಂಡಿದೆ ಎಂದು ಯುವ ವಾಗ್ಮಿ ಹಾರಿಕಾ ಮಂಜುನಾಥ್ ಹೇಳಿದರು.

ಅವರು ಭಾನುವಾರ ಸಂಜೆ ಪಟ್ಟಣದ ನೀರಾವರಿ ಇಲಾಖೆಯ ಮೈದಾನದಲ್ಲಿ ಬಿಜೆಪಿ ವತಿಯಿಂದ ಹಮ್ಮಿಕೊಂಡಿದ್ದ ಮಹಿಳಾ ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿದರು.

70 ವರ್ಷಗಳಲ್ಲಿ ಆಗದ ಕೆಲಸವನ್ನು ನರೇಂದ್ರ ಮೋದಿ ಅವರು 10 ವರ್ಷಗಳಲ್ಲಿ ಮಾಡಿ ತೋರಿಸಿದ್ದಾರೆ. ಕಾಶ್ಮೀರದಲ್ಲಿ 370ನೇ ವಿಧಿ ಜಾರಿಗೊಳಿಸಿದ್ದು ಮೋದಿ ಅವರ ಸಾಮರ್ಥ್ಯದ ನಾಯಕತ್ವಕ್ಕೆ ಸಾಕ್ಷಿಯಾಗಿದೆ. ಅವರು ನಮಗೆ ಚಂಬು ನೀಡಿಲ್ಲ. ಅಕ್ಷಯ ಪಾತ್ರೆ ನೀಡಿದ್ದಾರೆ. 10 ವರ್ಷಗಳಲ್ಲಿ ಮೋದಿ ಅವರು ಟ್ರೈಲರ್ ಮಾತ್ರ ತೋರಿಸಿದ್ದಾರೆ. ಅಬಿ ಪಿಚ್ಚರ್ ಬಾಕಿ ಹೈ ಎಂದು ಹಾರಿಕಾ ಮಂಜುನಾಥ್ ಹೇಳಿದರು.

ದೇಶಕ್ಕಾಗಿ ನಿರಂತರ ದುಡಿಯುತ್ತಿರುವ ಮೋದಿ ಅವರ ನಾಯಕತ್ವವನ್ನು ಇನ್ನಷ್ಟು ಬಲಗೊಳಿಸುವ ಅವಕಾಶ ಈ ಚುನಾವಣೆ ಮೂಲಕ ನಮಗೆ ಒದಗಿ ಬಂದಿದೆ. ನಾವು - ನೀವೆಲ್ಲರೂ ಬಿಜೆಪಿಗೆ ಮತ ಹಾಕುವ ಮೂಲಕ ಭಾರತವನ್ನು ಜಗತ್ತಿನ ಶಕ್ತಿಶಾಲಿ ದೇಶವನ್ನಾಗಿ ಮಾಡಲು ಸಂಕಲ್ಪ ಮಾಡೋಣ ಎಂದರು.

ಹೆಣ್ಣು ಮಕ್ಕಳ ಅಭಿವೃದ್ಧಿ ಮತ್ತು ರಕ್ಷಣೆ ಬಗ್ಗೆ ವಿಶೇಷವಾದ ಕಾಳಜಿ ಹೊಂದಿರುವ ಮೋದಿ ಅವರಿಗೆ ಈ ಬಾರಿ ಚುನಾವಣೆಯಲ್ಲಿ ಮಹಿಳೆಯರು ಅತಿ ಹೆಚ್ಚಿನ ಬೆಂಬಲ ನೀಡಬೇಕೆಂದು ಮನವಿ ಮಾಡಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಅವರು ಮಾಡಿದ ಸಾಧನೆಗಳನ್ನು ಪುಸ್ತಕದ ಮೂಲಕ ನಮಗೆ ತೋರಿಸಿದ್ದಾರೆ. ಈ ಬಾರಿ ಅವರ ಪತ್ನಿ ಗಾಯತ್ರಿ ಸಿದ್ದೇಶ್ವರ ಅವರು ಸ್ಪರ್ಧಿಸಿದ್ದು, ಅವರನ್ನು ಗೆಲ್ಲಿಸುವ ಮೂಲಕ ಮಹಿಳೆ ಅಬಲೆಯಲ್ಲ ಸಬಲೆ ಎಂಬುದನ್ನು ತೋರಿಸೋಣ ಎಂದು ಹಾರಿಕಾ ಮಂಜುನಾಥ್ ಮಹಿಳೆಯರಲ್ಲಿ ಮನವಿ ಮಾಡಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಪುತ್ರಿ ಶ್ರೀಮತಿ ಅಶ್ವಿನಿ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ತಾ. ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್, ಹರಿಹರ ನಗರಸಭೆ ಸದಸ್ಯೆ ಅಶ್ವಿನಿ ಕೃಷ್ಣ, ಅಂಬುಜಾ, ಬೆಳ್ಳೂಡಿ ಗೀತಮ್ಮ, ಪುರಸಭೆ ಸದಸ್ಯರಾದ ಬೆಣ್ಣೆಹಳ್ಳಿ ಸಿದ್ದೇಶ್, ಓ.ಜಿ. ಕುಮಾರ್, ಜಿಗಳೇರ ಹಾಲೇಶಪ್ಪ, ಆನಂದಚಾರ್, ಕೊಮಾರನಹಳ್ಳಿ ಸುನೀಲ್ ಸೇರಿದಂತೆ ನೂರಾರು ಮಹಿಳೆಯರು ಭಾಗವಹಿಸಿದ್ದರು. ಶ್ರೀಮತಿ ರತ್ನಮ್ಮ ಪರಮೇಶ್ವರಪ್ಪ ಅಧ್ಯಕ್ಷತೆ ವಹಿಸಿದ್ದರು.

# ಚನ್ನಗಿರಿ ಜೆಡಿಎಸ್ ಪದಾಧಿಕಾರಿಗಳು, ಪುರಸಭೆ ಸದಸ್ಯರು, ಮುಖಂಡರು ಕಾಂಗ್ರೆಸ್‌ಗೆ ಸೇರ್ಪಡೆ



ಚನ್ನಗಿರಿ, ಏ. 22 - ಚನ್ನಗಿರಿ ತಾಲ್ಲೂಕಿನ ಜೆಡಿಎಸ್ ಪಕ್ಷದ ಮುಖಂಡರುಗಳು ಹಾಗೂ ಕಾರ್ಯಕರ್ತರು ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಚನ್ನಗಿರಿ ಪುರಸಭೆಯ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯರಾದ ಗಾದ್ರಿರಾಜು, ಸದಸ್ಯರಾದ ಜರೀನಾ ಬಾನು, ಜೆ.ಡಿ.ಎಸ್ ಪಕ್ಷದ ತಾಲ್ಲೂಕು ಅಧ್ಯಕ್ಷ ಉಮ್ಮೇದ್‌ವುಲ್ಲಾ ಮೈನಾರಿಟಿ, ಪುರಸಭೆ ಸದಸ್ಯೆ ನೂರ್‌ಜಾನ್, ಹೊದಿಗೆರೆ ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷರು ಹಾಗೂ ಹಾಲಿ ಉಪಾಧ್ಯಕ್ಷ ಬಿ.ಸಿ. ಯೋಗೇಂದ್ರಪ್ಪ, ಮಾಚನಾಯಕನಹಳ್ಳಿ ಗ್ರಾಮ ಪಂಚಾಯ್ತಿ ಸದಸ್ಯ ರಂಗಸ್ವಾಮಿ, ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು ಹಾಲಿ ಭೋವಿ ಸಮಾಜದ ಅಧ್ಯಕ್ಷ ಹೆಚ್. ರಾಜಪ್ಪ, ಗರಗ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ, ಮಲ್ಲೇಶಪ್ಪ, ಚನ್ನಗಿರಿ ನಾಯಕರ ಬೀದಿಯ ಸಿ.ಎಚ್. ನಾಗರಾಜ್, ಗರಗ ಗ್ರಾಮದ ಮುಖಂಡ ಜಿ.ಎನ್. ಪುಟ್ಟಪ್ಪ, ಜೆಡಿಎಸ್ ಪಕ್ಷದ ಮುಖಂಡ ಪಾಪಣ್ಣ ಕೊಂಡದಹಳ್ಳಿ, ಗರಗ ಗ್ರಾಮದ ಜೆಡಿಎಸ್ ಪಕ್ಷದ ಮುಖಂಡ ದೇವೆಂದ್ರಪ್ಪ, ತಿಪ್ಪೇಶಪ್ಪ, ಚನ್ನಗಿರಿ ಜೆಡಿಎಸ್ ಪಕ್ಷದ ಮುಖಂಡ ಯೂನಸ್, ಮಹಮ್ಮದ್ ಅಪ್ಪ, ಉಮ್ಮರ್ ಮುಕ್ತಿಯಾರ್, ಮಹಮದ್ ಶಫೀವುಲ್ಲಾ ಅವರುಗಳು ಕಾಂಗ್ರೆಸ್ ಪಕ್ಷ ಸೇರ್ಪಡೆಗೊಂಡರು.

ಈ ವೇಳೆ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದವರಿಗೆ ಪಕ್ಷದ ಸಿದ್ಧಾಂತಗಳನ್ನು ತಿಳಿಸಿ ಲೋಕಸಭಾ ಚುನಾವಣೆಯಲ್ಲಿ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಗೆಲ್ಲಿಸಬೇಕು ಎಂದರು.

## ವಾಯುವಿಹಾರ ಬಳಗದಿಂದ ಮಜ್ಜಿಗೆ



ದಾವಣಗೆರೆ, ಏ. 22- ನಗರದ ವಿಕಾಸ ತರಂಗಿಣಿ ವತಿಯಿಂದ ಮಹಾನಗರ ಪಾಲಿಕೆ ಆವರಣದಲ್ಲಿ ನಡೆಯುತ್ತಿರುವ 29ನೇ ವರ್ಷದ ಮಜ್ಜಿಗೆ ವಿತರಣೆ ಕಾರ್ಯಕ್ರಮದಲ್ಲಿ ಶಿವಯೋಗ ಮಂದಿರ ವಾಯುವಿಹಾರ ಬಳಗದವರು ಮಜ್ಜಿಗೆ ವಿತರಿಸಿದರು.

## ಮಾಜಿ ಸೈನಿಕರ ಮಕ್ಕಳಿಗೆ ಆರ್ಥಿಕ ನೆರವಿಗೆ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನ

ದಾವಣಗೆರೆ, ಏ.22 - ಒಂದನೇ ತರಗತಿಯಿಂದ ವೃತ್ತಿಪರ ಶಿಕ್ಷಣವಲ್ಲದ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ಹವಾಲ್ದಾರ್ ರ್‍ಯಾಂಕ್‌ವರೆಗಿನ ಮಾಜಿ ಸೈನಿಕರ ಮಕ್ಕಳು ಕೇಂದ್ರೀಯ ಸೈನಿಕ ಮಂಡಳಿಯಿಂದ ಆರ್ಥಿಕ ನೆರವನ್ನು ಪಡೆಯಲು ಕೇಂದ್ರೀಯ ಸೈನಿಕ ಮಂಡಳಿಯ ಜಾಲ ತಾಣ ONLINE.KSB.GOV.IN ನಲ್ಲಿ ಆರ್ಥಿಕ ನೆರವು (ಫೈನಾನ್ಸಿಯಲ್‌ನ್ಸ್) ಎಂಬ ಶೀರ್ಷಿಕೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ನವೆಂಬರ್ 30 ಕೊನೆಯ ದಿವಾಗಿರುತ್ತದೆ. ಕೇಂದ್ರೀಯ ಸೈನಿಕ ಮಂಡಳಿಯ ಮಾರ್ಗಸೂಚಿಯಂತೆ ಅರ್ಜಿ ಸಲ್ಲಿಸಿದ ಪ್ರತಿ ಹಾಗೂ ಸಂಬಂಧಿತ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಸೈನಿಕ ಕಲ್ಯಾಣ ಪುನರ್ವಸತಿ ಇಲಾಖೆ, ಶಿವಮೊಗ್ಗ ಕಚೇರಿಗೆ ಖುದ್ದಾಗಿ ಭೇಟಿ ನೀಡಿ ಅನುಮೋದನೆ ಪಡೆಯಬೇಕು.

ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಛೇರಿ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಶಿವಮೊಗ್ಗ ಇಲ್ಲಿ ಅಥವಾ ದೂರವಾಣಿ ಸಂಖ್ಯೆ 08182-220925 ಗೆ ಸಂಪರ್ಕಿಸಲು ಉಪನಿರ್ದೇಶಕ ಡಾ.ಸಿ.ಎ.ಹಿರೇಮಠ ತಿಳಿಸಿದ್ದಾರೆ.

## ಅಹಿಂದ ಪ್ರಜಾಸಕ್ತಿಯಿಂದ ಪ್ರಭಾ ಮಲ್ಲಿಕಾರ್ಜುನ್‌ಗೆ ಬೆಂಬಲ

ದಾವಣಗೆರೆ, ಏ.22- ಲೋಕಸಭಾ ಚುನಾವಣೆಗೆ ಸ್ಪರ್ಧಿಸುವ ಕಾಂಗ್ರೆಸ್ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಅಹಿಂದ ಪ್ರಜಾ ಶಕ್ತಿಯಿಂದ ಬೆಂಬಲ ನೀಡಲು ನಿರ್ಧರಿಸಲಾಗಿದೆ ಎಂದು ಗೌರವಾಧ್ಯಕ್ಷ ಜೆ. ಗೋವಿಂದರಾಜ ಹೇಳಿದ್ದಾರೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಹಿಂದ ವರ್ಗದವರಿಗೆ ಕಾಂಗ್ರೆಸ್ ಪಕ್ಷವು ಹಲವು ಅನುಕೂಲತೆಗಳನ್ನು ಮಾಡಿಕೊಟ್ಟ ಹಿನ್ನೆಲೆಯಲ್ಲಿ ಬೆಂಬಲ ನೀಡಲು ಇತ್ತೀಚೆಗೆ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಆರ್.ಹನುಮಂತಪ್ಪ, ರಾಜ್ಯ ಗೌರವಾಧ್ಯಕ್ಷ ಸೈಯದ್ ಸೈಫುಲ್ಲಾ, ಮುಖಂಡರುಗಳಾದ ಡಿ.ಬಸವರಾಜ್, ಕೆ.ಚಮನ್ ಸಾಬ್, ಎಸ್.ಎಸ್. ಗಿರೀಶ್, ಕೆ.ಸಿ. ಮೊಹಮ್ಮದ್, ಮಹಾಂತೇಶ್, ಪ್ರವೀಣ್ ಕುಮಾರ್ ಯಾದವ್, ಪ್ರೊ.ಧರ್ಮಾನಾಯಕ್ ಇತರರು ಉಪಸ್ಥಿತರಿದ್ದರು.

## ಐರಣಿಯಲ್ಲಿ ಇಂದಿನಿಂದ ಅಡ್ಡಪಲ್ಲಕ್ಕಿ, ಮಹಾರಥೋತ್ಸವ, ಅಖಂಡ ಭಜನೆ

ರಾಣೇಬೆನ್ನೂರು ತಾಲ್ಲೂಕಿನ ಐರಣಿ ಮನಿಮಠದ ಶ್ರೀ ಗಜದಂಡಸ್ವಾಮಿಗಳ ಸಾನ್ನಿಧ್ಯದಲ್ಲಿ ಮುಪ್ಪಿನಾರ್ಯರ ನೂತನ ಮಹಾರಥೋತ್ಸವ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಇಂದು ಮತ್ತು ನಾಳೆ ನಡೆಯಲಿವೆ ಎಂದು ಶ್ರೀ ಮಠದ ಭಕ್ತ ಹನುಮಂತಪ್ಪ ಚಳಗೇರಿ ತಿಳಿಸಿದ್ದಾರೆ.

ಇಂದು ಗಜದಂಡ ಶ್ರೀ ಗಳ 31ನೇ ವರ್ಷದ ಪಟ್ಟಾಭಿಷೇಕದ ಸ್ಮರಣೆಗೆ ತುಲಾಭಾರ, ಸಾಮೂಹಿಕ ಮದುವೆಗಳು ನಂತರದಲ್ಲಿ ಧರ್ಮಸಭೆ, ಮಧ್ಯಾಹ್ನ ಮುಪ್ಪಿನಾರ್ಯರ ನೂತನ ರಥೋತ್ಸವ ನಡೆಯಲಿದೆ. ನಾಳೆ ಬುಧವಾರ ವೀಭೂತಿ ಮತ್ತು ಕವಡಿ ಪೂಜೆ ನಡೆಯಲಿದೆ ಎಂದು ಹನಮಂತಪ್ಪ ಹೇಳಿದರು.

# ನುಡಿದಂತೆ ನಡೆದಿದ್ದೇವೆ, ನಡೆಯುತ್ತೇವೆ, ಇದು ನಮ್ಮ ಗ್ಯಾರಂಟಿ

## ಹರಿಹರ ತಾಲ್ಲೂಕಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಬಿರುಸಿನ ಪ್ರಚಾರ

ಮಲೇಬೆನ್ನೂರು, ಏ.22- ನಾವು ನುಡಿದಂತೆ ನಡೆದಿದ್ದೇವೆ, ನಡೆಯುತ್ತೇವೆ ಇದು ನಮ್ಮ ಗ್ಯಾರಂಟಿ. ಕಾಂಗ್ರೆಸ್ ಸರ್ಕಾರ ಎಂದರೇ ಗ್ಯಾರಂಟಿ ಎಂದು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ಹೇಳಿದರು.

ಸೋಮವಾರ ಹರಿಹರ ತಾಲ್ಲೂಕಿನ ಕುಣೆಬೆಳಕೆರೆ ಗ್ರಾಮದಿಂದ ಪ್ರಚಾರ ಆರಂಭಿಸಿದ ಅವರು, ನಂತರ ನಂದಿತಾವರೆ, ಭಾಸ್ಕರರಾವ್ ಕ್ಯಾಂಪ್, ವಿನಾಯಕ ನಗರ, ಜಿಗಳಿ, ಕುಂಬಳೂರು, ನಿಟ್ಟೂರು, ಆದಾಪುರ, ಬೂದಿಹಾಳು, ನೆಹರು ಕ್ಯಾಂಪ್, ಗುಳದಹಳ್ಳಿ, ಸಂಕ್ಲೀಪುರ, ಮಲ್ಲನಾಯಕನ ಹಳ್ಳಿ, ಹರಳಹಳ್ಳಿ, ಹಾಲಿವಾಣ, ಕೊಪ್ಪ, ದಿಬ್ಬದಹಳ್ಳಿ, ಕೊಮಾರನಹಳ್ಳಿ ಗ್ರಾಮ ಗಳಲ್ಲಿ ಪ್ರಚಾರ ಕಾರ್ಯ ನಡೆಸಿ ಮತದಾರರನ್ನುದ್ದೇಶಿಸಿ ಮಾತನಾಡಿದರು.

ಈ ಹಿಂದೆ ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ಮುನ್ನ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ 5 ಗ್ಯಾರಂಟಿ ಯೋಜನೆಗಳನ್ನು ತರುವ ಭರವಸೆ ನೀಡಿತ್ತು. ಅದರಂತೆ ಸರ್ಕಾರ ಬಂದ ತಕ್ಷಣ ಐದೂ ಯೋಜನೆಗಳನ್ನು ಜಾರಿಗೆ ತಂದು ಇಂದು ಹರಿಹರ ವಿಧಾನಸಭಾ ಕ್ಷೇತ್ರವೊಂದಕ್ಕೆ ಸುಮಾರು ರೂ.168 ಕೋಟಿಯಷ್ಟು ಹಣವನ್ನು ಫಲಾನುಭವಿಗಳಿಗೆ ವಿವಿಧ ರೂಪದಲ್ಲಿ ನೀಡಿದೆ.

ಅದೇ ರೀತಿ ನಮ್ಮ ಸರ್ಕಾರ ಉದ್ಯೋಗದ ಭರವಸೆ ನೀಡಿದ್ದು, ಈಗಾಗಲೇ ಸಾವಿರಾರು ಉದ್ಯೋಗಗಳನ್ನು ರಾಜ್ಯ ಸರ್ಕಾರದ ಮಟ್ಟದಲ್ಲಿ ಸೃಷ್ಟಿಸಲಾಗಿದ್ದು, ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಇನ್ನು ಹರಿಹರದಲ್ಲಿಯೂ ಸಹ ಕಾರ್ಖಾನೆಗಳನ್ನು ಸ್ಥಾಪಿಸುವ ಬಗ್ಗೆ ಚಿಂತನೆ ನಡೆಸಲಾಗಿದೆ.

ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ 'ಪಂಚ ನ್ಯಾಯ ಪಚ್ಚೀಸ್ ಗ್ಯಾರಂಟಿ' ಭರವಸೆಗಳನ್ನು ನೀಡಲಾಗಿದ್ದು, ಯುವ ನ್ಯಾಯದಡಿ ಯುವಕರಿಗೆ ಉದ್ಯೋಗ, ಮಹಿಳಾ ನ್ಯಾಯದಡಿ ಪ್ರತಿ ಮಹಿಳೆಗೆ 1 ಲಕ್ಷ ರೂ., ರೈತ ನ್ಯಾಯದಡಿ ಸ್ವಾಮಿನಾಥನ್ ಆಯೋಗದ ವರದಿ ಜಾರಿಗೊಳಿಸುವುದು ಸೇರಿದಂತೆ ಹಲವು ಯೋಜನೆಗಳನ್ನು ಪ್ರಣಾಳಿಕೆಯಲ್ಲಿ ಘೋಷಿಸಲಾಗಿದ್ದು, ಅದರಂತೆ ನಾವುಗಳು ಜಾರಿಗೆ ತರುತ್ತೇವೆ ಎಂದು ಪ್ರಭಾ ಮತದಾರರಿಗೆ ಭರವಸೆ ನೀಡಿದರು.



ಮಾಜಿ ಶಾಸಕ ಎಸ್.ರಾಮಪ್ಪ ಮಾತನಾಡಿ, ಪ್ರಧಾನಿ ಮೋದಿ ಅವರ ಬಣ್ಣದ ಮಾತುಗಳಿಗೆ ಈ ಹಿಂದೆ ಜನ ಮೋಸ ಹೋಗಿದ್ದಾರೆ. ಇನ್ಮುಂದೆ ಅವರ ಮೋಡಿ ನಡೆಯಲ್ಲ. ದೇಶದಲ್ಲಿ ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳನ್ನು ಈ ಬಾರಿ ಅಧಿಕಾರಕ್ಕೆ ತರುವ ತೀರ್ಮಾನವನ್ನು ಜನ ಮಾಡಿದ್ದಾರೆ ಎಂದರು. ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಮಾತನಾಡಿ, ಹರಿಹರ ಸೇರಿದಂತೆ ಎಲ್ಲಾ ತಾಲ್ಲೂಕಿನಲ್ಲೂ ಡಾ ಪ್ರಭಾ ಮಲ್ಲಿಕಾರ್ಜುನ್ ಪರ ಉತ್ತಮ ವಾತಾವರಣ ನಿರ್ಮಾಣವಾಗುತ್ತಿದ್ದು ಅವರು ದಾಖಲೆ ಮಟ್ಟದಲ್ಲಿ ಗೆಲುವು ಸಾಧಿಸಲಿದ್ದು ಹರಿಹರ ಕ್ಷೇತ್ರದಲ್ಲಿ ಅಭಿವೃದ್ಧಿ ಗಾಳಿ ಬೀಸಲಿದೆ ಎಂಬ ವಿಶ್ವಾಸ ನನಗಿದೆ ಎಂದರು.

ಮಾಜಿ ಸಚಿವ ಡಾ. ವೈ ನಾಗಪ್ಪನವರ ಪುತ್ರಿ ಡಾ. ರಶ್ಮಿ ಮಾತನಾಡಿ, ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಮತ ನೀಡಲು ಜನ ಈಗಾಗ್ಲೆ ನಿರ್ಧರಿಸಿದ್ದು ಬಿಜೆಪಿಯ ಯಾವ ಆಟವೂ ನಡೆಯಲ್ಲ ಎಂದರು. ನಿಟ್ಟೂರಿನಲ್ಲಿ ಎನ್ ಜಿ ಶಿವಾಜಿ ಪಾಟೀಲ್, ಕೆ ಸಂಜೀವಮೂರ್ತಿ ಮತ್ತು ಗುಳದಹಳ್ಳಿಯಲ್ಲಿ ಚಂದ್ರಶೇಖರಯ್ಯ ಅವರು ತಮ್ಮ ಬೆಂಬಲಿಗರೊಂದಿಗೆ ಕಾಂಗ್ರೆಸ್ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷ ಎಸ್.ಎಸ್.ಬಕ್ಕೇಶ್, ಜಿ ಪಂ ಮಾಜಿ ಸದಸ್ಯರಾದ ಬೆಣ್ಣೆಹಳ್ಳಿ ಹಾಲೇಶಪ್ಪ, ಎಂ. ನಾಗೇಂದ್ರಪ್ಪ, ಬಿ. ಎಂ. ವಾಗೀಶ್ ಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ. ಬಿ. ಅಬೀದ್ ಅಲಿ, ಎಲ್ ಬಿ ಹನುಮಂತಪ್ಪ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಮುಖಂಡರಾದ ಕುಂಬಳೂರು ವಿರೂಪಾಕ್ಷಪ್ಪ, ಜಿ ಮಂಜುನಾಥ್ ಪಟೇಲ್, ಜಿಗಳಿ ಆನಂದಪ್ಪ, ಸಿರಿಗೆರೆ ರಾಜಣ್ಣ, ಬಿ. ವೀರಯ್ಯ, ಡಾ ಬಿ ಚಂದ್ರಶೇಖರ್, ನಂದಿತಾವರೆ ತಿಮ್ಮನಗೌಡ, ಪಿ ರೇವಣಸಿದ್ದಪ್ಪ, ಸತ್ಯನಾರಾಯಣ, ಸಾಯಿ, ವೈ ದ್ಯಾವಪ್ಪರೆಡ್ಡಿ, ಸುರೇಶ್ ಹಾದಿಮನಿ, ಹನಗವಾಡಿ ಕುಮಾರ್, ತಾ.ಪಂ. ಮಾಜಿ ಅಧ್ಯಕ್ಷ ಎಸ್ ಜಿ ಪರಮೇಶ್ವರಪ್ಪ, ಕೆ.ಪಿ. ಕುಮಾರಸ್ವಾಮಿ, ಕುಣೆಬೆಳಕೆರೆ ಬಸವರಾಜಪ್ಪ, ಗುತ್ತೂರು ಹಾಲೇಶಗೌಡ, ಮೇಕಾ ಮುರುಳಿಕೃಷ್ಣ, ಸಪ್ತಗಿರಿ ರಾಮಮೂರ್ತಿ, ಮಲೇಬೆನ್ನೂರಿನ ಗೌಡ್ರ ಮಂಜಣ್ಣ, ಕಣ್ಣಾಳ್ ಹನುಮಂತಪ್ಪ, ಕಣ್ಣಾಳ್ ಧರ್ಮಣ್ಣ, ಕೆ. ಪಿ. ಗಂಗಾಧರ್, ಚಿಟ್ಟಕ್ಕಿ ನಾಗರಾಜ್, ಸೈಯದ್ ಜಾಕೀರ್, ಎಂ ಬಿ ಫೈಜು, ನಯಾಜ್, ಷಾ ಅಬ್ರಾರ್, ಖಲೀಲ್, ಸಜ್ಜು, ಬಣಕಾರ್ ವಿಜಯ್, ಪಿ ಆರ್ ಕುಮಾರ್, ಭೋವಿ ಕುಮಾರ್, ಪಿ ಹೆಚ್ ಶಿವಕುಮಾರ್, ಯೂನುಸ್, ಎಳೆಹೊಳೆ ಕುಮಾರ್, ಡಿ ಕೆ ಸಿದ್ದನಗೌಡ, ಕುಣೆಬೆಳಕೆರೆ ರುದ್ರಪ್ಪ ಸವಿತಾ ನಾಯ್ಕ್, ವಿದ್ಯಾ, ಜಿಗಳಿ ಕ್ಯಾಂಪ್ ಪ್ರಸಾದ್ ರಾವ್, ಜಿಗಳಿಯಲ್ಲಿ ತಾ ಪಂ ಮಾಜಿ ಅಧ್ಯಕ್ಷೆ ಹನುಮಮ್ಮ ದೇವೇಂದ್ರಪ್ಪ, ಗ್ರಾ ಪಂ ಸದಸ್ಯರಾದ ಡಿ ಎಂ ಹರೀಶ್, ಕೆ ಜಿ ಬಸವರಾಜ್, ಬೇವಿನಹಳ್ಳಿ ಶ್ರೀಕಾಂತ್, ಕುಕ್ಕವಾಡ ಮಂಜಣ್ಣ ತಿಮ್ಮೇನಹಳ್ಳಿ ರಾಜಣ್ಣ ಕುಂಬಳೂರು ಗ್ರಾ ಪಂ ಅಧ್ಯಕ್ಷೆ ಉಮಾದೇವಿ ಶಿವರಾಮಚಂದ್ರಪ್ಪ, ಕಣ್ಣಾಳ್ ನಾಗೇಂದ್ರ, ಆರ್. ಹೆಚ್. ಬಸವರಾಜ್, ಬಿ ಮೋಹನ್, ಹೆಚ್. ನಿಂಗಪ್ಪ, ಶಂಕರಗೌಡ, ನಿಟ್ಟೂರು ಕೆ. ಏಕಾಂತಪ್ಪ, ಆದಾಪುರದಲ್ಲಿ ಜಿ ಪಂ ಮಾಜಿ ಸದಸ್ಯೆ ಹೇಮಾವತಿ ಭೀಮಪ್ಪ, ತಾ. ಪಂ. ಮಾಜಿ ಅಧ್ಯಕ್ಷರಾದ ವೀರಭದ್ರಪ್ಪ, ಮಂಜುನಾಥ್ ಸೇರಿದಂತೆ ಸ್ಥಳೀಯ ಮುಖಂಡರು ಕಾರ್ಯಕರ್ತರು ಉಪಸ್ಥಿತರಿದ್ದರು.


**IN THE COURT OF THE HON'BLE FIRST ADDITIONAL CIVIL JUDGE AND JMFC AT DAVANGERE**

**EXECUTION PETITION No. 282/2022**

**DECREE HOLDERS :** SMT. SUDHA JAIN AND OTHERS V/s **JUDGEMENT DEBTORS :** SRI. S.M. NANJUNDA SWAMY AND OTHERS

**NOTICE UNDER ORDER 5 RULE 20 (1-A) OF C.P.C. 1908**

**JUDGMENT DEBTOR NO 9:** Smt. Indiramma Guruprasanna W/O. Late A.M.Guruprasanna Major, House Hold Door No. 44, 2nd Cross, Ganesh Colony, Gadag-582 103.

Whereas the Decree Holders above named have filed the above Petition against the Judgment Debtors for executing the Sale Deed in favour of the Decree Holders and since the Judgment Debtor No.9 has evaded the Notice, both through Court and RLAD, the above Case is now posted to 28-5-24 @11.00 A.M. for your appearance. If you fail to appear on that date either in person or through an Advocate, you will be placed Ex-Parte and the matter will be proceeded further without any Notice thereafter.

Given under my Hand and Seal of the Court this the 10.04.2024 day of the April 2024.

**MALLIKARJUNA KANAVI**
Advocate for Decree Holders
Davanagere
Date : 02.04.2024

By order of the court
**Chief Ministerial Officer**
First Additional Civil Judge & JMFC, Davanagere.

# ವೈಚಾರಿಕ ಕ್ರಾಂತಿಯ ಕಹಳೆ ಮೊಳಗಿಸಿದ ಆನಗೋಡಿನಲ್ಲಿ ಮರುಳಸಿದ್ಧರ ರಥೋತ್ಸವ



ಬಸವಾದಿ ಶಿವಶರಣರ ಹಿರಿಯ ಸಮಕಾಲೀನ ಮರುಳಸಿದ್ಧರ ನಡೆ ಧೀರೋದಾತ್ತವಾದುದು. ಅಜ್ಞಾನ, ಮೂಢನಂಬಿಕೆ, ಕಂದಾಚಾರಗಳ ವಿರುದ್ಧ ಅವರು ಸಾರಿದ ಸಮರ ಅಂದಿನ ಪಟ್ಟಭದ್ರರ ಎದೆ ನಡುಗಿಸುವಂತಿತ್ತು. ಅದಕ್ಕಾಗಿ ಅವರು ನಡೆದ ದಾರಿ ಮುಳ್ಳಿನದಾಗಿದ್ದರೂ ಇಟ್ಟ ಹೆಜ್ಜೆ ದೃಢವಾಗಿತ್ತು. ಧರ್ಮ, ದೇವರು ಹೆಸರಿನಲ್ಲಿ ನಡೆಯುವ ಕಂದಾಚಾರಗಳು ಮಾನವನ ಸೃಷ್ಟಿ ಮತ್ತು ಸ್ವಾರ್ಥಪೂರಿತವಾದುದು. ಅಂತಹ ಕಂದಾಚಾರಗಳಿಂದ ಸಮಾಜ ಅಜ್ಞಾನದ ಕತ್ತಲೆಯ ಕೂಪದಲ್ಲಿಯೇ ನರಳುತ್ತದೆ. ಇವುಗಳನ್ನು ಬುಡ ಸಹಿತ ತೆಗೆಯದೇ ಹೋದರೆ ಶತಶತಮಾನಗಳ ಕಾಲ ಮುಂದುವರಿಯುತ್ತವೆ ಎಂದು ಮರುಳಸಿದ್ಧರು ಲೋಕ ಸಂಚಾರ ಕೈಗೊಂಡರು. ತಾನು ಹುಟ್ಟಿದ ಊರಾದ ಕಗ್ಗಲುಪುರದಲ್ಲಿಯೇ ಮಾರಿ ಜಾತ್ರೆಯ ಹೆಸರಿನಲ್ಲಿ ನಡೆಯುತ್ತಿದ್ದ ಪ್ರಾಣಿಬಲಿ ವಿರೋಧಿಸಿದರು. ಅದು ಅಲ್ಲಿಗೆ ನಿಲ್ಲದೆ ತಾವು ನಡೆದಾಡಿದೆಡೆಗಳಲ್ಲೆಲ್ಲ ವೈಚಾರಿಕತೆಯ ಕಹಳೆ ಊದಿ, ಜನತೆಯನ್ನು ಎಚ್ಚರಿಸಿದರು.

ಹೀಗೆ ಸಾಗಿ ಬಂದ ದಾರಿಯಲ್ಲಿ ಯಜ್ಞದ ಹೆಸರಿನಲ್ಲಿ ಆಹಾರ ಪದಾರ್ಥಗಳು ಬೆಂಕಿಗೆ ಆಹುತಿಯಾಗುವುದನ್ನು ಕಂಡು ಮರುಗಿದರು. 'ದಯವೇ ಧರ್ಮದ ಮೂಲ' ಎಂಬುದು ಮಾನವತೆ. ಹಸಿದ ಹೊಟ್ಟೆಯ ಮುಂದೆ ಧಾರ್ಮಿಕ ಕರ್ಮಾಚರಣೆ ಸಲ್ಲದು ಎಂದು ಬೇತೂರು ಗ್ರಾಮದಲ್ಲಿ ನಡೆಯುತ್ತಿದ್ದ ಯಜ್ಞ ಕಾರ್ಯಗಳನ್ನು ಪ್ರತಿಭಟಿಸಿದರು. ಅದರ ಫಲವಾಗಿ ಮರುಳಸಿದ್ಧರನ್ನು ಹಗೇವಿಗೆ ಹಾಕಿ ಸುಡಲು ಪ್ರಯತ್ನಿಸಿದರು. ಆ ಪ್ರಯತ್ನ ವಿಫಲವಾದಾಗ ತುಂಬಿದ ಅಣಜಿ ಕೆರೆಯಲ್ಲಿ ಕೈಕಾಲುಗಳನ್ನು ಕಟ್ಟಿ ಮುಳುಗಿಸಿದರು. ಅದಕ್ಕೂ ಸೋಲೊಪ್ಪದ ಮರುಳಸಿದ್ಧರ ಮೇಲೆ ಉಚ್ಚಂಗಿದುರ್ಗದ ಪಾಂಡ್ಯ ಅರಸನ ಸೇನೆಯ ಸಹಾಯದಿಂದ ದಾಳಿ ಮಾಡಿಸಿದರು. ಆಗ ಅರಸನ ಆನೆಯ ಸೊಂಡಿಲು ತಿರುವಿ ದಂತಭೇದನ ಮಾಡಿದಾಗ ಮರುಳಸಿದ್ಧರ ವಿರೋಧಿಗಳ ಎದೆ ಝಲ್ಲೆಂದಿತು. ಬೌದ್ಧಿಕ ತಿಳಿವಳಿಕೆಯಿಂದ ಸಾಧ್ಯವಾಗದೇ ಇದ್ದಾಗ ದೈಹಿಕ ಕಸರತ್ತಿನ ಮೂಲಕ ಉತ್ತರ ನೀಡಿದ ಮರುಳಸಿದ್ಧರನ್ನು ಅಲ್ಲಿಯ ಜನತೆ ಹಾರ ತುರಾಯಿಗಳಿಂದ ಗೌರವಿಸಿತು. ಆನೆಯ ಕೋಡನ್ನು ಮುರಿದು ಧಾರ್ಮಿಕ ಮೂಲಭೂತವಾದಿಗಳಿಗೆ ತಕ್ಕ ಪಾಠ ಕಲಿಸಿದ ಸ್ಥಳವೇ ಇಂದು ಆನಗೋಡು ಕ್ಷೇತ್ರವಾಗಿದೆ. ಇಂದಿಗೂ ಆನಗೋಡು ಸುತ್ತಮುತ್ತಲ ಸಿದ್ಧನೂರು, ಉಳುಪನಕಟ್ಟೆ, ಅಣಜಿ, ಬೇತೂರು, ಕುರುಡಿ ಮುಂತಾದ ಗ್ರಾಮಗಳು ಮರುಳಸಿದ್ಧರ ಕ್ರಾಂತಿಕಾರಕ ಹೆಜ್ಜೆಗಳ ಗುರುತಿನ ಐತಿಹಾಸಿಕ ಸ್ಥಳಗಳಾಗಿವೆ.

ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಮೂಲಪುರುಷರಾದ ಮರುಳಸಿದ್ಧರು ಈ ನಾಡು ಕಂಡ ಅಪೂರ್ವ ಯೋಗಿ. ರೇವಣಸಿದ್ಧರಿಂದ ದೀಕ್ಷಿತನಾದ ಮರುಳಸಿದ್ಧರು ಸಿದ್ಧ ಪರಂಪರೆಯಲ್ಲಿಯೇ ವಿಭಿನ್ನ ಮತ್ತು ವಿಶಿಷ್ಟ ವ್ಯಕ್ತಿತ್ವ ಹೊಂದಿದವರು. ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ನಾಂದಿ ಹಾಡಿದ ಯೋಗಿ ಪುರುಷ. ತನ್ನ ಉದಾತ್ತ ಆಶಯಗಳನ್ನು ಮುಂದುವರೆಸಿಕೊಂಡು ಹೋಗಲು ತೆಲಗುಬಾಳು ಸಿದ್ಧನಿಗೆ 'ತರಳಾ.. ಬಾಳು' ಎಂದು ಆಶೀರ್ವದಿಸಿದ ದೂರದೃಷ್ಟಿಯ ನೇತಾರ. ಅವರ ಸದಾಶಯಗಳ ಮುಂದುವರಿಕೆಯೇ 'ತರಳಬಾಳು ಗುರು ಪರಂಪರೆ'. ಕನ್ನಡದ ಮೊದಲ ವಚನಕಾರ್ತಿ ಅಕ್ಕಮಹಾದೇವಿಗೆ ಲಿಂಗ ದೀಕ್ಷೆ ನೀಡಿ ಆಶೀರ್ವಾದಿಸಿದವರು ಗುರು ಮರುಳಸಿದ್ಧರು. 'ಅಕ್ಕನ ಹುಣ್ಣಿಮೆ' ಎಂದೇ ಆಚರಿಸುತ್ತಿರುವ ಚೈತ್ರಮಾಸದ ಸೀಗಿ ಹುಣ್ಣಿಮೆಯ ದಿನವೇ ಸುಕ್ಷೇತ್ರ ಆನಗೋಡಿನಲ್ಲಿ ಮರುಳಸಿದ್ಧರ ರಥೋತ್ಸವ. ಪ್ರತಿವರ್ಷದ ಪದ್ಧತಿಯಂತೆ ಇಂದು ಸಂಜೆ 5 ಗಂಟೆಗೆ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ಸಮ್ಮುಖದಲ್ಲಿ ಮರುಳಸಿದ್ಧರ ರಥೋತ್ಸವ ನೆರವೇರಲಿದೆ.

**- ನಾಗರಾಜ ಸಿರಿಗೆರೆ,** ಕನ್ನಡ ಅಧ್ಯಾಪಕ
ಶ್ರೀ ಮರುಳಸಿದ್ದೇಶ್ವರ ಪ್ರೌಢಶಾಲೆ, ಆನಗೋಡು

# ಮಾಗಾನಹಳ್ಳಿ ರತ್ನಮ್ಮ ಅವರಿಗೆ 'ಅಕ್ಕ ಶ್ರೀ' ಪ್ರಶಸ್ತಿ



ದಾವಣಗೆರೆಯ ಶ್ರೀ ಅಕ್ಕಮಹಾದೇವಿ ಸಮಾಜದ ವತಿಯಿಂದ ಮಹಿಳಾ ಕ್ಷೇತ್ರದ ಸಾಧಕರಿಗೆ ಅಕ್ಕಮಹಾದೇವಿ ಜಯಂತ್ಯೋತ್ಸವ ಹಾಗೂ ವಚನೋತ್ಸವದ ಸಂದರ್ಭದಲ್ಲಿ ಕೊಡ ಮಾಡುವ ಅಕ್ಕ ಶ್ರೀ ಪ್ರಶಸ್ತಿಗೆ ಶ್ರೀಮತಿ ಮಾಗಾನಹಳ್ಳಿ ರತ್ನಮ್ಮ ಭಾಜನರಾಗಿದ್ದಾರೆ.

ಶ್ರೀಮತಿ ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪದಲ್ಲಿ ಇಂದು ಸಂಜೆ 6 ಗಂಟೆಗೆ ಏರ್ಪಾಡಾಗಿರುವ ಸಮಾರಂಭದಲ್ಲಿ ರತ್ನಮ್ಮ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ನ್ಯಾಮತಿ ಪಟ್ಟಣದ ಪ್ರಸಿದ್ಧ ನುಚ್ಚಿನ ಮನೆತನದ ಶ್ರೀಮತಿ ಚನ್ನಬಸಮ್ಮ ಹಾಗೂ ಶ್ರೀ ನುಚ್ಚಿನ ಬಸವಣ್ಣಪ್ಪನವರ ದ್ವಿತೀಯ ಪುತ್ರಿಯಾಗಿ ರತ್ನಮ್ಮನವರು 1943 ರಲ್ಲಿ ಜನಿಸಿದರು.

ನ್ಯಾಮತಿಯಲ್ಲಿ 8ನೇ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿದರು. ಚಿಕ್ಕ ವಯಸ್ಸಿನಲ್ಲಿ ನ್ಯಾಮತಿಯ ಕಲ್ಮಠದಲ್ಲಿ ನೆರವೇರಿಸಿದ್ದ ಶ್ರೀ ಅಕ್ಕನ ಹುಣ್ಣಿಮೆ ಕಾರ್ಯಕ್ರಮದಲ್ಲಿ 'ಅಕ್ಕಮಹಾದೇವಿ' ಪಾತ್ರಧಾರಿಯಾಗಿ ಕೌಶಿಕ ಮಹಾರಾಜನನ್ನು ಎದುರಿಸಿದ ಪ್ರಸಂಗ ಹಾಗೂ ಅರಮನೆಯನ್ನು ತೊರೆದ ಪ್ರಸಂಗ ಎಲ್ಲರ ಪ್ರಶಂಸೆಯನ್ನು ಪಡೆದು ಬೆಳ್ಳಿ ಪದಕವನ್ನು ಬಹುಮಾನವಾಗಿ ಪಡೆದಿರುವ ಹೆಗ್ಗಳಿಕೆ ಇವರದು. ಪ್ರತಿವರ್ಷ ವಚನ ಗಾಯನ ಮಾಡುತ್ತಾ ಮೆರವಣಿಗೆಯಲ್ಲಿ ಸಾಗುತ್ತಿದ್ದರು. 12ನೇ ವರ್ಷದಲ್ಲಿ ಸಿದ್ದರಾಮ. ಸಖಿ ಇನ್ನು ಮುಂತಾದ ಶಿವಶರಣರ ವೇಷಧರಿಸಿ ಪಾತ್ರದಾರಿಯಾಗಿದ್ದರು.

1959 ಮೇ 11ರಂ ಬಸವ ಜಯತಿ ದಿನದಂದು ದಾವಣಗೆರೆಯ ಪ್ರಸಿದ್ಧ ಮನೆತನವಾದ ಮಾಗಾನಹಳ್ಳಿ ಶ್ರೀ ದೊಡ್ಡಬಸಪ್ಪ ಮತ್ತು ಶ್ರೀಮತಿ ಬಸಮ್ಮ ಇವರ ಪುತ್ರರಾದ ಮಾಗಾನಹಳ್ಳಿ ಗುರುಪಾದಪ್ಪ (ಸೋದರ ಮಾವ) ನವರೊಂದಿಗೆ 16ನೇ ವಯಸ್ಸಿನಲ್ಲಿಯೇ ವೈವಾಹಿಕ ಜೀವನಕ್ಕೆ ಪಾದಾರ್ಪಣೆ ಮಾಡಿದರು. ಇವರಿಗೆ ಇಬ್ಬರು ಪುತ್ರರಿದ್ದಾರೆ. ಮಾಗಾನಹಳ್ಳಿ ಮನೆತನದ ಬಳಗದಲ್ಲಿ ಎಲ್ಲರ ಮನ ಗೆದ್ದಿರುವರು.

ಶ್ರೀಮತಿ ಎಂ.ಸಿ. ಗಿರಿಜಮ್ಮನವರ ಸಮಾಜ ಸೇವೆಯಿಂದ ಪ್ರೇರಿತರಾಗಿ 1980 ರಲ್ಲಿ ಶ್ರೀ ಅಕ್ಕಮಹಾದೇವಿ ಸಮಾಜದಲ್ಲಿ ಸದಸ್ಯರಾಗಿ, ನಿರ್ದೇಶಕರಾಗಿ, ನಂತರ ಶ್ರೀ ಅಕ್ಕಮಹಾದೇವಿ ನೇತ್ರದಾನ ಪ್ರೇರಣಾ ಸಮಿತಿಯ ಪದಾಧಿಕಾರಿಯಾಗಿ 1992 ರಿಂದ ಶ್ರೀಮತಿ ಚಂದ್ರಮ್ಮ ಜಯಣ್ಣನವರ ನೇತೃತ್ವದಲ್ಲಿ ಹಲವಾರು ಮೃತರ ನೇತ್ರಗಳನ್ನು ಸ್ವೀಕರಿಸಿ ಅಂಧರ ಪಾಲಿಗೆ ಆಶಾಕಿರಣವಾಗಿದ್ದಾರೆ. ಮಲೇಬೆನ್ನೂರು, ಜಗಳೂರು, ಹದಡಿ ಹಲವಾರು ಕಡೆ ಉಚಿತ ನೇತ್ರ ತಪಾಸಣೆ ಹಾಗೂ ಕಣ್ಣಿನ ಪೊರೆ ಆಪರೇಷನ್ ಮಾಡಿಸುವ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ.

1998 ರಿಂದ ಶ್ರೀಮತಿ ಉಮಾ ವೀರಭದ್ರಪ್ಪನವರ ನೇತೃತ್ವದಲ್ಲಿ ಶ್ರೀ ಅಕ್ಕಮಹಾದೇವಿ ವಧು-ವರರ ಅನ್ವೇಷಣೆ ಕೇಂದ್ರ ದಲ್ಲಿ ಸಹ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಪ್ರತಿ ವರ್ಷ 'ಅಕ್ಕನ ಹುಣ್ಣಿಮೆ'ಯಲ್ಲಿ ವಚನ ಗಾಯನ, ತತ್ವಪದ, ನಾಟಕಗಳು, ಶಿವಶರಣರ ಪಾತ್ರಧಾರಿಯಾಗಿ ಭಾಗವಹಿಸಿರುವ ಇವರು ಮಹಿಳಾ ಸಮಾಜದಲ್ಲಿಯೂ ಸದಸ್ಯರಾಗಿರುವರು. ತಮ್ಮ 82ನೇ ಇಳಿ ವಯಸ್ಸಿನಲ್ಲಿ ಸಮಾಜಕ್ಕೆ ಅಳಿಲು ಸೇವೆ ಮಾಡುತ್ತಾ, ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳೊಂದಿಗೆ ತುಂಬು ಜೀವನ ನಡೆಸುತ್ತಿರುವ ಶ್ರೀಮತಿ ಮಾಗಾನಹಳ್ಳಿ ರತ್ನಮ್ಮ ಹಾಗೂ ಕುಟುಂಬದವರ ಮೇಲೆ ಶ್ರೀ ಅಕ್ಕಮಹಾದೇವಿ ಆಶೀರ್ವಾದ ಸದಾ ಇರಲಿ ಎಂದು ಹಾರೈಸುವೆವು.

**- ಶ್ರೀಮತಿ ಶೋಭ ಎಸ್.ಕಣವಿ**
ಕಾರ್ಯಕಾರಿ ಸಮಿತಿ ಸದಸ್ಯೆ
ಶ್ರೀ ಅಕ್ಕಮಹಾದೇವಿ ಸಮಾಜ,
ದಾವಣಗೆರೆ

## ತಂದೆ-ತಾಯಿ ಕೊಲೆಗೆ ಮಗ ಸುಪಾರಿ

**(1ನೇ ಪುಟದಿಂದ)** ವಸ್ತುಗಳು ಹಾಗೂ ನಗದನ್ನು ಹಂತಕರು ಮುಟ್ಟಿರಲಿಲ್ಲ. ಹೀಗಾಗಿ ದರೋಡೆಯ ಉದ್ದೇಶದಿಂದ ಹತ್ಯೆ ನಡೆದಿಲ್ಲ, ಬೇರೆ ಉದ್ದೇಶ ಇರಬೇಕು ಎಂದು ಪೊಲೀಸರು ಶಂಕಿಸಿದ್ದರು. ಆಸ್ತಿಗೆ ಸಂಬಂಧಿಸಿದಂತೆ ಪ್ರಕಾಶ್ ಹಾಗೂ ವಿನಾಯಕ್ ನಡುವೆ ಗಲಾಟೆ ನಡೆದಿತ್ತು. ಈ ಹಿನ್ನೆಲೆಯಲ್ಲಿ ವಿನಾಯಕ್ ಹತ್ಯೆಗೆ ಸಂಚು ನಡೆಸಿದ್ದ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿನಾಯಕ್ ಬಾಕಳೆ, ಗದಗದ ಫೈರೋಜ್ ಖಾಜಿ, ಜಿಶನ್ ಖಾಜಿ, ಮಹಾರಾಷ್ಟ್ರದ ಸಾಂಗ್ಲಿಯ ಅವಳಿ ಸಹೋದರರಾದ ಸಾಹಿಲ್ ಅಶ್ಫಾಕ್ ಖಾಜಿ, ಸೊಹೇಲ್ ಅಶ್ಫಾಕ್ ಖಾಜಿ, ಸುಲ್ತಾನ್ ಜಿಲಾನಿ ಶೇಖ್, ಮಹೇಶ್ ಜಗನ್ನಾಥ್ ಸಾಳುಂಕೆ ಹಾಗೂ ವಹೀದ್ ಲಿಯಾಖತ್ ಬೇಪಾರಿ ಎಂಬುವವರನ್ನು ಬಂಧಿಸಲಾಗಿದೆ. ಕುಟುಂಬದವರ ಹತ್ಯೆಗಾಗಿ ಫೈರೋಜ್‌ಗೆ ವಿನಾಯಕ್ 65 ಲಕ್ಷ ರೂ.ಗಳ ಸುಪಾರಿ ನೀಡಿದ್ದ. ಆತ ವಾಹನ ಹಾಗೂ ಶಸ್ತ್ರಗಳ ವ್ಯವಸ್ಥೆ ಮಾಡಿದ್ದ ಎಂದು ಉತ್ತರ ವಲಯದ ಐ.ಜಿ.ಪಿ. ವಿಕಾಸ್ ಕುಮಾರ್ ತಿಳಿಸಿದ್ದಾರೆ.

ಮನೆಯಲ್ಲಿ ಕೇವಲ ಮೂವರಿದ್ದಾರೆ ಎಂದು ಭಾವಿಸಿ ಹಂತಕರು ಮನೆಗೆ ನುಗ್ಗಿದ್ದರು. ಅವರು ವಿನಾಯಕನ ಹತ್ಯೆ ನಂತರ ಮನೆಯನ್ನು ಲೂಟಿ ಮಾಡಿ, ಆ ಹಣವನ್ನೆಲ್ಲಾ ಹಂತಕರೇ ಪಡೆಯಬೇಕು ಎಂಬ ನಿರ್ಧಾರವಾಗಿತ್ತು. ಆದರೆ, ಪ್ರಕಾಶ್ ಬಾಕಳೆ ಅವರು ಈ ಕೃತ್ಯ ನಡೆಯುವಾಗ ಎಚ್ಚೆತ್ತುಕೊಂಡು ಬೊಬ್ಬೆ ಹಾಕಿದ್ದರು. ಇದರಿಂದ ಬೆದರಿದ ಹಂತಕರು ಸ್ಥಳದಿಂದ ಪರಾರಿಯಾಗಿದ್ದರು. ಇಲ್ಲದೇ ಹೋಗಿದ್ದರೆ ಅವರ ಹತ್ಯೆಯೂ ನಡೆಯುತ್ತಿತ್ತು ಎಂದು ಐ.ಜಿ.ಪಿ. ಕುಮಾರ್ ಹೇಳಿದ್ದಾರೆ. ನಾಲ್ವರು ಆರೋಪಿಗಳನ್ನು ಮೀರಜ್‌ನಲ್ಲಿ ಹಾಗೂ ಉಳಿದವರನ್ನು ಗದಗದಲ್ಲಿ ಬಂಧಿಸಲಾಗಿದೆ ಎಂದೂ ಅವರು ತಿಳಿಸಿದ್ದಾರೆ.

## ಕೇಜ್ರಿವಾಲ್‌ಗೆ ಮಧ್ಯಂತರ ಜಾಮೀನು ಕೇಳಿದ್ದ ಕಾನೂನು ವಿದ್ಯಾರ್ಥಿಗೆ ದಂಡ

ನವದೆಹಲಿ, ಏ. 22 - ನ್ಯಾಯಿಕ ಕಸ್ಟಡಿಯಲ್ಲಿರುವ ದೆಹಲಿ ಮುಖ್ಯ ಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಅಸಾಧಾರಣ ಮಧ್ಯಂತರ ಜಾಮೀನು ನೀಡಬೇಕೆಂದು ಕಾನೂನು ವಿದ್ಯಾರ್ಥಿಯೊಬ್ಬರು ದಾಖಲಿ ಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದೆಹಲಿ ಹೈಕೋರ್ಟ್ ತಳ್ಳಿ ಹಾಕಿದೆ.ಅರ್ಜಿದಾರರಿಗೆ 75 ಸಾವಿರ ರೂ.ಗಳ ದಂಡ ವಿಧಿಸಬೇಕು ಎಂದೂ ನ್ಯಾಯಾಲಯ ಆದೇಶಿಸಿದೆ.

ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನದಲ್ಲಿರುವ ಕೇಜ್ರಿವಾಲ್ ಬಿಡುಗಡೆ ಮಾಡಬೇಕೆಂದು ದಾಖಲಾಗಿರುವ ಅರ್ಜಿ ಸಂಪೂರ್ಣ ತಪ್ಪು ಕಲ್ಪನೆಯಿಂದ ಕೂಡಿದೆ. ಉನ್ನತ ಸ್ಥಾನ ಹೊಂದಿರು ವವರಿಗೆ ಅಸಾಧಾರಣ ಮಧ್ಯಂತರ ಜಾಮೀನು ನೀಡಲಾಗದು ಎಂದು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮನಮೋಹನ್ ಅವರ ನೇತೃತ್ವದ ಪೀಠ ಹೇಳಿದೆ. ಅರ್ಜಿದಾರರು ಕಾಲೇಜಿನಲ್ಲಿ ತರಗತಿಗಳಿಗೆ ತೆರಳಿದ್ದರೇ? ಅವರು ಕಾನೂನು ತತ್ವಗಳನ್ನು ಪಾಲಿಸುತ್ತಿದ್ದಂತೆ ಕಂಡು ಬರುತ್ತಿಲ್ಲ ಎಂದು ಪೀಠ ಹೇಳಿದೆ. ಪೀಠದಲ್ಲಿ ನ್ಯಾಯಮೂರ್ತಿ ಮನ್‌ಮೀತ್ ಪಿ.ಎಸ್. ಅರೋರ ಅವರು ಇದ್ದಾರೆ.

ಕೇಜ್ರಿವಾಲ್ ಅವರು ಕಾನೂನು ಪರಿಹಾರ ಕಂಡುಕೊಳ್ಳಲು ಮಾರ್ಗಗಳಿವೆ. ಅವರ ಪರವಾಗಿ ಅರ್ಜಿ ದಾಖಲಿಸಲು ಕಾನೂನು ವಿದ್ಯಾರ್ಥಿಗೆ ಯಾವುದೇ ಅಧಿಕಾರ ಇಲ್ಲ ಎಂದೂ ಪೀಠ ಹೇಳಿದೆ. ನ್ಯಾಯಾಲಯದಲ್ಲಿ ಹಾಜರಿದ್ದ ಕೇಜ್ರಿವಾಲ್ ಪರ ವಕೀಲರೂ ಸಹ, ಮೂರನೇ ಪಾರ್ಟಿಯಿಂದ ಜಾಮೀನು ಅರ್ಜಿ ದಾಖಲಾಗಿರುವುದನ್ನು ವಿರೋಧಿಸಿದರು.



## ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಮಹಾಲಕ್ಷ್ಮಿ ಲೇಔಟ್ ನಾಗರಿಕರ ಬೆಂಬಲ

ದಾವಣಗೆರೆ, ಏ. 22 - ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಬೆಂಬಲಿಸಿರುವ ನಗರದ ಮಹಾಲಕ್ಷ್ಮಿ ಲೇಔಟ್‌ನ ನಾಗರಿಕ ಹಿತರಕ್ಷಣಾ ಸಮಿತಿ ಸದಸ್ಯರು ಬೆಂಬಲ ವ್ಯಕ್ತಪಡಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರನ್ನು ಭೇಟಿ ಮಾಡಿದ ನಾಗರಿಕರು ಬೆಂಬಲ ಸೂಚಿಸಿದರು.

ಮಹಾಲಕ್ಷ್ಮಿ ಲೇಔಟ್‌ನಲ್ಲಿ ಮೂಲಸೌಕರ್ಯ ಇಲ್ಲ ಎಂದು ಹೇಳಿ ಮತದಾನ ಬಹಿಷ್ಕಾರಕ್ಕೆ ತಿರ್ಮಾನಿಸಿದ್ದ ನಾಗರಿಕರನ್ನು ಇತ್ತೀಚೆಗಷ್ಟೇ ಸಚಿವರ ಪುತ್ರ ಸಮರ್ಥ ಮಲ್ಲಿಕಾರ್ಜುನ್ ಅವರು ಮನವೊಲಿಸಿದ್ದರು.

ಮಹಾಲಕ್ಷ್ಮಿ ಲೇಔಟ್‌ನ ಅಭಿವೃದ್ಧಿಗೆ ಈಗಾಗಲೇ ಕ್ರಮ ಕೈಗೊಂಡಿರುವುದನ್ನು ಮನಗಂಡ ನಾಗರಿಕರು, ಕಾಂಗ್ರೆಸ್ ಮುಖಂಡ ಮೇಕಾ ಮುರುಳಿಕೃಷ್ಣ ಇವರ ನೇತೃತ್ವದಲ್ಲಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರನ್ನು ಭೇಟಿಯಾಗಿ ಬೆಂಬಲ ಸೂಚಿಸಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಪರ ಮತ ಚಲಾಯಿಸುವುದರ ಜೊತೆಗೆ ಪ್ರಚಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನಾಗರಾಜ್, ಬಸವರಾಜಪ್ಪ, ರಂಗನಾಥ, ವಸಂತ ಬೆಣ್ಣೆದೋಸೆ ಹೋಟೆಲ್, ಪ್ರಕಾಶ್, ಪ್ರಸನ್ನ, ಸುರೇಶ್, ಹೆಚ್.ಎಸ್. ಚಂದ್ರಶೇಖರ್, ಪ್ರಸಾದ್, ರಾಜು, ಪ್ರತಾಪ್, ವಿಜಯಕುಮಾರ್ ಕೆ.ಎಸ್., ಕೊಟ್ರೇಶ್, ವಿವೇಕ್, ಬಿ.ಜಗದೀಶ್, ಸುಬ್ರಹ್ಮಣ್ಯ ಟಿ.ಹೆಚ್., ಶೇಖ ಸಾಹೇಬ್, ಹೆಚ್.ಗಣೇಶ್ ರಾವ್, ಜಯಣ್ಣ ಕೆ.ಎಸ್., ರಂಗನಾಥ ವೈ.ಕೆ., ಮತ್ತಿತರರಿದ್ದರು.

## ಸಂಸದರ ನಡುವಳಿಕೆಯೇ ನಾನು ಕಾಂಗ್ರೆಸ್ ಸೇರಲು ಕಾರಣ: ಸೋಗಿ ಶಾಂತಕುಮಾರ್

ದಾವಣಗೆರೆ, ಏ.22- ಸಂಸದರ ನಡವಳಿಕೆಯಿಂದ ಬೇಸತ್ತು, ಹಿರಿಯರಾದ ಶಾಮನೂರು ಶಿವಶಂಕರಪ್ಪ ಹಾಗೂ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ ನಾನು ಕಾಂಗ್ರೆಸ್ ಪಕ್ಷ ಸೇರಿದ್ದೇನೆ ಎಂದು ಮಹಾನಗರ ಪಾಲಿಕೆ ಸದಸ್ಯ, ಪಂಚಮಸಾಲಿ ಸಮಾಜದ ಮುಖಂಡ ಸೋಗಿ ಶಾಂತಕುಮಾರ್ ಹೇಳಿದ್ದಾರೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿಯಲ್ಲಿ ಸೂಕ್ತ ಗೌರವ ಇಲ್ಲ. ನನ್ನ ಸ್ವಾಭಿಮಾನಕ್ಕೆ ಧಕ್ಕೆಯಾಗಿದೆ. ಗೌರವ ಇರದ ಜಾಗದಲ್ಲಿ ಇರಬಾರದೆಂದು ನಿರ್ಧರಿಸಿ ಕಾಂಗ್ರೆಸ್‌ಗೆ ಬಂದಿದ್ದೇನೆ. ಇನ್ನೂ ಅನೇಕ ಬಿಜೆಪಿ ಮುಖಂಡರು ಕಾಂಗ್ರೆಸ್ ಸೇರಲಿದ್ದಾರೆ ಎಂದು ಹೇಳಿದರು.

ಸಂಸದರು ನನ್ನ ವಾರ್ಡ್ ಅಭಿವೃದ್ಧಿ ಕಾರ್ಯಗಳಿಗೆ ಸ್ಪಂದಿಸಲಿಲ್ಲ. ನನ್ನಂತೆ ಅನೇಕ ಬಿಜೆಪಿ ಪಾಲಿಕೆ ಸದಸ್ಯರಿಗೆ ಗೌರವ ಕೊಡಲಿಲ್ಲ. ಅಲ್ಲಿ ಉಸಿರು ಕಟ್ಟುವಂತಹ ವಾತಾವರಣವಿದೆ ಎಂದು ಹೇಳಿದರು.

ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ನನ್ನ ರಾಜಕೀಯ ಗುರುಗಳು. ಅವರ ಬಗ್ಗೆ ನನಗೆ ಅಪಾರ ಗೌರವವಿದೆ. ಅಲ್ಲದೇ ಬಿಜೆಪಿಯಲ್ಲಿರುವ ನನ್ನ ಸ್ನೇಹಿತರ ಮೇಲೂ ಗೌರವವಿದೆ ಎಂದು ಸೋಗಿ ಶಾಂತಕುಮಾರ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಪಾಲಿಕೆ ಸದಸ್ಯರುಗಳಾದ ಗಡಿಗುಡಾಳ್ ಮಂಜುನಾಥ್, ಎ.ನಾಗರಾಜ್, ಕೆ.ಚಮನ್ ಸಾಬ್, ಮುಖಂಡರುಗಳಾದ ಡಿ.ಬಸವರಾಜ್, ಕೆ.ಜಿ ಶಿವಕುಮಾರ್, ಗೋಪಿನಾಯ್ಕ, ಡೋಲಿ ಚಂದ್ರು, ಮಲ್ಲಿಕಾರ್ಜುನ ಇಂಗಳೇಶ್ವರ, ಸಚಿನ್, ಮನು ಇತರರಿದ್ದರು.

## ಬಂಡಾಯ ಅಭ್ಯರ್ಥಿ ಈಶ್ವರಪ್ಪ ಉಚ್ಚಾಟನೆ

**(1ನೇ ಪುಟದಿಂದ)** ಗಡುವು ನೀಡಲಾಗಿತ್ತು. ಆದರೆ, ಅವರು ನಾಮಪತ್ರ ಹಿಂಪಡೆಯದ ಕಾರಣ ರಾಜ್ಯ ಬಿಜೆಪಿ ಶಿಸ್ತು ಸಮಿತಿ ಉಚ್ಚಾಟನೆಯ ಕ್ರಮ ತೆಗೆದುಕೊಂಡಿದೆ. ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ ಹಾಗೂ ಎಲ್ಲಾ ಹೊಣೆಗಾರಿಕೆಗಳಿಂದ ಬಿಡುಗಡೆ ಮಾಡಲಾಗಿದೆ ಎಂದು ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜ್ ಪಾಟೀಲ್ ತಿಳಿಸಿದ್ದಾರೆ.

## ಮೊದಲೇ ಅರಳಿದ ಕಮಲ !

**(1ನೇ ಪುಟದಿಂದ)** ಪಾಟೀಲ್ ಹೇಳಿದ್ದಾರೆ. ಸಣ್ಣ ಉದ್ಯಮಗಳ ಮಾಲೀಕರು ಹಾಗೂ ಉದ್ಯಮ ಸಮುದಾಯಗಳ ಆಕ್ರೋಶದಿಂದ ಬೆದರಿರುವ ಬಿಜೆಪಿ, ಸೂರತ್ ಲೋಕಸಭಾ ಕ್ಷೇತ್ರದಲ್ಲಿ ಮ್ಯಾಚ್ ಫಿಕ್ಸಿಂಗ್ ಮಾಡಿಕೊಂಡಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಆರೋಪಿಸಿದ್ದಾರೆ. ಹಣ ಬಲದ ಮೂಲಕ ಪ್ರತಿಪಕ್ಷಗಳನ್ನು ಒಡೆಯಲು ಬಿಜೆಪಿ ಪ್ರಯತ್ನ ನಡೆಸಿದೆ ಎಂದು ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಕುಂಭನಿ ಆರೋಪಿಸಿದ್ದಾರೆ.

# ದೇಶದ ಯುವಕರಿಗೆ ಮೋದಿಯೇ ಗ್ಯಾರಂಟಿ

**(1ನೇ ಪುಟದಿಂದ)** ಪರಿಣಾಮಕಾರಿ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳುತ್ತೇನೆ ಎಂದರು.

ಮಾಜಿ ಸಚಿವ ಜಿ.ಕರುಣಾಕರರೆಡ್ಡಿ ಮಾತನಾಡಿ, ಹರಪನಹಳ್ಳಿ ತಾಲ್ಲೂಕು ಅಭಿವೃದ್ಧಿಗೆ ನಾನು ಸಿದ್ದೇಶಣ್ಣ ಸಾಕಷ್ಟು ಅನುದಾನ ತಂದಿದ್ದೇವೆ. ನಿಮ್ಮ ಗ್ರಾಮಗಳಿಗೆ ಸಿಸಿ ರಸ್ತೆ, ಚರಂಡಿ, ಕುಡಿವ ನೀರು ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಿದ್ದೇವೆ. ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ ಕೊಟ್ಟಿದ್ದು ನಾವೇ. ಈ ಬಾರಿ ಗಾಯತ್ರಿ ಸಿದ್ದೇಶ್ವರ ಅವರು ಹೆಚ್ಚಿನ ಮತಗಳ ಅಂತರದಿಂದ ಗೆದ್ದು ದೆಹಲಿಗೆ ಹೋದರೆ ತಾಲ್ಲೂಕಿನ ಸರ್ವಾಂಗೀಣ ಅಭಿವೃದ್ಧಿಗೆ ಆದ್ಯತೆ ನೀಡುತ್ತಾರೆ. ನಮ್ಮ ಕಾರ್ಯಕರ್ತರು ನೀವೇ ಅಭ್ಯರ್ಥಿ ಎಂದುಕೊಂಡು ಮನೆ ಮನೆಗೂ ಹೋಗಿ ಗಾಯತ್ರಿ ಸಿದ್ದೇಶ್ವರ ಅವರ ಪರ ಮತಯಾಚಿಸಬೇಕು ಎಂದು ಕರೆ ನೀಡಿದರು.

ಶ್ರೀಮತಿ ಕಮಲಾ ನಿರಾಣಿ, ಬಿಜೆಪಿ ಮುಖಂಡರಾದ ಗಣೇಶ್, ಚಿಗಟೇರಿ ಮಂಜುನಾಥ್, ಬೆಣ್ಣೆಹಳ್ಳಿ ಮಾರುತಿ, ಲೋಕೇಶ್, ಕಲ್ಲಣ್ಣಗೌಡ, ಮಂಜುನಾಥ್, ಹನುಮಂತಪ್ಪ, ಮಹಾಂತೇಶ್, ಬಸವರಾಜ್, ಅಂಜಿನಪ್ಪ ಮತ್ತು ಇತರರು ಉಪಸ್ಥಿತರಿದ್ದರು.

**ಬಿಜೆಪಿ ಸೇರ್ಪಡೆ:** ಹರಪನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಚಾರ ಕಾರ್ಯ ನಡೆಸುತ್ತಿದ್ದ ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಹಾಗೂ ಮಾಜಿ ಸಚಿವ ಜಿ.ಕರುಣಾಕರರೆಡ್ಡಿ ಅವರ ಸಮ್ಮುಖದಲ್ಲಿ ವಿವಿಧ ಗ್ರಾಮಗಳಲ್ಲಿ ಕಾಂಗ್ರೆಸ್ ಮುಖಂಡರು ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಗೊಂಡರು. ಮೈದೂರು ಗ್ರಾಮದಲ್ಲಿ ಮುಖಂಡರಾದ ಅರವಿಂದ್ ಗೌಡ, ಲೋಹಿತ್, ಸುರೇಶ್, ಮಂಜುನಾಥ್ ಮತ್ತು ಬೆಂಬಲಿಗರು ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಯಾದರು. ಬೆಣ್ಣೆಹಳ್ಳಿ ಗ್ರಾಮದಲ್ಲಿ ರೇವಣಸಿದ್ದಪ್ಪ ಮತ್ತು ಬೆಂಬಲಿಗರು ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರ್ಪಡೆಯಾದರು. ನರೇಂದ್ರ ಮೋದಿ ಅವರ ಆಡಳಿತ, ಸಿದ್ದೇಶಣ್ಣನ ಅಭಿವೃದ್ಧಿ ಕೆಲಸ ನೋಡಿ ಬಿಜೆಪಿ ಸೇರ್ಪಡೆಯಾಗುತ್ತಿದ್ದೇವೆ ಎಂದರು.

### ನೇಹಾ ಹತ್ಯೆ ಬಗ್ಗೆ ಕಾಂಗ್ರೆಸ್ ಅಭ್ಯರ್ಥಿ ನಿಲುವೇನು...?

ಹುಬ್ಬಳ್ಳಿಯಲ್ಲಿ ಅಮಾನುಷವಾಗಿ ಹತ್ಯೆಯಾದ ವಿದ್ಯಾರ್ಥಿನಿ ನೇಹಾ ಹಿರೇಮಠ ಘಟನೆಗೆ ಇಡೀ ರಾಜ್ಯವೇ ಆಕ್ರೋಶ ವ್ಯಕ್ತಪಡಿಸುತ್ತಿರುವಾಗ ದಾವಣಗೆರೆ ಕಾಂಗ್ರೆಸ್ ಅಭ್ಯರ್ಥಿ ಒಂದೇ ಒಂದು ಮಾತು ಆಡಿಲ್ಲ. ಇದು ಮಹಿಳೆಯರ ಬಗ್ಗೆ ಅವರಿಗಿರುವ ಅಸಡ್ಡೆತನ ತೋರಿಸುತ್ತದೆ. ಹತ್ಯೆ ಖಂಡಿಸಿ ಹೇಳಿಕೆ ನೀಡಿದರೆ ಎಲ್ಲಿ ಒಂದು ಕೋಮಿನ ಜನ ಸಿಟ್ಟಾಗುತ್ತಾರೋ ಎಂಬ ಭಯ ಕಾಂಗ್ರೆಸ್ ಅಭ್ಯರ್ಥಿಗಿದೆ. ಇದು ಒಂದು ಕೋಮಿನ ತುಷ್ಟೀಕರಣ ಅಲ್ಲದೆ ಮತ್ತೇನು ಎಂದು ಪ್ರಶ್ನಿಸಿದರು. ಅವರು ಒಂದು ಹೆಣ್ಣಾಗಿ ಮತ್ತೊಂದು ಹೆಣ್ಣಿನ ಹತ್ಯೆ ಖಂಡಿಸದೇ ಇರುವುದು ದುರಂತ. ಇದನ್ನು ಕ್ಷೇತ್ರದ ಜನ ಗಮನಿಸಬೇಕು ಎಂದರು.

## ಅಕ್ರಮ : ನೇಮಕ ರದ್ದು

**(1ನೇ ಪುಟದಿಂದ)** ಮುಖ್ಯ ನ್ಯಾಯಮೂರ್ತಿಗಳು ವಿಚಾರಣೆಗಾಗಿ ವಿಭಾಗೀಯ ಪೀಠ ರಚಿಸಿದ್ದರು.

ಕಳೆದ ಮಾರ್ಚ್ 20ರಂದು ಪ್ರಕರಣದ ವಿಚಾರಣೆ ಪೂರ್ಣಗೊಂಡಿತ್ತು ಹಾಗೂ ತೀರ್ಪು ಕಾಯ್ದಿರಿಸಲಾಗಿತ್ತು. ಪರೀಕ್ಷೆಯಲ್ಲಿ ಹಾಜರಾಗಿದ್ದ ಕೆಲ ಅಭ್ಯರ್ಥಿಗಳು ಆಯ್ಕೆ ಪ್ರಕ್ರಿಯೆ ಪ್ರಶ್ನಿಸಿ ಅರ್ಜಿ ದಾಖಲಿಸಿದ್ದರು. ನಂತರ ನ್ಯಾಯಮೂರ್ತಿ ಅಭಿಜಿತ್ ಗಂಗೋಪಾಧ್ಯಾಯ್ ಅವರ ನೇತೃತ್ವದ ಏಕಸದಸ್ಯ ಪೀಠ ಸಿ.ಬಿ.ಐ. ತನಿಖೆಗೆ ಆದೇಶಿಸಿತ್ತು.

ಅಕ್ರಮಗಳು ಕಂಡು ಬಂದ ಹಿನ್ನೆಲೆಯಲ್ಲಿ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿಯನ್ನು ವಜಾಗೊಳಿಸುವಂತೆಯೂ ಹೈಕೋರ್ಟ್ ತಿಳಿಸಿತ್ತು.

ನಂತರ ಈ ವಿಷಯ ಸುಪ್ರೀಂ ಕೋರ್ಟ್ ತಲುಪಿತ್ತು. ಈ ಕುರಿತ ವಿಚಾರಣೆಗಾಗಿ ವಿಭಾಗೀಯ ಪೀಠ ರಚಿಸಲು ನವೆಂಬರ್ 9, 2023ರಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು.

ಈ ಬಗ್ಗೆ ಎರಡು ತಿಂಗಳಲ್ಲಿ ವಿಚಾರಣೆ ನಡೆಸಿದ್ದ ಸಿ.ಬಿ.ಐ., ಹೈಕೋರ್ಟ್‌ಗೆ ತನ್ನ ವರದಿ ಸಲ್ಲಿಸಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯದ ಮಾಜಿ ಶಿಕ್ಷಣ ಸಚಿವ ಪಾರ್ಥ ಚಟರ್ಜಿ ಸೇರಿದಂತೆ ಹಲವರನ್ನು ಬಂಧಿಸಲಾಗಿತ್ತು.


**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
29ನೇ ವರ್ಷದ
**ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ**
ಮಾರ್ಚ್ 23 ರಿಂದ 2 ತಿಂಗಳ ಕಾಲ.
ಇಂದಿನ ಮಜ್ಜಿಗೆ ಪ್ರಾಯೋಜಕರು :-
ದಿ. ಶ್ರೀ ಕಂಚಿಕೇರಿ ಮಹೇಶ್ ಮತ್ತು ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಮಹಾನಗರ ಪಾಲಿಕೆ ಆವರಣ

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಹೌಸಿಂಗ್ ಬೋರ್ಡ್ ಕಮರ್ಷಿಯಲ್
12x18 ಮೀ (40X60 ಉತ್ತರ 100 ಅಡಿ ರಸ್ತೆಗೆ (89 ಲಕ್ಷ)
**ಕಿರಣ್ ಬೂಸ್ನೂರ್**
98440 63409, 97315-63409
ರಿಜಿಸ್ಟರ್ ಖರ್ಚು+ಕಮೀಷನ್ ಸೇರಿ

**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
**ಸ್ವಾಮಿ ಏಜೆಂಟ್, ವಿದ್ಯಾನಗರ**
97421 44715

**ಸೈಟ್ ಮಾರಾಟಕ್ಕೆ (KHB)**
1) 40X60 ಪಶ್ಚಿಮ (69 ಲಕ್ಷ)
2) 40x60 ದಕ್ಷಿಣ (60 ಲಕ್ಷ)
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409
(ಲೊಕೇಶನ್ ತುಂಬಾ ಚೆನ್ನಾಗಿದೆ)

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದವಾಡ ಹತ್ತಿರ, ಸುಶಿ ಕನ್ವೆನ್ಷನ್ ಹಾಲ್ ಹಿಂಭಾಗ ಹೊಸ ಬಡಾವಣೆಗಳಲ್ಲಿ 30x40 ಪಶ್ಚಿಮ, 30x50 ಉತ್ತರ, 30x40 ಪಶ್ಚಿಮ ಅಕ್ಕ-ಪಕ್ಕ 30x50 ಪೂರ್ವ.
**ಸ್ವಾಮಿ ಏಜೆಂಟ್, ವಿದ್ಯಾನಗರ**
97421 44715

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
ಕಿರಾಣಿ ಅಂಗಡಿ ಹಾಗೂ ಹೋಲ್ ಸೇಲ್ ಅಂಗಡಿಗೆ ಅಕೌಂಟ್ಸ್ ವಿಭಾಗದಲ್ಲಿ ಕೆಲಸ ಮಾಡಲು ಟ್ಯಾಲಿ ಅನುಭವವುಳ್ಳ ಹುಡುಗಿಯರು ಬೇಕಾಗಿದ್ದಾರೆ. ಸಂಬಳ 7000 ರಿಂದ 8000. ಈ ಕೆಳಗಿನ ನಂಬರ್‌ಗೆ ರೆಸ್ಯೂಮ್ ಕಳುಹಿಸಿ
94481 09762

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
**ಮಾನಸ ಕಮ್ಯೂನಿಟಿ ಕಾಲೇಜ್ (ರಿ)**
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಮಾರಾಟಕ್ಕೆ ಇವೆ**
ಹೋಟೆಲ್‌ಗೆ ಬೇಕಾಗುವ ಎಲ್ಲಾ ಸಾಮಗ್ರಿಗಳು ಮಾರಾಟಕ್ಕೆ ಇವೆ.
ಸಂಪರ್ಕಿಸಿ :
94823 72955

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಹೋಟೆಲ್ ಕೆಲಸಕ್ಕೆ ಸಪ್ಲೈಯರ್ ಬೇಕಾಗಿದ್ದಾರೆ**
ಸಾನ್ವಿ ರೆಸ್ಟೋರೆಂಟ್,
ಹೈಟೆಕ್ ಆಸ್ಪತ್ರೆ ರಸ್ತೆ, ಲಕ್ಷ್ಮೀ ಲೇ ಔಟ್, ದಾವಣಗೆರೆ.
80889 55916
90197 23292

**ಮನೆ ಮಾರಾಟಕ್ಕಿದೆ**
ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಶ್ರೀ ಸಿದ್ದವೀರಪ್ಪ ಬಡಾವಣೆ, 8ನೇ ಕ್ರಾಸಿನಲ್ಲಿರುವ #2001ರಲ್ಲಿ 30x40 ಅಳತೆಯಲ್ಲಿರುವ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿ :
**ಶ್ರೀ ಜಿ.ಹೆಚ್. ಮಂಜುನಾಥ್**
88849 62111

**ಮನೆ ಬಾಡಿಗೆಗೆ ಇದೆ**
1ನೇ ಮೇನ್, 6ನೇ ಕ್ರಾಸ್, BSNL ಹಿಂಭಾಗ ರಸ್ತೆ, ಹಿಟ್ಟಿನ ಗಿರಣಿ ಹತ್ತಿರ 2BHK ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ.
89517 16682

**ತಕ್ಷಣ ಬೇಕಾಗಿದ್ದಾರೆ**
ಟ್ಯಾಲಿ ಅನುಭವವುಳ್ಳ ಕಂಪ್ಯೂಟರ್ ಆಪರೇಟರ್ ಮತ್ತು ಕ್ಲರ್ಕ್ ಕಂ ಕ್ಯಾಷಿಯರ್ ಹುದ್ದೆಗಳಿಗೆ ಬೇಕಾಗಿದ್ದಾರೆ.
94483 40880


**ತಕ್ಷಣ ಬೇಕಾಗಿದ್ದಾರೆ**
ಹೋಲ್‌ಸೇಲ್ ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹಮಾಲರುಗಳು ಬೇಕಾಗಿದ್ದಾರೆ ತಿಂಗಳ ವರಮಾನ 20,000/- ರೂಪಾಯಿಗಳ ತನಕ.
94483 40880

**WANTED**
We are Hirnig telecallers
Good Communication Skill.
Required : (Only for Girls, Womens)
Salary : 6000, 7000 (Under Graduates)
Salary : 8000, 9000, 10,000 (Post Graduates)
Contact : 95350 51589, 78670 75786
Office Location : Hasbahavi Circle, K.R Market, Davangere.

**ಬೇಕಾಗಿದ್ದಾರೆ**
ACE TRACTOR SHOWROOM ಗಾಗಿ
ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಆಕರ್ಷಕ ಸಂಭಾವನೆ ಮತ್ತು ಪ್ರತ್ಯೇಕ ಇನ್ಸೆಂಟಿವ್ ನೀಡಲಾಗುವುದು. ಅನುಭವವುಳ್ಳವರಿಗೆ ಪ್ರಥಮ ಆದ್ಯತೆ.
9916955111, 9448202030

**ಸೈಟುಗಳು ಮಾರಾಟಕ್ಕಿವೆ**
ಹರಿಹರ KHB ಕಾಲೋನಿ ಪಕ್ಕದ HRM ಬಡಾವಣೆಯಲ್ಲಿ 30x40 ಅಳತೆಯ ಪೂರ್ವ-ಪಶ್ಚಿಮ ದಿಕ್ಕಿನ ಅಳತೆಯ 4 ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
98809 33630

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
**ದಾವಣಗೆರೆ : 2&3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.**
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26
ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಕೆಲಸಕ್ಕೆ ಬೇಕಾಗಿದ್ದಾರೆ**
ಆಫೀಸ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ. ಫೀಲ್ಡ್ ವರ್ಕ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
86603 71199
77607 80857

**ಬೇಕಾಗಿದ್ದಾರೆ**
ಟಾಟಾ ಏಸ್ ಓಡಿಸಬಲ್ಲ ಬ್ಯಾಡ್ಜ್‌ವುಳ್ಳ ಡ್ರೈವರ್, ಎಸ್ ಎಸ್.ಎಲ್ ಸಿ ಪಾಸ್/ಫೇಲಾಗಿರುವವರು ಸೇಲ್ಸ್ ಮನ್ ಹಾಗೂ ಡಿಲೆವರಿ ಬಾಯ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. ಅನುಭವವುಳ್ಳವರು ಸಂಪರ್ಕಿಸಿ.
**ಮಣಿಕಂಠ ಏಜೆನ್ಸೀಸ್**
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**ಬೇಕಾಗಿದ್ದಾರೆ**
ರಿಸೆಪ್ಷನಿಸ್ಟ್ ಕೆಲಸಕ್ಕೆ (ಮಹಿಳಾ ಅಭ್ಯರ್ಥಿ) ಹಾಗೂ ಮಾರ್ಕೆಟಿಂಗ್‌ನಲ್ಲಿ ಅನುಭವ (ಬೈಕ್ ಹೊಂದಿರುವ) ಪುರುಷ ಅಭ್ಯರ್ಥಿ ಕೆಲಸಕ್ಕೆ ಬೇಕಾಗಿದ್ದಾರೆ
93803 89236

**ಬೇಕಾಗಿದ್ದಾರೆ**
1) ಆಯಾ
2) ವಾಚ್‌ಮನ್
(ಹಗಲು ಮತ್ತು ರಾತ್ರಿ ಡ್ಯೂಟಿ)
**ಆಲೂರು ಚಂದ್ರಶೇಖರಪ್ಪ ಮೆಮೋರಿಯಲ್ ಆಸ್ಪತ್ರೆ,**
2ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-577002

**ಬೇಕಾಗಿದ್ದಾರೆ**
ದೇವಸ್ಥಾನಕ್ಕೆ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ : ವಸತಿ ವ್ಯವಸ್ಥೆ ಇರುತ್ತದೆ.
77230 46988

**ಬೇಕಾಗಿದ್ದಾರೆ**
ಡ್ರೈವರ್ ಮತ್ತು ರಿಸಪ್ಷನಿಸ್ಟ್ ಬೇಕಾಗಿದ್ದಾರೆ. ಸಂಪರ್ಕಿಸಿ :
96205 95579

ಶ್ರೀ ದುಗ್ಗಮ್ಮದೇವಿ ಪ್ರಸನ್ನ
**ಟಗರು ಮಾರಾಟಕ್ಕಿದೆ**
ನೇರ ರೈತರಿಂದ ಮಾರಾಟ 2 ಹಲ್ಲು, 4 ಹಲ್ಲಿನ ಟಗರುಗಳು ಸಿಗುತ್ತವೆ. ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ.
80883 67539, 97390 63544

**FOR SALE**
*PLAY SCHOOL ITEMS*
Desks, White boards
Teaching Materials
Full School Setup
KTG Nagar DVG
90663 45346

**ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ ಹಾಗೂ ಪ್ರತಿಷ್ಠಿತ Pooja International Hotel (P.B. Road) ಸುತ್ತ-ಮುತ್ತಲಿನ ಪ್ರದೇಶಗಳಿಗೆ ಕನಿಷ್ಠ ಓದಲು, ಬರೆಯಲು ಬರುವಂತಹ, ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್ಸ್ ಕೂಡಲೇ ಬೇಕಾಗಿದ್ದಾರೆ. ಆಕರ್ಷಕ ಸಂಬಳದೊಂದಿಗೆ ESI / PF ಸೌಲಭ್ಯದೊಂದಿಗೆ 9000 ದಿಂದ 10000. ಸಂಪರ್ಕಿಸಿ :
90355 36252, 73539 50027

**ಬೇಕಾಗಿದ್ದಾರೆ**
ಪುರುಷರು ಆಫೀಸ್ ಅಸಿಸ್ಟೆಂಟ್ ಕೆಲಸ ಮಾಡಲು ಬೇಕಾಗಿದ್ದಾರೆ.ಕಂಪ್ಯೂಟರ್ ನಲ್ಲಿ ಕನ್ನಡ, ಇಂಗ್ಲಿಷ್ ಬಲ್ಲವರಿರಬೇಕು ಹಾಗೂ ಅಟೆಂಡರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆಯ ಮಿತಿ ಇಲ್ಲ. ಕ್ರಿಯಾಶೀಲತೆಗೆ ಆದ್ಯತೆ . ಯಾವುದೇ ವಯಸ್ಸಿನವರು ಸಂಪರ್ಕಿಸಿ:
ಶ್ರೀ ರೇಣುಕಾದೇವಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ (ರಿ.)
ಬಿನ್ನಿ ಕಂಪನಿ ರಸ್ತೆ, HDFC ಬ್ಯಾಂಕ್ ಪಕ್ಕ, ದಾವಣಗೆರೆ.
94483 38657

**ಅಧಿಕೃತ ಚೀಟಿ ಸಂಸ್ಥೆ**
ರೂ. 5 ಲಕ್ಷ ಚೀಟಿ ಪ್ರಾರಂಭ.
50 ಸದಸ್ಯರು 6500ರೂ. ರಿಂದ 10,000 ರೂ. ವರೆಗೆ
**ಸ್ಕಂದ ಚಿಟ್ ಫಂಡ್ಸ್ (ರಿ)**
78997 75159

**OFFICE SPACE FOR RENT**
1, 2 & Basement Floor, (1000Sqft + Lift) ATM / Mobiles Shop Space, PB Road, Opp, RH Office Dvg.
99646 99096

**REQUIRED**
Site Supervisor for RR Nagar Bangalore
Experience 1 to 2 years
89519 38228

**ಕರ್ನಾಟಕ ಮುಕ್ತ ವಿದ್ಯಾಲಯ (KOS)**
ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಶ್ವತ ಮಾನ್ಯತೆ ಪಡೆದಿದೆ
ಶಿಕ್ಷಣ ವಂಚಿತರಾದವರಿಗೆ ನೇರ ಪರೀಕ್ಷೆ ಎಸ್ಸೆಸ್ಸೆಲ್ಸಿ/ಪಿಯುಸಿ/ಪದವಿ/ಸ್ನಾತಕೋತ್ತರ ಪದವಿ ಮತ್ತು ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಾರಂಭ
**ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್,**
ಸೋಮ ಮೆಡಿಕಲ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 87620 58369, 82173 02649

# ಲೋಕಸಭಾ ಚುನಾವಣೆ : ಪ್ರತಿ ಅಭ್ಯರ್ಥಿಗೆ 95 ಲಕ್ಷದವರೆಗೆ ಖರ್ಚು-ವೆಚ್ಚ ಮಾಡಲು ಅವಕಾಶ




ದಾವಣಗೆರೆ, ಏ. 22 - ಲೋಕಸಭಾ ಚುನಾವಣೆ ನಡೆಯುತ್ತಿದ್ದು, ಚುನಾವಣಾ ಅಂತಿಮ ಕಣದಲ್ಲಿನ ಅಭ್ಯರ್ಥಿಗಳು ಚುನಾವಣಾ ಲೆಕ್ಕವನ್ನು ದಿನನಿತ್ಯ ನಿರ್ವಹಣೆ ಮಾಡಿಕೊಳ್ಳುವುದು ಕಡ್ಡಾಯವಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ತಿಳಿಸಿದರು.

ಅವರು ಸೋಮವಾರ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಅಂತಿಮ ಚುನಾವಣಾ ಕಣದಲ್ಲಿ ಉಳಿದ ಅಭ್ಯರ್ಥಿಗಳಿಗೆ ಚುನಾವಣಾ ಪ್ರಕ್ರಿಯೆಗಳ ಬಗ್ಗೆ ಮಾಹಿತಿ ನೀಡಿದರು.

ಪ್ರತಿ ಅಭ್ಯರ್ಥಿಗಳಿಗೆ ರೂ.95 ಲಕ್ಷದವರೆಗೆ ಖರ್ಚು-ವೆಚ್ಚ ಮಾಡಲು ಅವಕಾಶ ಇರುತ್ತದೆ. ಎಲ್ಲಾ ಅಭ್ಯರ್ಥಿಗಳು ಖರ್ಚು-ವೆಚ್ಚದ ಲೆಕ್ಕವನ್ನು ಪಾರ್ಟ್. ಎ ರಡಿ ಪ್ರತಿ ನಿತ್ಯದ ವರದಿ, ಇದರಲ್ಲಿ ಖರ್ಚು ಮತ್ತು ಹಣದ ಮೂಲ ನಮೂದು ಮಾಡಬೇಕು. ದೇಣಿಗೆ ಬಂದಿದ್ದಲ್ಲಿ ಅವರ ವಿವರ ನಮೂದಿಸಬೇಕು. ಪಾರ್ಟ್ ಬಿ ರಡಿ ಕ್ಯಾಶ್‌ಬುಕ್ ನಿರ್ವಹಣೆ ಮಾಡಬೇಕು. ಪಾರ್ಟ್.ಸಿ ರಡಿ ಬ್ಯಾಂಕ್ ಪಾಸ್ ಬುಕ್ ನಿರ್ವಹಣೆ ಮಾಡಬೇಕು. ರೂ.10 ಸಾವಿರ ವರೆಗೆ ನಗದು ನೀಡಲು ಮಾತ್ರ ಅವಕಾಶ ಇದ್ದು ಇದಕ್ಕೂ ಮೇಲ್ಪಟ್ಟಲ್ಲಿ ಕ್ರಾಸ್ ಮಾಡಿದ ಚೆಕ್, ಆರ್.ಟಿ.ಜಿ.ಎಸ್ ಮಾಡಬೇಕು. ಖರ್ಚು ಮಾಡಿದ ಎಲ್ಲಾ ವ್ಯವಹಾರಕ್ಕೂ ರಸೀದಿ ಮತ್ತು ಬಿಲ್ಸ್‌ಗಳನ್ನು ಇಟ್ಟುಕೊಳ್ಳಬೇಕಾಗುತ್ತದೆ.

ಅಭ್ಯರ್ಥಿಗಳು ಪ್ರತಿನಿತ್ಯದ ಖರ್ಚು-ವೆಚ್ಚ ತಾಳೆಯನ್ನು ಏ. 26, ಮೇ 2 ಮತ್ತು 6 ರಂದು ಅಕೌಂಟಿಂಗ್ ಟೀಮ್‌ನೊಂದಿಗೆ ತಾಳೆ ಮಾಡಿಸಿಕೊಳ್ಳಬೇಕು. ನಂತರ ಅಂತಿಮವಾಗಿ ಫಲಿತಾಂಶ ಪ್ರಕಟವಾದ 26ನೇ ದಿನ ವೆಚ್ಚ ವೀಕ್ಷಕರ ಸಮಕ್ಷಮ ಅಂತಿಮ ಹಂತದ ವೆಚ್ಚ ನಿರ್ವಹಣಾ ಸಭೆ ನಡೆಯಲಿದೆ. ಯಾರು ಸರಿಯಾಗಿ, ಸಮಯಕ್ಕೆ ನೀಡದಿದ್ದಲ್ಲಿ ಅಭ್ಯರ್ಥಿತನಕ್ಕೆ ತೊಂದರೆಯಾಗಲಿದೆ.

ಅಭ್ಯರ್ಥಿಗಳು ವಾಹನಗಳನ್ನು ಇಂತಿಷ್ಟೆ ಪಡೆಯಬೇಕೆಂಬ ಮಿತಿ ಇರುವುದಿಲ್ಲ, ಖರ್ಚು-ವೆಚ್ಚ ಮಾತ್ರ ಅಂದಾಜಿಸಲಾಗುತ್ತದೆ. ಯಾವುದೇ ಅಭ್ಯರ್ಥಿ ತನ್ನ ಹೆಸರಲ್ಲಿ ವಾಹನ ಪಡೆದು ಬೇರೊಬ್ಬರಿಗೆ ಉಪಯೋಗ ಮಾಡಲು ಅವಕಾಶ ಮಾಡಿದಲ್ಲಿ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಎಂದರು.

**ಎಂಸಿಎಂಸಿ ಅನುಮತಿ ಕಡ್ಡಾಯ;** ಯಾವುದೇ ಎಲೆಕ್ಟ್ರಾನಿಕ್ಸ್ ವಿನ್ಯಾಸ, ಮಾಧ್ಯಮ, ವೆಬ್‌ಸೈಟ್, ವಾಯ್ಸ್ ಮೆಸೇಜ್, ಇನ್ನಿತರೆ ಜಾಹಿರಾತು ನೀಡಲು ಪೂರ್ವಾನುಮತಿ ಕಡ್ಡಾಯ. ಅನುಬಂಧ-ಎ ರಡಿ ಸಲ್ಲಿಸಿ ಅನುಬಂಧ-ಬಿ ರಡಿ ಅನುಮತಿ ಪಡೆಯಬೇಕು. ಮತದಾನ ಮುಕ್ತಾಯವಾಗುವ 48 ಗಂಟೆ ಮುಂಚಿತವಾಗಿ ಮುದ್ರಣ ಮಾಧ್ಯಮಗಳಲ್ಲಿ ಜಾಹೀರಾತು ನೀಡಲು ಮಾತ್ರ ಅನುಬಂಧ-ಸಿ ರಡಿ ಮುಂಚಿತವಾಗಿ ಅರ್ಜಿ ಸಲ್ಲಿಸಿ ಅನುಮತಿ ಪಡೆಯಬೇಕು. ಅನುಮತಿ ಇದ್ದಲ್ಲಿ ಮಾತ್ರ 48 ಗಂಟೆಗಳ ಅವಧಿಯಲ್ಲಿ ಮುದ್ರಣ ಮಾಧ್ಯಮಗಳಲ್ಲಿ ಜಾಹೀರಾತು ಪ್ರಕಟಿಸಲು ಅವಕಾಶ ಇರುತ್ತದೆ ಎಂದರು.

ಚುನಾವಣಾ ವೀಕ್ಷಕರು ಜಿಲ್ಲೆಯಲ್ಲಿದ್ದು ಎಂಸಿಎಂಸಿ ದೂರುಗಳಿದ್ದಲ್ಲಿ ಅವರಿಗೂ ಮತ್ತು ಸಿವಿಜಿಲ್‌ಗೆ, ಟೋಲ್‌ಫ್ರೀ ಸಂಖ್ಯೆಗೂ ಮಾಹಿತಿ ನೀಡಬಹುದಾಗಿದೆ ಎಂದು ಚುನಾವಣಾ ಪ್ರಕ್ರಿಯೆಗಳ ಕುರಿತು ಅಭ್ಯರ್ಥಿಗಳಿಗೆ ಮಾಹಿತಿ ನೀಡಿದರು.

ಅಕೌಂಟಿಂಗ್ ನೋಡಲ್ ಅಧಿಕಾರಿ ಗಿರೀಶ್ ಪಿಪಿಟಿಯಲ್ಲಿ ಎಲ್ಲಾ ಮಾಹಿತಿ ನೀಡಿದರು. ಈ ವೇಳೆ ಸಾಮಾನ್ಯ ವೀಕ್ಷಕರಾದ ಎಂ. ಲಕ್ಷ್ಮಿ, ವೆಚ್ಚ ವೀಕ್ಷಕರಾದ ಪ್ರತಿಭಾಸಿಂಗ್, ಸಹಾಯಕ ಚುನಾವಣಾಧಿಕಾರಿ ಸೈಯ್ಯದಾ ಅಫ್ರಿನ್ ಭಾನು ಎಸ್. ಬಳ್ಳಾರಿ ಹಾಗೂ ಅಭ್ಯರ್ಥಿಗಳು ಉಪಸ್ಥಿತರಿದ್ದರು.

# ಜಿಲ್ಲಾ ಚುನಾವಣಾ ಮತದಾರರ ಜಾಗೃತಿ ಚಿಹ್ನೆಯಾಗಿ ಅಪರೂಪದ ತಳಿ ಬಯಲು ಸೀಮೆಯ 'ಕೊಂಡುಕುರಿ'






ದಾವಣಗೆರೆ, ಏ. 22 - 18ನೇ ಲೋಕಸಭಾ ಚುನಾವಣೆಯಲ್ಲಿ ಮತದಾನ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಬೇಕೆಂದು ಜಿಂಕೆಯ ತದ್ರೂಪ ಹೊಂದಿರುವ ಬಯಲು ಸೀಮೆಯ ಕೊಂಡುಕುರಿ ರಂಗಯ್ಯನದುರ್ಗ ಅರಣ್ಯದಲ್ಲಿ ಸಿಗುವ ನಗುಮೊಗದ ಪ್ರಾಣಿ ಕೊಂಡುಕುರಿ ರಂಗ ಈ ಬಾರಿಯ ಚುನಾವಣಾ ಜಾಗೃತಿಗೆ ಮ್ಯಾಸ್ಕಟ್ ಆಗಿ ಬಳಕೆ ಮಾಡಲಾಗಿದೆ. ಕೊಂಡುಕುರಿ ಓಟದ ತೇಜತೆಯ ರೀತಿಯಲ್ಲಿ ಮತದಾನ ಪ್ರಮಾಣವನ್ನು ಹೆಚ್ಚಿಸಲು ಜಿಲ್ಲಾ ಸ್ವೀಪ್ ಸಮಿತಿ ಗುರಿ ಹೊಂದಿದೆ.

ಮತದಾರರ ಜಾಗೃತಿ ಹೆಚ್ಚಿಸುವ ಮೂಲಕ ಮತದಾನವನ್ನು ದಾಖಲೆ ಪ್ರಮಾಣದಲ್ಲಿ ಹೆಚ್ಚಿಸಬೇಕೆನ್ನುವ ಪ್ರಯತ್ನ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸ್ವೀಪ್ ಸಮಿತಿ ಪ್ರಮುಖ ಉದ್ದೇಶವಾಗಿದೆ. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಚುನಾವಣಾ ಜಾಗೃತಿ ಮ್ಯಾಸ್ಕಟ್ಟನ್ನು ನಿನ್ನೆ ಬಿಡುಗಡೆ ಮಾಡಲಾಯಿತು.

ಈ ವೇಳೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ಎಂ.ವಿ. ವೆಂಕಟೇಶ್, ಚುನಾವಣಾ ವೀಕ್ಷಕರಾದ ಎಂ. ಲಕ್ಷ್ಮಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಸ್ವೀಪ್ ಅಧ್ಯಕ್ಷ ಬಿ. ಸುರೇಶ್ ಇಟ್ನಾಳ್, ಜಿಲ್ಲಾ ಪೊಲೀಸ್ ಅಧೀಕ್ಷಕ ಉಮಾ ಪ್ರಶಾಂತ್ ಹಾಗೂ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

**ಕೊಂಡುಕುರಿಯ ವಿಶೇಷ;** ಬಯಲುಸೀಮೆ ಜಗಳೂರು ತಾಲ್ಲೂಕು ರಂಗಯ್ಯನದುರ್ಗ ಅಭಯಾರಣ್ಯ ಪ್ರದೇಶದಲ್ಲಿ ಕಂಡುಬರುವ ಅಪರೂಪದ ಜೀವ ವೈವಿಧ್ಯತೆಯ ನಾಲ್ಕು ಕೊಂಬಿನ ಕೊಂಡುಕುರಿ ಜಿಂಕೆಯಲ್ಲ, ಜಿಂಕೆಯಾಕಾರ ಹೊಂದಿದೆ. ಏಷ್ಯಾ ಖಂಡದಲ್ಲಿಯೇ ಅಪರೂಪದ ಜೀವಸಂಕುಲವಾಗಿದ್ದು, ನಾಚಿಕೆ ಸ್ವಭಾವದ್ದಾಗಿದೆ. ಇದರ ಸಂತತಿಯನ್ನು ಸಂರಕ್ಷಣೆ ಮಾಡಲು ರಂಗಯ್ಯನದುರ್ಗ ಅರಣ್ಯವನ್ನು ಮೀಸಲಿರಿಸಲಾಗಿದೆ.

ದಾವಣಗೆರೆ ಜಿಲ್ಲೆಯಲ್ಲಿಯೇ ಅಪರೂಪವಾದ ಕೊಂಡುಕುರಿ, ಸೌಮ್ಯ ಪ್ರಾಣಿಗಳಲ್ಲಿ ಜಿಲ್ಲೆಯ ಐಕಾನ್ ಎಂದೇ ಕರೆಯಬಹುದಾಗಿದ್ದು ಚುನಾವಣೆಯಲ್ಲಿ ಜಿಲ್ಲೆಯ ಐಕಾನ್ ಆಗಿ ಚುನಾವಣಾ ಸೌಮ್ಯತೆ ಹೆಚ್ಚಿಸಬಹುದೆಂಬ ಸಂದೇಶದೊಂದಿಗೆ ಮ್ಯಾಸ್ಕಟ್ ಆಗಿ ಬಳಕೆ ಮಾಡಲಾಗಿದೆ ಎಂದು ಸ್ವೀಪ್ ಅಧ್ಯಕ್ಷ ಸುರೇಶ್ ಬಿ.ಇಟ್ನಾಳ್ ಅಭಿಪ್ರಾಯವಾಗಿದೆ.

## ಲೋಕಸಭಾ ಚುನಾವಣೆ : ಮತದಾರರ ಜಾಗೃತಿಗೆ ಜಿಲ್ಲಾ ರಾಯಭಾರಿಗಳಾಗಿ ಆಯ್ಕೆ

ದಾವಣಗೆರೆ, ಏ. 22 - 18 ನೇ ಲೋಕಸಭೆಗೆ ಸಾರ್ವತ್ರಿಕ ಚುನಾವಣೆ ನಡೆಯುತ್ತಿದ್ದು, ಚುನಾವಣೆಯಲ್ಲಿ ಹೆಚ್ಚು ಮತದಾನವಾಗಲು ಹಲವು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಮತದಾರರ ಜಾಗೃತಿಗೆ ದಾವಣಗೆರೆ ಜಿಲ್ಲಾ ರಾಯಭಾರಿಗಳಾಗಿ ನಟರು, ಗಾಯಕರು, ಕ್ರೀಡಾಪಟುಗಳು, ಸಮಾಜ ಸೇವೆಯಲ್ಲಿ ತೊಡಗಿರುವವರನ್ನು ಚುನಾವಣಾ ಆಯೋಗ ಆಯ್ಕೆ ಮಾಡಿದೆ.

ಚುನಾವಣಾ ಜಿಲ್ಲಾ ಐಕಾನ್‌ಗಳಾಗಿ ಚಲನಚಿತ್ರ ಯುವ ನಟ ಪೃಥ್ವಿ ಕೆ.ಆರ್.ಶಾಮನೂರು, ಗಾಯಕಿ ಶೃತಿ ಪ್ರಹ್ಲಾದ್, ಪ್ಯಾರಾ ಬ್ಯಾಡ್ಮಿಂಟರ್ ಆಟಗಾರ ಹಾಗೂ ವಿಶೇಷಚೇತನರಾದ ಇಂದುಧರ ಬಿ.ಎಸ್, ಸಮಾಜ ಸೇವೆಯಲ್ಲಿರುವ ತೃತೀಯ ಲಿಂಗಿ ಚೈತ್ರ.ಎಸ್ ಇವರನ್ನು ಚುನಾವಣಾ ಜಿಲ್ಲಾ ರಾಯಭಾರಿಗಳನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷರಾದ ಸುರೇಶ್ ಬಿ.ಇಟ್ನಾಳ್ ತಿಳಿಸಿದ್ದಾರೆ.

# ಗಾಯತ್ರಿ ಸಿದ್ದೇಶ್ವರಗೆ ಜಿಲ್ಲಾ ಉಪ್ಪಾರ ಸಮಾಜದ ಬೆಂಬಲ



ದಾವಣಗೆರೆ, ಏ.22- ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರಿಗೆ ಜಿಲ್ಲಾ ಉಪ್ಪಾರ ಸಮಾಜ ಬೆಂಬಲ ಘೋಷಿಸಿದೆ.

ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ರಮೇಶ್ ಹದಡಿ, ಮಾಜಿ ಉಪ ಮೇಯರ್ ಪಿ.ಎಸ್. ಜಯಣ್ಣ, ಚನ್ನಗಿರಿ ಉಪ್ಪಾರ ಸಂಘದ ಅಧ್ಯಕ್ಷ ದೇವರಳ್ಳಿ ಬಸವರಾಜ್, ದೂಡಾ ಮಾಜಿ ಅಧ್ಯಕ್ಷ ಎ.ವೈ.ಪ್ರಕಾಶ್, ಪ್ರವರ್ಗ 1 ಜಿಲ್ಲಾಧ್ಯಕ್ಷ ಶ್ರೀನಿವಾಸ್ ತುರ್ಚಘಟ್ಟ, ಜಿಲ್ಲಾ ಒಬಿಸಿ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಎಂ.ಎಂ., ಬಾತಿ ರೇವಣ್ಣ, ಮಾಗಾನಹಳ್ಳಿ ಹಾಲೇಶಪ್ಪ, ಹಿಂಡಸಕಟ್ಟೆ ಮಹಾಬಲೇಶ್, ಕೈದಾಳೆ ಗುರುಪ್ರಸಾದ್, ಹೊಸಹಳ್ಳಿ ಶಿವಮೂರ್ತಿ, ದೇವರಹಳ್ಳಿ ದೇವೇಂದ್ರಪ್ಪ ಮತ್ತು ಬೆಂಬಲಿಗರು ಬಿಜೆಪಿಗೆ ಬೆಂಬಲ ನೀಡಿದ್ದಾರೆ. ಸಂಸದ ಜಿ.ಎಂ.ಸಿದ್ದೇಶ್ವರ್, ಮಾಜಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್ ಜೊತೆಯಲ್ಲಿದ್ದರು.

## ನಗರದಲ್ಲಿ ಇಂದು ಹನುಮ ಜಯಂತಿ ಮತ್ತು ರಥೋತ್ಸವ

ಶಿವಕುಮಾರಸ್ವಾಮಿ ಬಡಾವಣೆಯಲ್ಲಿರುವ ಶ್ರೀ ಸಂಜೀವಿನಿ ಆಂಜನೇಯ ಸ್ವಾಮಿ ದೇವಸ್ಥಾನದ 29ನೇ ವರ್ಷದ ವಾರ್ಷಿಕೋತ್ಸವ, ಶ್ರೀ ರಾಮದೂತ ಹನುಮ ಜಯಂತಿ ಮತ್ತು ರಥೋತ್ಸವ ಕಾರ್ಯಕ್ರಮಗಳನ್ನು ಇಂದು ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 5.55 ಕ್ಕೆ ಶ್ರೀ ಆಂಜನೇಯ ಸ್ವಾಮಿ ತೊಟ್ಟಿಲೋತ್ಸವ, ಬೆಳಿಗ್ಗೆ 8 ರಿಂದ ಪವಮಾನ ಸ್ವಾಹಾಕಾರ, ರಥಾಂಗ ಹೋಮ ಹಾಗೂ ಸಂಕಲ್ಪ, ಬೆಳಿಗ್ಗೆ 11 ಕ್ಕೆ ಪವಮಾನ ಸ್ವಾಹಾಕಾರದ ಪೂರ್ಣಾಹುತಿ, ಮಧ್ಯಾಹ್ನ 12.05 ಕ್ಕೆ ಶ್ರೀ ಸಂಜೀವಿನಿ ಆಂಜನೇಯ ಸ್ವಾಮಿ ರಥೋತ್ಸವ ನಡೆಯಲಿದ್ದು, ಮಧ್ಯಾಹ್ನ 1.30 ರಿಂದ ಅನ್ನ ಸಂತರ್ಪಣೆ ನಡೆಯಲಿದೆ.

## ನಗರದಲ್ಲಿ ಇಂದು ಹನುಮ ಜಯಂತಿ

ಶಕ್ತಿನಗರ, 2ನೇ ಸ್ಟೇಜ್‌ನಲ್ಲಿರುವ ರಾಜೇಂದ್ರ ಬಡಾವಣೆಯ ಶ್ರೀ ವಿಘ್ನರಾಜೇಂದ್ರ ಗಣಪತಿ ದೇವಸ್ಥಾನದಲ್ಲಿ ಶ್ರೀ ವಿಘ್ನರಾಜೇಂದ್ರ ಗಣಪತಿ ಮತ್ತು ಶ್ರೀ ಅಭಯಹಸ್ತ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹನುಮ ಜಂಯತಿ ಆಚರಿಸಲಾಗುವುದು. ಬೆಳಿಗ್ಗೆ 6.30ಕ್ಕೆ ಅಭಿಷೇಕ, ಅಲಂಕಾರ ನಂತರ ತೀರ್ಥ ಪ್ರಸಾದ ಇರುತ್ತದೆ ಎಂದು ಹೆಚ್. ಕುಮಾರ್, ಕೆ.ಆರ್. ಮಂಜುನಾಥ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಶ್ರೀ ಹನುಮ ಜಯಂತಿ

ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘದಿಂದ ಶ್ರೀ ಹನುಮ ಜಯಂತಿ ಕಾರ್ಯಕ್ರಮ ನಡೆಯಲಿದೆ. ಇಂದು ಬೆಳಿಗ್ಗೆ 6.30ಕ್ಕೆ ಷೋಡಶೋಪಚಾರ ಸಹಿತ ಶ್ರೀ ಹನುಮಂತ ದೇವರ ಉತ್ಸವ ಮೂರ್ತಿಯನ್ನು ತೊಟ್ಟಿಲಿಗೆ ಹಾಕುವುದು, ನಂತರ 7.30 ರಿಂದ ಸತ್ಯನಾರಾಯಣ ಸ್ವಾಮಿ ಪೂಜೆ ಹಾಗೂ 9 ಗಂಟೆಗೆ ಪವಮಾನ ಹೋಮ, 11.30ಕ್ಕೆ ಪೂರ್ಣಾಹುತಿ ಮತ್ತು ಮಧ್ಯಾಹ್ನ 12 ಕ್ಕೆ ಶ್ರೀ ಹನುಮಂತ ದೇವರ ಪ್ರಾಕಾರೋತ್ಸವ ಏರ್ಪಡಿಸಲಾಗಿದೆ ಎಂದು ದೇವಸ್ಥಾನ ಸಂಘದ ಅಧ್ಯಕ್ಷ ಆರ್.ಎಲ್. ಪ್ರಭಾಕರ್, ಕಾರ್ಯದರ್ಶಿ ಜೆ. ರವೀಂದ್ರ ಗುಪ್ತ ತಿಳಿಸಿದ್ದಾರೆ.

## ತೋರಣಗಟ್ಟೆಯಲ್ಲಿ ಇಂದು ತೇರು

ಜಗಳೂರು ತಾಲ್ಲೂಕಿನ ತೋರಗಟ್ಟೆಯಲ್ಲಿ ಇಂದು ಸಂಜೆ 5.30ಕ್ಕೆ ಶ್ರೀ ಆಂಜನೇಯ ಸ್ವಾಮಿ ರಥೋತ್ಸವವು ಜರುಗುವುದು. ನಾಳೆ ಬೆಳಿಗ್ಗೆ ಶ್ರೀ ಸ್ವಾಮಿಯ ಉಯ್ಯಾಲೋತ್ಸವ ಮತ್ತು ವಸಂತೋತ್ಸವ ಕಾರ್ಯಕ್ರಮ ಇರುತ್ತದೆ ಎಂದು ಭಾಸ್ಕರ ಗೋವಿಂದರಾಜು ತಿಳಿಸಿದ್ದಾರೆ.

## ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ ಒಂದು ತಿಂಗಳು ನಡೆಸುತ್ತಿರುವ ಮಜ್ಜಿಗೆ ವಿತರಣಾ ಕಾರ್ಯಕ್ರಮಕ್ಕೆ ವರ್ತಕರಾದ ಕಂಸಾಗರ ಪಂಚಾಕ್ಷರಪ್ಪ, ಪ್ರದೀಪ್ ಮತ್ತು ಕು. ಐಶ್ವರ್ಯ, ಡಾ. ಮಂಗಳ ಶೇಖರ್, ಶ್ರೀಮತಿ ಶೈಲಜಾ ಡಾ. ಎ.ಪಿ.ತಿಪ್ಪೇಸ್ವಾಮಿ ಅವರು ಇಂದಿನ ದಾನಿಗಳಾಗಿದ್ದಾರೆ. ದಿ. ಶ್ರೀಮತಿ ಶ್ರೀ ಶಂಕ್ರಮ್ಮ ಹಳ್ಳೂರು ಸಿದ್ದಪ್ಪ ಮತ್ತು ಮಕ್ಕಳು ಮತ್ತು ಡಾ. ಚಿನ್ಮಯ್ ಡಾ.ಸುಹಾಸ್ ಅವರುಗಳು ನಿನ್ನೆ (ಸೋಮವಾರ)ಯ ದಾನಿಗಳಾಗಿದ್ದರು. ಈ ಸತ್ಕಾರ್ಯಕ್ಕೆ ದಾನ ಮಾಡ ಬಯಸುವವರು ಶ್ರೀಮತಿ ಮಂಜುಳಾ ಬಸವಲಿಂಗಪ್ಪ (7483809312) ಅವರನ್ನು ಸಂಪರ್ಕಿಸಬಹುದು.

# ಬಿಜೆಪಿ ಅಭ್ಯರ್ಥಿಗೆ ಭೋವಿ ಸಮಾಜ ಬೆಂಬಲ



ದಾವಣಗೆರೆ, ಏ.22- ಲೋಕಸಭಾ ಚುನಾವಣೆಯ ಬಿಜೆಪಿ ಕಾರ್ಯಾಲಯದಲ್ಲಿ ಭೋವಿ ಸಮಾಜದ ಮುಖಂಡರ ಸಭೆಯನ್ನು ಇಂದು ನಡೆಸಲಾಯಿತು.

ಜಿಲ್ಲೆಯ ಎಲ್ಲಾ ಎಂಟು ವಿಧಾನ ಸಭಾ ಕ್ಷೇತ್ರದ ಸಮಾಜದ ಪ್ರಮುಖರು ಸಭೆ ಸೇರಿದ್ದ ಈ ಸಭೆಯಲ್ಲಿ ಭೋವಿ ಸಮಾಜಕ್ಕೆ ಸಾಮಾಜಿಕ ನ್ಯಾಯ ದೊರಕಿಸಿಕೊಡುವಲ್ಲಿ ಬಿಜೆಪಿ ಸಮರ್ಥವಾಗಿದೆ. ಈ ಕಾರಣಕ್ಕೆ ಭೋವಿ ಸಮಾಜ ಬಿಜೆಪಿ ಪಕ್ಷದ ಪರವಾಗಿದೆ ಹಾಗೂ ಸಮಾಜ ಹಗಲಿರುಳು ಪಕ್ಷಕ್ಕೆ ದುಡಿಯುತ್ತಿದೆ ಎಂದು ಭೋವಿ ಸಮಾಜದ ಮುಖಂಡರು ತಿಳಿಸಿದರು.

ಈ ಸಂದರ್ಭದಲ್ಲಿ ಸಂಸದ ಜಿ.ಎಂ.ಸಿದ್ದೇಶ್ವರ, ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ ನಾಗಪ್ಪ, ಚಿತ್ರದುರ್ಗ ವಿಧಾನ ಪರಿಷತ್ ಸದಸ್ಯ ನವೀನ್, ಚನ್ನಗಿರಿ ಬಿಜೆಪಿ ಮುಖಂಡ ಮಾಡಾಳು ಮಲ್ಲಿಕಾರ್ಜುನ್, ಭೋವಿ ಸಮಾಜದ ಮಾಜಿ ಜಿಲ್ಲಾಧ್ಯಕ್ಷ ಬಿ.ಟಿ.ಸಿದ್ದಪ್ಪ, ಪಾಲಿಕೆ ಸದಸ್ಯ ಆರ್. ಶಿವಾನಂದ್, ಭೋವಿ ಸಮಾಜದ ರಾಜ್ಯಾಧ್ಯಕ್ಷ ಹೆಚ್. ಆನಂದಪ್ಪ, ಬಿಜೆಪಿ ಯುವ ಮೋರ್ಚಾ ರಾಜ್ಯ ಉಪಾಧ್ಯಕ್ಷ ಜಿ.ಎಸ್.ಶಾಮ್, ಮಾಜಿ ಜಿ.ಪಂ. ಸದಸ್ಯ ವೀರಭದ್ರಪ್ಪ ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು.

ಅ.ಕ.ರವೇ ರಾಜ್ಯ ಕಾರ್ಯಾಧ್ಯಕ್ಷ ಎಸ್.ಜಿ. ಸೋಮಶೇಖರ್, ಮಲೇಬೆನ್ನೂರು ಪುರಸಭೆ ಮಾಜಿ ಅಧ್ಯಕ್ಷ ವಿಜಯಕುಮಾರ್, ತಾ.ಪಂ. ಮಾಜಿ ಸದಸ್ಯ ಶ್ರೀನಿವಾಸ್, ನಿ.ಶಿಕ್ಷಕ ಯಂಕಪ್ಪ, ಬಿಜೆಪಿ ಮುಖಂಡರಾದ ಸಿದ್ದಲಿಂಗಪ್ಪ, ನಲ್ಲಿ ಮಂಜುನಾಥ್, ಕರಾಟೆ ತಿಮ್ಮೇಶ್, ಭಜರಂಗದಳದ ನಾರಾಯಣಪ್ಪ, ರಾಜಶೇಖರ್, ಭೋವಿ ಸಮಾಜದ ಮುಖಂಡ ಜಿ.ಲಕ್ಷ್ಮಣ, ಪಾಮೇನಹಳ್ಳಿ ಪರಮೇಶ್, ಕಾಡಜ್ಜಿ ನಿಂಗರಾಜ್, ಜಿ.ವಿ.ಶೇಖರಪ್ಪ, ಅಶೋಕ್ ನಿರ್ಥಡಿ, ಕೇಶವ್ ಪಾಮೇನಹಳ್ಳಿ, ಕಂಚಿಕೆರೆ ವೀರೇಶ್, ದಾಸಪ್ಪ, ರೇವಣ ವಡ್ಡಿನಹಳ್ಳಿ ಇನ್ನಿತರರು ಸಭೆಯಲ್ಲಿ ಉಪಸ್ಥಿತರಿದ್ದರು.

## ನೇಹ ಹತ್ಯೆ ಪ್ರಕರಣ : ಜಾಮೀನು ಅರ್ಜಿ ಸಲ್ಲಿಸದಂತೆ ವಕೀಲರಲ್ಲಿ ದಿವಾಕರ್ ಮನವಿ

ದಾವಣಗೆರೆ, ಏ. 22 - ಹೆಣ್ಣು ಮಕ್ಕಳ ಮೇಲೆ ಲವ್ ಜಿಹಾದ್ ಹೆಸರಿನಲ್ಲಿ ಸಾಕಷ್ಟು ಹೆಣ್ಣು ಮಕ್ಕಳು ಮಾನ, ಪ್ರಾಣವನ್ನು ಕಳೆದುಕೊಂಡಿದ್ದಾರೆ. ಹುಬ್ಬಳ್ಳಿಯಲ್ಲಿ ನಡೆದ ನೇಹಾ ಹಿರೇಮಠ ಅವರನ್ನು 9 ಬಾರಿ ಚಾಕುವಿನಿಂದ ಇರಿದು ಕೊಲೆ ಮಾಡಿರುವ ಆರೋಪಿಯ ವಿಕೃತ ಮನಸ್ಥಿತಿಯನ್ನು ತೋರಿಸುತ್ತದೆ. ಇದಕ್ಕೆ ಕಾಂಗ್ರೆಸ್ ಸರ್ಕಾರದ ಓಲೈಕೆ ರಾಜಕಾರಣವೇ ಮುಖ್ಯ ಕಾರಣ. ಈ ಕೃತ್ಯವನ್ನು ಖಂಡಿಸಿದ್ದಲ್ಲದೆ, ಆತನಿಗೆ ಜಾಮೀನು ಅರ್ಜಿಯನ್ನು ಯಾವ ವಕೀಲರು ಸಲ್ಲಿಸಬಾರದು ಎಂದು ಬಿಜೆಪಿ ಕಾನೂನು ಪ್ರಕೋಷ್ಟದ ಜಿಲ್ಲಾ ಸಂಚಾಲಕ ಹಾಗೂ ವಕೀಲರ ಸಹಕಾರ ಸಂಘದ ಅಧ್ಯಕ್ಷ ಹೆಚ್. ದಿವಾಕರ ಆಗ್ರಹಿಸಿದ್ದಾರೆ.

## ನಗರದ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ದವನದ ಹುಣ್ಣಿಮೆ

ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ದವನದ ಹುಣ್ಣಿಮೆ ಪ್ರಯುಕ್ತ ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ. ಶ್ರೀಮತಿ ಲಕ್ಷ್ಮಿ, ಶ್ರೀ ರಾಜೇಶ್ ಮತ್ತು ಸಹ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.


## ನಗರದಲ್ಲಿ ಇಂದು ಶ್ರೀ ಹನುಮ ಜಯಂತಿ

ಶ್ರೀ ಕೋದಂಡ ದೇವರ ದೇವಸ್ಥಾನದಲ್ಲಿ ಇಂದು ಶ್ರೀ ಹನುಮ ಜಯಂತಿ ಕಾರ್ಯಕ್ರಮ ನಡೆಯಲಿದೆ. ಬೆಳಿಗ್ಗೆ 7 ರಿಂದ 8ರವರೆಗೆ ಹೆಚ್.ಬಿ. ಮಂಜುನಾಥ ಇವರಿಂದ ಶ್ರೀ ಆಂಜನೇಯ ಸ್ವಾಮಿಯ ವಿಚಾರವಾಗಿ ಉಪನ್ಯಾಸ ನಡೆಯಲಿದೆ. ಬೆಳಿಗ್ಗೆ 8 ಗಂಟೆಗೆ ರಥೋತ್ಸವ ಹಾಗೂ ಪ್ರಸಾದ ವಿನಿಯೋಗವಿರುತ್ತದೆ.

## ನಗರದಲ್ಲಿ ಇಂದು ಉಪನ್ಯಾಸ

ಐಎಂಎ ಹಾಲ್‌ನಲ್ಲಿ ಇಂದು ಡಾ. ಸುನೀಲ್ ಬ್ಯಾಡಗಿ ಅವರು ಐಎಂಎ ಮಹಿಳಾ ಸದಸ್ಯೆಯರಿಗೆ ಕ್ಯಾನ್ಸರ್ ಬಗ್ಗೆ ಉಪನ್ಯಾಸ ನೀಡಲಿದ್ದಾರೆ.

## ನಗರದಲ್ಲಿ ಇಂದು ಸಿದ್ಧ ಕಣ್ಣಿನ ಹನಿ



ದ್ಯಾನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇಂದು ಬೆಳಿಗ್ಗೆ 10 ರಿಂದ 12 ರವರೆಗೆ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ. ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸಬಹುದು.

ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ, ಬಿ.ಎಸ್. ವೀರೇಶ್ (88676 - 91155), ಎನ್.ಎಂ. ತಿಪ್ಪೇಸ್ವಾಮಿ (98868-74078), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42713), ಎಂ.ಆರ್.ಅಶೋಕ್ ಕುಮಾರ್ (95917 76643) ಅವರನ್ನು ಸಂಪರ್ಕಿಸಬಹುದು.

## ಭಾರತ್ ಕಾಲೋನಿಯಲ್ಲಿ ಆರೈಕೆ ಆಸ್ಪತ್ರೆಯಿಂದ ಆರೋಗ್ಯ ಶಿಬಿರ



ದಾವಣಗೆರೆ, ಏ. 22- ನಗರದ ಆರೈಕೆ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್ ಹಾಗೂ ಪ್ರೀತಿ ಆರೈಕೆ ಟ್ರಸ್ಟ್ ಇವರ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ನಗರದ ಭಾರತ್ ಕಾಲೋನಿ ಪಂಚಮುಖಿ ದೇವಸ್ಥಾನ ಬಳಿ ಆಯೋಜಿಸಲಾಗಿತ್ತು

ಡಾ. ಟಿ.ಜಿ. ರವಿಕುಮಾರ್ ಅವರ ನೇತೃತ್ವದಲ್ಲಿ ಆರೋಗ್ಯ ತಪಾಸಣಾ ಶಿಬಿರ ಯಶಸ್ವಿಯಾಗಿ ನಡೆಯಿತು. ಶಿಬಿರದಲ್ಲಿ ಹೃದ್ರೋಗ, ಕೀಲು, ಮೂಳೆ, ಮೂತ್ರಪಿಂಡ, ನರರೋಗ ಹೃದಯಕ್ಕೆ ಸಂಬಂಧಿಸಿದ ಎಲ್ಲಾ ಚಿಕಿತ್ಸೆಗಳನ್ನು ಉಚಿತವಾಗಿ ತಪಾಸಣೆ ಮಾಡಲಾಯಿತು.

## ಇಂಡಿಯನ್ ಕಾಫಿ ಬಾರ್ ಬಳಿ ಗಾಯತ್ರಿ ಸಿದ್ದೇಶ್ವರ ಮತಯಾಚನೆ



ದಾವಣಗೆರೆ, ಏ. 22 - ಲೋಕಸಭಾ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಬೆಳಿಗ್ಗೆ ಚುನಾವಣಾ ಪ್ರಚಾರಕ್ಕಾಗಿ ಇಂಡಿಯನ್ ಕಾಫಿ ಬಾರ್ ಬಳಿ ಬಂದು ಮತಯಾಚನೆ ಮಾಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಮಾಜಿ ಮೇಯರ್ ವೀರೇಶ್, ಎಸ್.ಕೆ. ಶ್ರೀಧರ್, ಜಿಲ್ಲಾ ಜೆಡಿಎಸ್‌ನ ಎಸ್.ಸಿ. ಘಟಕದ ಅಧ್ಯಕ್ಷ ಆಂಜಿನಪ್ಪ ಕಡತಿ, ವೆಂಕಟೇಶ್ ಕಾಟ್ಟೆ, ಮಲ್ಲಿಕಾರ್ಜುನ ಕಣವಿ, ಜಗದೀಶ್, ಕೃಷ್ಣ, ರಾಜು, ರಮೇಶ್, ಮೋನಿ ಮತ್ತು ಇತರರು ಉಪಸ್ಥಿತರಿದ್ದರು.

# ದಾವಣಗೆರೆ ಲೋಕಸಭಾ ಚುನಾವಣೆ, ಅಂತಿಮ ಕಣದಲ್ಲಿ 30 ಅಭ್ಯರ್ಥಿಗಳು

ದಾವಣಗೆರೆ, ಏ. 22 - ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಮೇ 7 ರಂದು ಚುನಾವಣೆ ನಡೆಯುತ್ತಿದ್ದು ನಾಮಪತ್ರ ವಾಪಸ್ ಪಡೆಯಲು ಕೊನೆಯ ದಿನವಾದ ಏಪ್ರಿಲ್ 22 ರಂದು 3 ಅಭ್ಯರ್ಥಿಗಳು ಉಮೇದುವಾರಿಕೆ ವಾಪಸ್ ಪಡೆಯುವ ಮೂಲಕ ಚುನಾವಣಾ ಕಣದಲ್ಲಿ 30 ಅಭ್ಯರ್ಥಿಗಳಿದ್ದಾರೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ತಿಳಿಸಿದ್ದಾರೆ.

ಲೋಕಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸಲು ಏ.19 ಕೊನೆಯ ದಿನವಾಗಿತ್ತು, ಒಟ್ಟು 40 ಅಭ್ಯರ್ಥಿಗಳಿಂದ 54 ನಾಮಪತ್ರಗಳು ಸಲ್ಲಿಕೆಯಾಗಿದ್ದವು. ಏ.20 ರಂದು ನಡೆದ ನಾಮಪತ್ರ ಪರಿಶೀಲನೆಯಲ್ಲಿ 7 ಅಭ್ಯರ್ಥಿಗಳ ನಾಮಪತ್ರ ತಿರಸ್ಕೃತವಾಗಿ 33 ಅಭ್ಯರ್ಥಿಗಳ ನಾಮಪತ್ರ ಕ್ರಮಬದ್ಧವಾಗಿದ್ದವು. ಇಂದು ನಾಮಪತ್ರ ವಾಪಸ್ ಪಡೆಯಲು ಕೊನೆಯ ದಿನವಾಗಿತ್ತು.

ಪಕ್ಷೇತರರಾಗಿ ನಾಮಪತ್ರ ಸಲ್ಲಿಸಿದ್ದ ಇರ್ಫಾನ್ ಮುಲ್ಲಾ, ಬಿ. ಅಲ್ಲಾಭಕ್ಷಾ ಹಾಗೂ ಕೆ.ಜಿ. ಅಜ್ಜಪ್ಪ ಸೇರಿ 3 ಅಭ್ಯರ್ಥಿಗಳು ತಮ್ಮ ಉಮೇದುವಾರಿಕೆ ವಾಪಸ್ ಪಡೆಯುವ ಮೂಲಕ ಚುನಾವಣಾ ಅಂತಿಮ ಕಣದಲ್ಲಿ ಎಲ್ಲಾ ಪಕ್ಷ, ಪಕ್ಷೇತರರು ಸೇರಿದಂತೆ ಅಂತಿಮ ಕಣದಲ್ಲಿ 30 ಅಭ್ಯರ್ಥಿಗಳು ಉಳಿದಿದ್ದಾರೆ.

**ಕಣದಲ್ಲಿರುವ ಅಭ್ಯರ್ಥಿಗಳ ವಿವರ;** ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ ಪಕ್ಷದ ಎ.ಕೆ. ತಿಪ್ಪೇಸ್ವಾಮಿ, ಭಾರತೀಯ ಕಾಂಗ್ರೆಸ್ ಪಕ್ಷದ ಡಾ. ಪ್ರಭಾ ಮಲ್ಲಿಕಾರ್ಜುನ್, ಉತ್ತಮ ಪ್ರಜಾಕೀಯ ಪಕ್ಷದ ಈಶ್ವರ, ಭಾರತೀಯ ಜನತಾ ಪಾರ್ಟಿ ಜಿ.ಎಸ್. ಗಾಯತ್ರಿ, ಬಿ.ಎಸ್.ಪಿ ಹನುಮಂತಪ್ಪ, ಸಮಾಜ ವಿಕಾಸ ಕ್ರಾಂತಿ ರುದ್ರೇಶ್ ಕೆ.ಹೆಚ್, ರಾಣಿ ಚೆನ್ನಮ್ಮ ಪಾರ್ಟಿ ಎಸ್. ವೀರೇಶ್, ಕಂಟ್ರಿ ಸಿಟಿಜನ್ ಪಾರ್ಟಿ ಎ.ಟಿ. ದಾದಾ ಖಲಂದರ್, ನವಭಾರತ ಸೇನಾ ಎಂ.ಜಿ. ಶ್ರೀಕಾಂತ್, ಹೆಚ್.ಎಸ್. ಜನಹಿತ ಪಕ್ಷದ ದೊಡ್ಡೇಶ್, ಭಾರತೀಯ ಪ್ರಜೆಗಳ ಕಲ್ಯಾಣ ಪಕ್ಷ ಎಂ.ಸಿ. ಶ್ರೀನಿವಾಸ, ಕೆ.ಆರ್.ಎಸ್.ನಿಂದ ಕೆ.ಎಸ್. ವೀರಭದ್ರಪ್ಪ.

ಪಕ್ಷೇತರರಾಗಿ ಜಿ.ಬಿ. ವಿನಯ್ ಕುಮಾರ್, ಟಿ. ಜಬೀನ್ ತಾಜ್, ಎ.ಕೆ. ಗಣೇಶ್, ಬರ್ಕತ್ ಅಲಿ, ಎಂ. ಮೊಹಮದ್ ಹಯಾತ್, ಎಂ.ಟಿ.ಚಂದ್ರಣ್ಣ, ಕೆ. ಸೈಯದ್ ಜಬೀವುಲ್ಲಾ, ಬಿ. ರವಿನಾಯ್ಕ್, ತಸ್ಲಿಮ್ ಬಾನು, ಹೆಚ್. ಪರ್ವೇಜ್, ರಶೀದ್ ಖಾನ್, ಎಸ್. ಸಲೀಮ್, ಎ.ಕೆ. ಮಂಜುನಾಥ, ಅಬ್ದುಲ್ ನಜೀರ್ ಅಹ್ಮದ್, ಎಸ್. ಪೆದ್ದಪ್ಪ, ಮೆಹಬೂಬ್ ಬಾಷಾ, ಜಿ.ಎಂ. ಬರ್ಕತ್ ಅಲಿ ಬಾಷಾ, ಜಿ.ಎಂ. ಗಾಯತ್ರಿ, ಇವರು ಅಂತಿಮ ಕಣದಲ್ಲಿರುವವರು.

ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ., ದಾವಣಗೆರೆ.

ಸಂಘದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ

ಮಾನ್ಯ ಷೇರುದಾರರೆ ಮತ್ತು ಗ್ರಾಹಕರೇ,

ನಮ್ಮ ಸಂಘದ ನೂತನ ಕಟ್ಟಡವನ್ನು 3ನೇ ಮುಖ್ಯರಸ್ತೆ, 16ನೇ ತಿರುವು, ಕೆ.ಟಿ.ಜೆ. ನಗರ, ದಾವಣಗೆರೆ ಇಲ್ಲಿ ನಿರ್ಮಿಸಲಾಗಿದ್ದು, ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ದಿ. 25.04.2024ರ ಗುರುವಾರ ಬೆಳಿಗ್ಗೆ 10.30ಕ್ಕೆ ಸಲ್ಲುವ ಶುಭ ಮುಹೂರ್ತದಲ್ಲಿ ಸರಳ ಪೂಜಾ ಸಮಾರಂಭದೊಂದಿಗೆ ನೆರವೇರಿಸಲಾಗುವುದು. ಸಂಘದ ಸದಸ್ಯರು, ಗ್ರಾಹಕರು, ಆತ್ಮೀಯರು ಈ ಶುಭ ಸಂದರ್ಭದಲ್ಲಿ ಹಾಜರಿದ್ದು, ಶುಭ ಹಾರೈಸಬೇಕಾಗಿ ವಿನಂತಿ.

ತಮ್ಮ ಆಗಮನಾಭಿಲಾಷಿಗಳು ; ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗ

## ನೇಹಾ ಹತ್ಯೆ ಸಿ.ಓ.ಡಿ. ತನಿಖೆಗೆ, ವಿಶೇಷ ನ್ಯಾಯಾಲಯ, ಕಾಲಮಿತಿಯಲ್ಲಿ ವಿಚಾರಣೆ

**ಸಿಎಂ ಘೋಷಣೆ**

ಬೆಂಗಳೂರು, ಏ. 22 - ವಿದ್ಯಾರ್ಥಿನಿ ನೇಹಾ ಹಿರೇಮಠ್ ಕೊಲೆ ಪ್ರಕರಣವನ್ನು ಸಿಓಡಿ ತನಿಖೆಗೆ ವಹಿಸಲಾಗುವುದು, ವಿಶೇಷ ನ್ಯಾಯಾಲಯ ಸ್ಥಾಪಿಸಿ ಕಾಲಮಿತಿಯಲ್ಲಿ ವಿಚಾರಣೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಘೋಷಣೆ ಮಾಡಿದ್ದಾರೆ.

ಪಕ್ಷದ ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರ ಕೈಗೊಳ್ಳುವುದಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಕರಣವನ್ನು ನಾವು ಮುಚ್ಚಿಹಾಕುವ ಪ್ರಯತ್ನ ಮಾಡಿಲ್ಲ, ಇದನ್ನು ಕೆಲವರು ರಾಜಕೀಯವಾಗಿ ಬಳಸಿಕೊಳ್ಳಲು ಹೊರಟಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಇಂದು ರಾಜ್ಯಾದ್ಯಂತ ಪ್ರತಿಭಟನೆ, ಧರಣಿ ಮಾಡುತ್ತಿರುವ ಬೆನ್ನಲ್ಲೇ ಮುಖ್ಯಮಂತ್ರಿ ಅವರು ಸಿಓಡಿ ತನಿಖೆ ಘೋಷಣೆ ಮಾಡಿದ್ದಾರೆ.

ಪ್ರಕರಣ ನಮ್ಮ ಗಮನಕ್ಕೆ ಬರುತ್ತಿದ್ದಂತೆ ನಮ್ಮ ಸಚಿವ ಹೆಚ್.ಕೆ.ಪಾಟೀಲ್ ಭೇಟಿ ನೀಡಿದ್ದಾರೆ, ಧಾರವಾಡಕ್ಕೆ ತೆರಳಿದ ಸಂದರ್ಭದಲ್ಲಿ ನಾನೂ ಭೇಟಿ ನೀಡುವುದಾಗಿ ಸಿದ್ದರಾಮಯ್ಯ ತಿಳಿಸಿದರು.

ತಪ್ಪಿತಸ್ಥ ಉಗ್ರ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಇದೇ ಕಾರಣಕ್ಕಾಗಿ ನಾವು ಪ್ರಕರಣವನ್ನು ಸಿಓಡಿಯಿಂದ ತನಿಖೆ ಮಾಡಿಸುತ್ತಿರುವುದಲ್ಲದೆ, ವಿಶೇಷ ನ್ಯಾಯಾಲಯ ಸ್ಥಾಪಿಸಿ, ತ್ವರಿತವಾಗಿ ಕಾಲಮಿತಿಯಲ್ಲಿ ವಿಚಾರಣೆ ನಡೆಸಲಾಗುವುದು. ಬಿಜೆಪಿಯವರು ರಾಜಕೀಯ ಬಣ್ಣ ಕಟ್ಟಿ ಇದನ್ನು ಚುನಾವಣೆಗೆ ಬಳಸಿಕೊಳ್ಳಲು ಹೋಗುತ್ತಿದ್ದಾರೆ, ಜನಕ್ಕೂ ಇದು ಅರ್ಥವಾಗುತ್ತದೆ, ತನಿಖೆಯಿಂದ ಸತ್ಯಾಸತ್ಯತೆ ಹೊರಬೀಳಲಿದೆ ಎಂದರು.

## ಹೊನ್ನಾಳಿ : ಇಂದು ಪ್ರಭಾ ಮಲ್ಲಿಕಾರ್ಜುನ್ ಪ್ರವಾಸ



ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ಹೊನ್ನಾಳಿ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಇಂದು ಪ್ರಚಾರ ಕೈಗೊಳ್ಳಲಿದ್ದಾರೆ.

ತೀರ್ಥರಾಮೇಶ್ವರ ಗ್ರಾಮದಿಂದ ಬೆಳಿಗ್ಗೆ 9-30 ಗಂಟೆಯಿಂದ ಪ್ರಚಾರ ಆರಂಭಿಸುವ ಪ್ರಭಾ ಮಲ್ಲಿಕಾರ್ಜುನ್ ಅವರು, ಬೆಳಗುತ್ತಿ ಮಲ್ಲಿಗೇನಹಳ್ಳಿ, ರಾಮೇಶ್ವರ, ಹರಗನಹಾಳು, ಗುಡಿಹಳ್ಳಿ, ಜೀನಹಳ್ಳಿ, ಕತ್ತಿಗೆ, ಕೆಂಚಿಕೊಪ್ಪ, ಚಿನ್ನಿಕಟ್ಟೆ, ಸವಳಂಗ, ಸೋಗಿಲು ಚಟ್ನಹಳ್ಳಿ, ಪಲವನಹಳ್ಳಿ, ಮುಸ್ಸೇನಹಾಳು, ಕುಂಕುವ, ವಡೆಯರಹತ್ತೂರು, ಗಂಗನಕೋಟೆ, ಬಸವನಹಳ್ಳಿ, ಹರಳಹಳ್ಳಿ, ಅರಬಗಟ್ಟೆ, ಮಾದನಬಾವಿ, ಸೊರಟೂರು ಗ್ರಾಮಗಳಲ್ಲಿ ರಾತ್ರಿ 9 ರವರೆಗೆ ಮತಯಾಚನೆ ಮಾಡುವರು.

ಶಾಸಕ ಡಿ.ಜಿ.ಶಾಂತನಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ಅವರು ಪ್ರಚಾರ ಕಾರ್ಯದಲ್ಲಿ ಭಾಗವಹಿಸುವರು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಶಿವಯೋಗಿ, ನಾಗಪ್ಪ ಮತ್ತು ಡಿ.ಜಿ.ವಿಶ್ವನಾಥ ತಿಳಿಸಿದ್ದಾರೆ.

# ನೇಹಾ ಹತ್ಯೆ ಆರೋಪಿಗೆ ಕಠಿಣ ಶಿಕ್ಷೆಗೆ ಆಗ್ರಹ

### ಬಿಜೆಪಿ ಯುವ ಮೋರ್ಚಾ, ಮಹಿಳಾ ಮೋರ್ಚಾ ನೇತೃತ್ವದಲ್ಲಿ ನಗರದಲ್ಲಿ ಪ್ರತಿಭಟನೆ



ದಾವಣಗೆರೆ, ಏ.22- ಹುಬ್ಬಳ್ಳಿಯ ವಿದ್ಯಾರ್ಥಿನಿ ನೇಹಾ ಹಿರೇಮಠ್ ಹತ್ಯೆ ಮಾಡಿದ ಹಂತಕನಿಗೆ ಶೀಘ್ರ ಕಠಿಣ ಶಿಕ್ಷೆ ವಿಧಿಸುವಂತೆ ಆಗ್ರಹಿಸಿ ಸೋಮವಾರ ಬಿಜೆಪಿಯ ಯುವ, ಮಹಿಳಾ ಮೋರ್ಚಾ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಜಯದೇವ ವೃತ್ತದಲ್ಲಿ ಇಂದು ನಡೆದ ಪ್ರತಿಭಟನೆಯಲ್ಲಿ ಬಿಜೆಪಿ ಮುಖಂಡರು, ಕಾರ್ಯಕರ್ತರೊಂದಿಗೆ ವಿವಿಧ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿ ನೇಹಾ ಹಿರೇಮಠ್ ಅವರ ಹತ್ಯೆ ಖಂಡಿಸಿದರು.

ಮಾನವ ಸರಪಳಿ ರಚಿಸಿದ ಪ್ರತಿಭಟನಾಕಾರರು, ನೇಹಾ ಕೊಲೆ ಮಾಡಿದ ಆರೋಪಿಯನ್ನು ಗಲ್ಲು ಶಿಕ್ಷೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದರು. ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರಿಗೆ ಸರ್ಕಾರವು ಸುರಕ್ಷಿತ ವಾತಾವರಣ ನಿರ್ಮಾಣ ಮಾಡಬೇಕು ಎಂದು ಒತ್ತಾಯಿಸಿದರು. ನಂತರ ಜಯದೇವ ವೃತ್ತದಿಂದ ಉಪ ವಿಭಾಗಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ, ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಹರಿಹರ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಕಾಂಗ್ರೆಸ್ ಪಕ್ಷದಲ್ಲಿರುವ ಹಿಂದೂಗಳ ರಕ್ಷಣೆಯನ್ನೂ ಬಿಜೆಪಿಯವರೇ ಮಾಡಬೇಕಾದ ಅನಿವಾರ್ಯತೆ ಇಂದು ಎದುರಾಗಿದೆ ಎಂದು ಹೇಳಿದರು. ಮುಖ್ಯಮಂತ್ರಿ ಸಿದ್ಧರಾಮಯ್ಯ, ಗೃಹ ಸಚಿವ ಡಿ.ಕೆ ಶಿವಕುಮಾರ್ ಇವರು ಅಲ್ಪಸಂಖ್ಯಾತರ ಮತಗಳಿಗಾಗಿ ಹಿಂದೂಗಳ ಬೆಂಬಲಕ್ಕೆ ನಿಲ್ಲುವುದಿಲ್ಲ. ಈ ಹಿನ್ನೆಲೆಯಲ್ಲಿ ನಾವೇ ಕಾಂಗ್ರೆಸ್ ಹಿಂದೂಗಳನ್ನು ರಕ್ಷಿಸಬೇಕಿದೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಎನ್.ರಾಜಶೇಖರ್ ಮಾತನಾಡಿ, ನೇಹಾ ಹತ್ಯೆ ಖಂಡನೀಯ. ಕೂಡಲೇ ಸರ್ಕಾರ ಅಲ್ಪಸಂಖ್ಯಾತರ ಓಲೈಕೆ ಬಿಟ್ಟು, ಆರೋಪಿಗೆ ಕಠಿಣ ಶಿಕ್ಷೆ ನೀಡಬೇಕು ಎಂದು ಆಗ್ರಹಿಸಿದರು.

ಸಂಸದ ಜಿ.ಎಂ. ಸಿದ್ದೇಶ್ವರ, ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಮಾಜಿ ಶಾಸಕ ಮಾಡಾಳು ವಿರೂಪಾಕ್ಷಪ್ಪ, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ, ಪಾಲಿಕೆ ವಿರೋಧ ಪಕ್ಷದ ನಾಯಕ ಕೆ. ಪ್ರಸನ್ನ ಕುಮಾರ್, ಪಾಲಿಕೆ ಸದಸ್ಯ ಎಸ್.ಟಿ. ವೀರೇಶ್, ಶಿವಾನಂದ್, ಮಾಜಿ ಸದಸ್ಯ ಶಿವನಗೌಡ ಟಿ.ಪಾಟೀಲ್, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಆರ್.ಎಲ್.ಶಿವಪ್ರಕಾಶ್, ಮುಖಂಡರುಗಳಾದ ಲೋಕಿಕೆರೆ ನಾಗರಾಜ್, ದೇವರಮನೆ ಶಿವಕುಮಾರ್, ಎಸ್.ಎನ್. ಆನಂದ ಹಿರೇಮಠ, ರಾಜನಹಳ್ಳಿ ಶಿವಕುಮಾರ್, ಶ್ರೀನಿವಾಸ ದಾಸಕರಿಯಪ್ಪ, ವೀರೇಶ್ ಹನಗವಾಡಿ, ಯಶವಂತರಾವ್ ಜಾಧವ್, ರಮೇಶ್ ನಾಯ್ಕ, ಗುರುನಾಥ್, ವೀರಭದ್ರಸ್ವಾಮಿ, ಐರಣಿ ಅಣ್ಣೇಶ್, ಅನಿಲ್ ಕುಮಾರ್ ನಾಯ್ಕ, ಶ್ಯಾಗಲೆ ದೇವೇಂದ್ರಪ್ಪ, ಆನಂದರಾವ್ ಶಿಂಧೆ, ಸಂಗನಗೌಡ್ರು, ನೆಲಹೊನ್ನೆ ಮಂಜಣ್ಣ, ರಮೇಶ್ ನಾಯ್ಕ ಎ.ಸಿ. ರಾಘವೇಂದ್ರ, ಜಿ.ಎಸ್. ಶ್ಯಾಮ್, ಭಾಗ್ಯ ಪಿಸಾಳೆ, ಪುಷ್ಪಾ ವಾಲಿ, ರೇಣುಕಾ ಕೃಷ್ಣ, ಸರ್ವಮಂಗಳಮ್ಮ, ಕಲಾವತಿ, ಮಂಜುಳ, ಚೇತನಾ ಕುಮಾರ್, ನೀತಾ ನಂದೀಶ್, ಸವಿತಾ ರವಿಕುಮಾರ್ ಸೇರಿದಂತೆ ಇತರರು ಪ್ರತಿಭಟನೆಯಲ್ಲಿದ್ದರು.

## ಬಡತನದ ಹೆಚ್ಚಾಗುತ್ತಿದೆ ಹೇಳಿಕೆ ರಾಹುಲ್ ವಿರುದ್ಧ ಬಿಜೆಪಿ ದೂರು

ನವದೆಹಲಿ, ಏ. 22 – ಬಡತನ ಹೆಚ್ಚಾಗುತ್ತಿದೆ ಎಂದು ಕಾಂಗ್ರೆಸ್ ನಾಯಕ ಸುಳ್ಳು ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿರುವ ಬಿಜೆಪಿ, ಈ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಚುನಾವಣಾ ಆಯೋಗಕ್ಕೆ ದೂರು ನೀಡಿದೆ.

ಕಾಂಗ್ರೆಸ್ ನಾಯಕ ಉತ್ತರ ಹಾಗೂ ದಕ್ಷಿಣ ಭಾರತದ ನಡುವೆ ಬಿರುಕು ತರುವ ಯತ್ನ ನಡೆಸಿದ್ದಾರೆ. ಚುನಾವಣಾ ವಾತಾವರಣ ಹದಗೆಡಿಸುತ್ತಿದ್ದಾರೆ ಎಂದೂ ಬಿಜೆಪಿ ಆರೋಪಿಸಿದೆ.

ಬಿಜೆಪಿ ಪ್ರಧಾನ ಕಾರ್ಯದರ್ಶಿ ತರುಣ್ ಚುಘ್ ಹಾಗೂ ಮಾಧ್ಯಮ ವಿಭಾಗದ ಉಸ್ತುವಾರಿ ಅನಿಲ್ ಬಲೂನಿ ಅವರನ್ನು ಒಳಗೊಂಡ ನೇತೃತ್ವದ ಚುನಾವಣಾ ಆಯೋಗದ ಬಳಿ ದೂರು ದಾಖಲಿಸಿದೆ.


ದೇಶದ 20 ಕೋಟಿ ಜನರು ಬಡತನಕ್ಕೆ ಸಿಲುಕಿದ್ದಾರೆ ಎಂದು ರಾಹುಲ್ ಗಾಂಧಿ ಅಪ ಪ್ರಚಾರ ಮಾಡುತ್ತಿದ್ದಾರೆ. ಈ ರೀತಿ ಹೇಳಲು ಅವರಿಗೆ ಯಾವುದೇ ಸಾಕ್ಷಿಗಳಿಲ್ಲ ಎಂದು ಚುಘ್ ಹೇಳಿದ್ದಾರೆ.

## ನಗರದ ಸವಿತಾ ಸಮಾಜ ಸಂಘದಿಂದ ಇಂದು ಶ್ರೀ ಹನುಮ ಜಯಂತಿ



ಸವಿತಾ ಸಮಾಜ ಸಂಘದ ವತಿಯಿಂದ ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀ ಮಾರುತಿ ಮಂದಿರದಲ್ಲಿ ಇಂದು ಹನುಮ ಜಯಂತಿ ಆಚರಿಸಲಾಗುವುದು. ಬೆಳಿಗ್ಗೆ 8ಕ್ಕೆ ಕುಂಕುಮಾರ್ಚನೆ, ಪಂಚಾಮೃತ ಅಭಿಷೇಕ, ನಡೆಸಲಾಗುವುದು. ಬೆಳಿಗ್ಗೆ 11 ಕ್ಕೆ ಮಹಾಮಂಗಳಾರತಿ ಪ್ರಸಾದ ವಿನಿಯೋಗ ಕಾರ್ಯಕ್ರಮ ಇರುತ್ತದೆ ಎಂದು ಸವಿತಾ ಸಮಾಜ ಸಂಘದ ಅಧ್ಯಕ್ಷ ಎನ್.ರಂಗಸ್ವಾಮಿ ತಿಳಿಸಿದ್ದಾರೆ.

## ಆನಗೋಡಿನಲ್ಲಿ ಇಂದು ರಥೋತ್ಸವ



ದಾವಣಗೆರೆ ತಾಲ್ಲೂಕಿನ ಆನಗೋಡು ಗ್ರಾಮದಲ್ಲಿ ಶ್ರೀ ಮರುಳಸಿದ್ದೇಶ್ವರ ರಥೋತ್ಸವವು ತರಳಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ಇಂದು ಸಂಜೆ 5.30ಕ್ಕೆ ನಡೆಯಲಿದೆ. ನಾಳೆ ಬುಧವಾರ ರಾತ್ರಿ 8 ಕ್ಕೆ ಓಕಳಿ ಏರ್ಪಾಡಾಗಿದೆ.

## ಅರುಣಾಚಲ : ಎಂಟು ಮತಗಟ್ಟೆಗಳಲ್ಲಿ ಮರು ಮತದಾನಕ್ಕೆ ಆದೇಶ

ಇಟಾನಗರ, ಏ. 22 - ಅರುಣಾಚಲ ಪ್ರದೇಶದ ಎಂಟು ಮತಗಟ್ಟೆಗಳಲ್ಲಿ ಮರು ಮತದಾನಕ್ಕೆ ಚುನಾವಣಾ ಆಯೋಗ ಆದೇಶಿಸಿದೆ. ಈ ಮತಗಟ್ಟೆಗಳಲ್ಲಿ ಹಿಂಸಾಚಾರ ಹಾಗೂ ಮತಯಂತ್ರಕ್ಕೆ ಹಾನಿಯಾದ ಘಟನೆಗಳು ನಡೆದಿದ್ದವು. ರಾಜ್ಯದಲ್ಲಿ ಏಪ್ರಿಲ್ 19ರಂದು ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆದಿತ್ತು. ಏ. 24ರಂದು ಬೆಳಿಗ್ಗೆ 6 ಗಂಟೆಯಿಂದ ಮಧ್ಯಾಹ್ನ 2 ಗಂಟೆ ನಡುವೆ ಮರು ಮತದಾನ ನಡೆಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

# ನಮ್ಮವರೇ ನಮ್ಮನ್ನು ಬೆಳೆಯಲು ಬಿಡುತ್ತಿಲ್ಲ



**ಪಕ್ಷೇತರ ಅಭ್ಯರ್ಥಿ ಜಿ.ಬಿ. ವಿನಯ್ ಕುಮಾರ್**

ದಾವಣಗೆರೆ, ಏ.22- ನನ್ನ ಜೊತೆ ಫೋಟೋ ಕ್ಲಿಕ್ಕಿಸಿಕೊಂಡವರು ಮತ್ತು ಗುರುತಿಸಿಕೊಂಡವರನ್ನು ಕಾಂಗ್ರೆಸ್ ಪಕ್ಷಾಂತರ ಮಾಡಿಕೊಳ್ಳುತ್ತಿದೆ ಎಂದು ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ.ಬಿ. ವಿನಯ್ ಕುಮಾರ್ ಹೇಳಿದರು.

ಇಲ್ಲಿನ ಭಾಷಾ ನಗರದಲ್ಲಿ ಮುಸ್ಲಿಂ ಬಾಂಧವರು ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾತನಾಡಿದ ಅವರು, ನಮ್ಮವರೇ ನಮ್ಮನ್ನು ಬೆಳೆಯಲು ಬಿಡದೇ ಕಾಲೆಳೆಯುವ ಕೆಲಸ ಮಾಡುತ್ತಿದ್ದಾರೆ ಎಂದರು.

ನನ್ನ ಜೊತೆ ಇದ್ದ ಮುಖಂಡರೆಲ್ಲರೂ ಕಾಂಗ್ರೆಸ್‌ಗೆ ಸೇರುತ್ತಿದ್ದಾರೆ. ನನ್ನ ಬಿಟ್ಟು ಹೋದವರಿಗೆ ಸ್ವಾಭಿಮಾನವಿಲ್ಲ. ನನ್ನದು ಸ್ವಾಭಿಮಾನದ ಹೋರಾಟ, ಜನರು ನೀಡಿದ ಭರವಸೆಯಿಂದಲೇ ನಾನು ಪಕ್ಷೇತರನಾಗಿ ನಿಂತಿದ್ದೇನೆ ಎಂದರು.

ನಾನು ನಾಮಪತ್ರ ಸಲ್ಲಿಸಲು ಹೋದಾಗ ಅಲ್ಲಿ ಬಿಜೆಪಿಯ ಮುಖಂಡರು, ಪೊಲೀಸರು ಹಾಗೂ ಜಿಲ್ಲಾಧಿಕಾರಿ ಕಚೇರಿ ಬೋರ್ಡ್ ಇತ್ತು. ಅದನ್ನು ಎಡಿಟ್ ಮಾಡಿ ಬಿಜೆಪಿ ಸಂಸದರ ಜೊತೆ ಒಳಒಪ್ಪಂದ ಮಾಡಿಕೊಂಡಿದ್ದೇನೆ ಎಂದು ಸುಳ್ಳು ವದಂತಿ ಹಾಗೂ ಅಪಪ್ರಚಾರ ಮಾಡಿದ್ದಾರೆ. ಇಂತಹ ವಿಚಾರಕ್ಕೆ ತಲೆ ಕೆಡಿಸಿಕೊಳ್ಳುವುದಿಲ್ಲ ಎಂದು ಗುಡುಗಿದರು.

ಹೆಗಡೆ ನಗರದ ಪರಿಸ್ಥಿತಿ ಯಾರು ಸುಧಾರಿಸುತ್ತಾರೆ. ರಸ್ತೆ ಇರುವ ಸರ್ವೆ ನಂಬರ್ ತೋರಿಸಿ ಮೂಲಭೂತ ಸೌಲಭ್ಯಗಳೇ ಇಲ್ಲದ ಜಾಗ ಕೊಟ್ಟು ಮೋಸ ಮಾಡಿದ್ದಾರೆ ಎಂದರು.

ನಾನು ಅಧಿಕಾರದ ಆಸೆಯಿಂದಾಗಿ ರಾಜಕೀಯಕ್ಕೆ ಬಂದಿಲ್ಲ, ಸ್ವಂತ ಹಣದಿಂದ 10 ಜನರಿಗೆ ಸಹಾಯ ಮಾಡಬಲ್ಲೆ, ಆದ್ರೆ ಸಂಸದನಾದರೆ ಲಕ್ಷಾಂತರ ಜನರಿಗೆ ಅನುಕೂಲ ಮಾಡುತ್ತೇನೆ ಎಂದರು.

ಈ ವೇಳೆ ಆರೀಫ್ ಸೇರಿದಂತೆ ಮುಸ್ಲಿಂ ಸಮುದಾಯದ ನೂರಾರು ಮಂದಿ ಪಾಲ್ಗೊಂಡಿದ್ದರು.

# ಇನ್ನೊಂದು ವಾರದಲ್ಲಿ ರಾಜ್ಯಕ್ಕೆ ಬರ ಪರಿಹಾರ

**ಸುಪ್ರೀಂ ಕೋರ್ಟ್ ಎದುರು ಕೇಂದ್ರದಿಂದ ವಿವರ ಸಲ್ಲಿಕೆ**

ಬೆಂಗಳೂರು, ಏ. 22 - ಕರ್ನಾಟಕಕ್ಕೆ ಇನ್ನೊಂದು ವಾರದಲ್ಲಿ ಬರ ಪರಿಹಾರ ಹಣ ಬಿಡುಗಡೆ ಮಾಡುವುದಾಗಿ ಕೇಂದ್ರ ಸರ್ಕಾರ ಪ್ರಕಟಿಸಿದೆ. ರಾಜ್ಯಕ್ಕೆ ಬರ ಪರಿಹಾರ ನಿಧಿ ಬಂದಿಲ್ಲ, ಪರಿಹಾರ ನೀಡಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕರ್ನಾಟಕ ಸರ್ಕಾರ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.

ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ದ್ವಿಸದಸ್ಯ ಪೀಠ ಇಂದು ವಿಚಾರಣೆ ನಡೆಸುವ ವೇಳೆ ಕೇಂದ್ರ ಸರ್ಕಾರದ ಪರ ಅಟಾರ್ನಿ ಜನರಲ್ ವೆಂಕಟರಮಣಿ ಮಧ್ಯೆ ಪ್ರವೇಶಿಸಿ, ಕರ್ನಾಟಕದ ರೈತರಿಗೆ ಪರಿಹಾರ ನೀಡಲು ಕೇಂದ್ರ ಚುನಾವಣಾ ಆಯೋಗ ಸಮ್ಮತಿ ನೀಡಿದೆ.

ಆಯೋಗ ಸಮ್ಮತಿ ನೀಡಿರುವ ಹಿನ್ನೆಲೆಯಲ್ಲಿ ಇನ್ನೊಂದು ವಾರದೊಳಗೆ ರಾಜ್ಯದ ರೈತರಿಗೆ ಪರಿಹಾರ ಬಿಡುಗಡೆ ಮಾಡಲಾಗುವುದು ಎಂಬ ಮಾಹಿತಿ ನೀಡುತ್ತಿದ್ದಂತೆ, ವಿಚಾರಣೆಯನ್ನು ಏಪ್ರಿಲ್ 29ಕ್ಕೆ ಮುಂದೂಡಲಾಯಿತು.

ಮಾಹಿತಿ ತಿಳಿಯುತ್ತಿದ್ದಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಎಕ್ಸ್ ಖಾತೆಯಲ್ಲಿ ಹರ್ಷ ವ್ಯಕ್ತಪಡಿಸಿ, ಸುಪ್ರೀಂಕೋರ್ಟ್‌ಗೆ ಕೇಂದ್ರ ಭರವಸೆ ನೀಡಿದ್ದನ್ನು ಸ್ವಾಗತಿಸಿದ್ದಾರೆ.

ಬರ ಪರಿಹಾರ ವಿಳಂಬ ವಿಚಾರದಲ್ಲಿ ಸುಪ್ರೀಂಕೋರ್ಟ್ ಮಧ್ಯಸ್ಥಿಕೆ ಮಾಡಿರುವುದಕ್ಕೆ ಮುಖ್ಯಮಂತ್ರಿ ಧನ್ಯವಾದ ತಿಳಿಸಿದ್ದಾರೆ.

ಮುಂಗಾರು ಮತ್ತು ಹಿಂಗಾರು ರಾಜ್ಯದಲ್ಲಿ ಕೈಕೊಟ್ಟಿದ್ದರಿಂದ 223 ತಾಲ್ಲೂಕುಗಳು ಬರಕ್ಕೆ ಸಿಲುಕಿ, ರೈತರು ಸಂಕಷ್ಟದಲ್ಲಿದ್ದು, ವಿಪತ್ತು ನಿರ್ವಹಣಾ ಪ್ರಾಧಿಕಾರದ ವತಿಯಿಂದ ಪರಿಹಾರ ನೀಡುವಂತೆ ಕೇಂದ್ರಕ್ಕೆ ಮನವಿ ಸಲ್ಲಿಸಿತ್ತು. ಮನವಿ ನಂತರ ಕೇಂದ್ರ ಸರ್ಕಾರ ಕೃಷಿ ಇಲಾಖೆ ಅಧಿಕಾರಿಗಳ ತಂಡ ಕಳುಹಿಸಿ, ಬರ ಅಧ್ಯಯನ ವರದಿ ತರಿಸಿಕೊಂಡಿತ್ತು.

ಇಷ್ಟಾದ ನಂತರವೂ ಪರಿಹಾರ ನೀಡದಿದ್ದಾಗ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ನಿಯೋಗ, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಭೇಟಿ ಮಾಡಿ ಬರ ಪರಿಹಾರ ಬಿಡುಗಡೆ ಮಾಡುವಂತೆ ಮನವಿ ಮಾಡಿಕೊಂಡಿದ್ದರು.

ವರದಿ ನೀಡಿ ನಾಲ್ಕು ತಿಂಗಳು ಕಳೆದರೂ ಪರಿಹಾರ ಬಾರದೇ ಲೋಕಸಭಾ ಚುನಾವಣೆ ಘೋಷಣೆ ಆಗುತ್ತದೆ ಎಂಬ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಅವರು, ವಿಷಯವನ್ನು ಸಂಪುಟದಲ್ಲಿ ಪ್ರಸ್ತಾಪಿಸಿ, ಸುಪ್ರೀಂಕೋರ್ಟ್‌ಗೆ ಮೊರೆ ಹೋಗುವ ನಿರ್ಧಾರ ಕೈಗೊಂಡಿದ್ದಲ್ಲದೆ, ಕೇಂದ್ರದ ವಿರುದ್ಧ ಬಹಿರಂಗ ಕಾನೂನು ಸಮರಕ್ಕೆ ಮುಂದಾಗಲು ತೀರ್ಮಾನ ಕೈಗೊಂಡರು.

## ಜಗಳೂರು ತಾಲ್ಲೂಕಿನಲ್ಲಿ ಇಂದು ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಪ್ರಚಾರ




ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರು ಜಗಳೂರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಇಂದು ಪ್ರಚಾರ ನಡೆಸಲಿದ್ದಾರೆ. ಮಾಜಿ ಶಾಸಕರಾದ ಎಸ್.ವಿ.ರಾಮಚಂದ್ರಪ್ಪ, ಎಚ್.ಪಿ.ರಾಜೇಶ್, ಜೆಡಿಎಸ್ ಮುಖಂಡ ಕಲ್ಲೇರುದ್ರೇಶ್ ಅವರ ಸಾರಥ್ಯದಲ್ಲಿ ಗಾಯತ್ರಿ ಸಿದ್ದೇಶ್ವರ್ ಅವರು ಮತಯಾಚಿಸಲಿದ್ದಾರೆ. ಬೆಳಗ್ಗೆ 10 ಕ್ಕೆ ಹಾಲೇಕಲ್ಲು, 11 ಕ್ಕೆ ಬಿಳಿಚೋಡು, 12 ಕ್ಕೆ ಗುತ್ತಿದುರ್ಗ, ಮಧ್ಯಾಹ್ನ 1 ಕ್ಕೆ ಸಂತೆ ಮುದ್ದಾಪುರ ದ ಬೇಡಿ ಆಂಜನೇಯ ದೇವರ ದರ್ಶನ, 2.30ಕ್ಕೆ ಬಿಸ್ತುವಳ್ಳಿ, 3.30 ಕ್ಕೆ ದೇವಿಕೆರೆ, ಸಂಜೆ 5 ಕ್ಕೆ ಪಲ್ಲಾಗಟ್ಟೆ, 6ಕ್ಕೆ ದಿದ್ದಿಗಿ, 7 ಕ್ಕೆ ಹೊಸದುರ್ಗ (ಹುಚ್ಚಂಗಿಪುರ), 8 ಕ್ಕೆ ಅಸಗೋಡು ಗ್ರಾಮಗಳಲ್ಲಿ ಪ್ರಚಾರ ನಡೆಸಲಿದ್ದಾರೆ.

## ಕೇರಳದ ಶಿಕ್ಷಕರಿಗೆ ಎ.ಐ. ತರಬೇತಿ

ನವದೆಹಲಿ, ಏ. 22 - ಕೃತಕ ಬುದ್ಧಿವಂತಿಕೆ (ಎ.ಐ.) ಕುರಿತು ಕೇರಳದ 80 ಸಾವಿರಕ್ಕೂ ಹೆಚ್ಚು ಮಾಧ್ಯಮಿಕ ಶಾಲಾ ಶಿಕ್ಷಕರಿಗೆ ಮೂರು ದಿನಗಳ ತರಬೇತಿ ಆಯೋಜಿಸಲಾಗಿದೆ.

ಮೇ 2ರಿಂದ ಈ ತರಬೇತಿ ನೀಡಲಾಗುವುದು. ದೇಶದಲ್ಲಿ ಇದೇ ಮೊದಲ ಬಾರಿಗೆ ಶಿಕ್ಷಕರಿಗೆ ದೊಡ್ಡ ಪ್ರಮಾಣದಲ್ಲಿ ಎ.ಐ. ತರಬೇತಿ ನೀಡಲಾಗುತ್ತಿದೆ. ಕೇರಳ ಶಿಕ್ಷಣ ಮೂಲಭೂತ ಸೌಲಭ್ಯ ಹಾಗೂ ತಾಂತ್ರಿಕ ಸಂಸ್ಥೆಯು ಈ ತರಬೇತಿ ನೀಡಲಿದೆ. ಎ.ಐ. ಮೂಲಕ ಮಾಹಿತಿಗಳ ಸರಳೀಕರಣ ಹಾಗೂ ಹೊಸ ಮಾಹಿತಿ ರೂಪಿಸುವ ಕುರಿತು ಶಿಕ್ಷಕರಿಗೆ ತರಬೇತಿ ನೀಡಲಾಗುವುದು.

## ನಗರದ ಹಳೇಪೇಟೆಯಲ್ಲಿ ಇಂದು ಶ್ರೀ ವೀರಭದ್ರೇಶ್ವರ ಸ್ವಾಮಿ ರಥೋತ್ಸವ



ಹಳೇಪೇಟೆಯ ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವವು ಇಂದು ಸಂಜೆ 7 ಕ್ಕೆ ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವ ಜರುಗಲಿದೆ. ನಾಳೆ ಬುಧವಾರ ರಾತ್ರಿ 8 ಕ್ಕೆ ಓಕುಳಿ ಉತ್ಸವ ನಡೆಯುತ್ತದೆ.

## ರಾಣೇಬೆನ್ನೂರಿನಲ್ಲಿ ಇಂದು ಸಿದ್ಧೇಶ್ವರ ತೇರು

ನಗರದ ಸಿದ್ಧೇಶ್ವರ ದೇವರ ಮಹಾ ರಥೋತ್ಸವ ಇಂದು ಸಂಜೆ 5 ಗಂಟೆಗೆ ಜರುಗಲಿವೆ. ರಥೋತ್ಸವದ ಅಂಗವಾಗಿ ಬೆಳಿಗ್ಗೆ 6ಕ್ಕೆ ಗುಗ್ಗಳ ಏರ್ಪಡಾಗಿದೆ. ನಾಳೆ ಬುಧವಾರ ಸಂಜೆ ಓಕುಳಿ ಹಾಗೂ ಬೆಲ್ಲದ ಬಂಡಿ ಉತ್ಸವ ಜರುಗಲಿದೆ ಎಂದು ದೇವಸ್ಥಾನ ಸಮಿತಿ ತಿಳಿಸಿದೆ.

## ನಿಟ್ಟೂರಿನಲ್ಲಿ ಇಂದು ರಥೋತ್ಸವ



ಹರಪನಹಳ್ಳಿ ತಾಲ್ಲೂಕು ನಿಟ್ಟೂರು ಗ್ರಾಮದಲ್ಲಿ ಶ್ರೀ ಗೋದಿ ಗೋಣಿ ಬಸವೇಶ್ವರ ಸ್ವಾಮಿ ರಥೋತ್ಸವವು ಇಂದು ಸಂಜೆ 5 ಗಂಟೆಗೆ ಜರುಗಲಿದೆ ಎಂದು ರುದ್ರೇಶ್ ಎತ್ತಿನಹಳ್ಳಿ ತಿಳಿಸಿದ್ದಾರೆ.

# ಡಾ. ಪ್ರಭಾ ಮಲ್ಲಿಕಾರ್ಜುನ್‌ಗೆ ಮಡಿವಾಳ ಸಮಾಜದ ಬೆಂಬಲ





**ಮಡಿವಾಳ ಸಮಾಜವು ಸದಾ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಾ ಬಂದಿದೆ : ಸಚಿವ ಎಸ್ಸೆಸ್ಸೆಂ**

ದಾವಣಗೆರೆ,ಏ.22- ಕಳೆದ ಲೋಕಸಭಾ ಚುನಾವಣೆಯಲ್ಲಿ ಕೆಲವೇ ಮತಗಳ ಅಂತರದಲ್ಲಿ ವಿರೋಚಿತ ಸೋಲು ಕಂಡಿದ್ದೇವೆ. ಹಾಗಾಗಿ ಪ್ರತಿಯೊಂದು ಮತವು ಅತ್ಯಮೂಲ್ಯವಾದದ್ದು ಎಂದು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ ತಿಳಿಸಿದರು.

ನಗರದ ಎಂಸಿಸಿ 'ಬಿ' ಬ್ಲಾಕಿನ ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಜಿಲ್ಲಾ ಮಡಿಕಟ್ಟೆ ವೃತ್ತಿ ನಿರತರ ಸಂಘ, ಜಿಲ್ಲಾ ಮಲ್ಲಿಗೆಮ್ಮ ಮಹಿಳಾ ಸ್ವಸಹಾಯ ಸಂಘ ಹಾಗೂ ಮಡಿವಾಳ ಸಮುದಾಯದ ಬಂಧುಗಳು ಹಾಗೂ ಸಮಾಜದವರು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಸೂಚಿಸಿದ ಬಳಿಕ ಕಾರ್ಯ ಕರ್ತರನ್ನು ಉದ್ದೇಶಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಜಿಲ್ಲೆಯಲ್ಲಿ ಏಳು ಮಂದಿ ಕಾಂಗ್ರೆಸ್ ಶಾಸಕರು ಇದ್ದಾರೆ. ಕೇಂದ್ರದಲ್ಲಿ ಒಬ್ಬರು ಕಾಂಗ್ರೆಸ್ ಪಕ್ಷದ ಎಂಪಿಯನ್ನು ನೀವು ಆಯ್ಕೆ ಮಾಡಬೇಕು ಎಂದರು. ನಿಮ್ಮೊಂದಿಗೆ ಸದಾ ನಾನು ಇರುವೆ. ನಮ್ಮ ಪಕ್ಷವು ಇದೆ. ಈ ಬಾರಿ ಕಾಂಗ್ರೆಸ್ ಪಕ್ಷನ್ನು ಗೆಲ್ಲಿಸಿ ನಿಮ್ಮ ಸೇವೆಗೆ ಒಂದು ಅವಕಾಶ ಮಾಡಿಕೊಡಿ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಮಾತನಾಡಿ, ಮಡಿವಾಳ ಸಮಾಜವು ಸದಾ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲಿಸುತ್ತಾ ಬಂದಿದೆ. ಶೇಕಡ 90ರಷ್ಟು ಜನ ಮಡಿವಾಳ ಸಮಾಜದವರು ನಮಗೆ ಚಿರಪರಿಚಿತರೇ ಇದ್ದು, ಹಿಂದಿನಿಂದಲು ನಮ್ಮನ್ನು ಬೆಂಬಲಿಸುತ್ತಾ ಬಂದಿದ್ದು ಇನ್ನೂ ಹೆಚ್ಚಿನ ಬೆಂಬಲ ಲಭಿಸಬೇಕು ಎಂದರು.

ದಾವಣಗೆರೆ ಮುನಿಸಿಪಾಲಿಟಿ ಇದ್ದಾಗಲೇ ದೋಬಿ ಘಾಟ್ ನಿರ್ಮಾಣಕ್ಕೆ ಮುಂದಾಗಿದ್ದೆವು, ಆಗ ವಿರೋಧ ಪಕ್ಷದವರು ಅನುದಾನಗಳನ್ನು ಬೇರೆ ಕೆಲಸಕ್ಕೆ ಬಳಕೆ ಮಾಡಿಕೊಂಡರು ಎಂದು ಟೀಕೆ ಮಾಡಿದ ಅವರು ಕಾಂಗ್ರೆಸ್ ಸರ್ಕಾರದಲ್ಲಿ ಬಡವರ ಅಭಿವೃದ್ಧಿಗೆ ಸಾಕಷ್ಟು ಅನುದಾನ ಮೀಸಲಿಡಲಾಗಿದೆ. ರಾಜ್ಯ ಸರ್ಕಾರದ ಐದು ಗ್ಯಾರಂಟಿಗಳು ಬಡವರಿಗೆ ಸಹಾಯವಾಗುತ್ತಿವೆ. ತಿಂಗಳಿಗೆ ಐದಾರು ಸಾವಿರ ಉಳಿತಾಯ ಆಗುತ್ತಿದ್ದು ಕೇಂದ್ರದ ಮಹಾಲಕ್ಷ್ಮಿ ಯೋಜನೆ ಇನ್ನಷ್ಟು ಉಳಿತಾಯಕ್ಕೆ ಸಹಕಾರಿಯಾಗಲಿದೆ ಎಂದರು.


ಕೇವಲ ಮಡಿವಾಳ ಸಮಾಜಕ್ಕೆ ಮಾತ್ರವಲ್ಲ ಎಲ್ಲಾ ಸಮಾಜಗಳಿಗೂ ದಾವಣಗೆರೆಯಲ್ಲಿ ಸೈಟ್ ಗಳನ್ನು ನೀಡಿದ್ದೇವೆ. ಮಡಿವಾಳ ಸಮಾಜದ ದಿ.ಸತೀಶ್ ಅವರ ಸೇವೆ ಸ್ಮರಿಸಿದ ಅವರು ಮಕ್ಕಳ ವಿದ್ಯಾಭ್ಯಾಸದ ಕಡೆ ಪೋಷಕರು ಒತ್ತು ನೀಡಬೇಕು ಎಂದರು.

ಹೊಸ ಹೊಸ ಟೆಕ್ನಾಲಜಿ ಕಡೆ ಗಮನ ಹರಿಸಬೇಕು. ದಾವಣಗೆರೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಅವರು ನಾಲ್ಕೈದು ಭಾಷೆಗಳನ್ನು ಮಾತನಾಡುವರು. ಅವರ ಕೈ ಬಲಪಡಿಸಿ ಕೇಂದ್ರಕ್ಕೆ ಎಂಪಿಯನ್ನಾಗಿ ಆಯ್ಕೆ ಮಾಡಿ ನಿಮ್ಮ ಸೇವೆಗೆ ಅವಕಾಶ ಮಾಡಿಕೊಡಬೇಕು ಎಂದರು.

ಇದಕ್ಕು ಮುನ್ನ ಮಡಿವಾಳ ಸಮಾಜದ ಜಿಲ್ಲಾಧ್ಯಕ್ಷ ಹೆಚ್.ಜಿ.ಉಮೇಶ್ ಮಾತನಾಡಿ, ನಮ್ಮ ಮಡಿವಾಳ ಸಮಾಜಕ್ಕೆ ಕಾಂಗ್ರೆಸ್ ಆಡಳಿತ ಇದ್ದಾಗ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ನಿವೇಶನವನ್ನು ಮಂಜೂರು ಮಾಡಿ ಅನೇಕ ಸವಲತ್ತು ನೀಡಿದೆ. ಪ್ರಸ್ತುತ ನಮ್ಮ ಸಮಾಜ ಅತೀ ಹಿಂದುಳಿದಿದ್ದು ಸಮಾಜವನ್ನು ಎಸ್ಸಿ ಪಟ್ಟಿಗೆ ಸೇರಿಸಬೇಕು, ಧೋಬಿ ಘಾಟ್ ನಿರ್ಮಾಣ ಮಾಡಬೇಕು ಸೇರಿದಂತೆ ಹಲವು ಯೋಜನೆಗಳನ್ನು ಸಮಾಜಕ್ಕೆ ನೀಡಬೇಕು ಎಂದರು.

ಜಿಲ್ಲಾ ಮಡಿವಾಳ ಸಮಾಜದ ನಾಗೇಂದ್ರ ಎಂ, ಜಗಳೂರು ರಮೇಶ್, ಕಂಚಿಕೆರೆ ಕೆಂಚಪ್ಪ, ಹೊನ್ನಾಳಿ ಮಹಾಂತೇಶ್, ಹರಿಹರ ಭೀಮಣ್ಣ, ತೌಡೂರು ಭರಮಪ್ಪ, ಮಂಗಳಮ್ಮ, ಪೂಜಾರ್ ಅಂಜಿನಪ್ಪ, ಶಕುಂತಲಮ್ಮ, ನಗರ ಅಧ್ಯಕ್ಷೆ ನೇತ್ರಾವತಿ, ಎಂ.ವೈ ಸತೀಶ್, ಪರಶುರಾಮ್, ಸಂತೋಷ್ ಮಳಲಕೆರೆ, ಮೇಗಳಗೆರೆ ಪರಶುರಾಮ್, ಧನಂಜಯ್, ಮಂಜಣ್ಣ, ಅಣ್ಣಪ್ಪ, ದುಗ್ಗಪ್ಪ, ರುದ್ರೇಶ್, ರೈತ ಸಂಘದ ಅಂಜಿನಪ್ಪ, ವಿಜಯ್ ಕುಮಾರ್ ಇತರರು ಈ ವೇಳೆ ಉಪಸ್ಥಿತರಿದ್ದರು.

ವಿದೇಶ ಪ್ರಯಾಣ – ಶುಭ ಹಾರೈಕೆ





ಅಮೆರಿಕಾದಲ್ಲಿರುವ ಮಗನನ್ನು ಭೇಟಿಯಾಗಲು
ದಿನಾಂಕ : 23.04.2024 ನೇ ಮಂಗಳವಾರ ವಿದೇಶ ಪ್ರಯಾಣ
ಕೈಗೊಂಡಿರುವ ನಮ್ಮ ಸೊಸೈಟಿಯ ನಿರ್ದೇಶಕರಾದ
ಶ್ರೀ ವಿ.ಹೆಚ್. ಕುಮಾರ್
ಹಾಗೂ
ಶ್ರೀಮತಿ ಲತಾ ಕೆ. ಹಾಗೂ
ಮಗಳು ಪೂಜಾ ಕೆ.
ಇವರ ಪ್ರಯಾಣ ಸುಖಕರವಾಗಿರಲೆಂದು ಶುಭ ಹಾರೈಸುವ..
ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರು ಹಾಗೂ
ಸಿಬ್ಬಂದಿ ವರ್ಗ ಮತ್ತು ಪಿಗ್ಮಿ ಏಜೆಂಟರುಗಳು
ಸಂಚಿತ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ
ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ನಿಟುವಳ್ಳಿ ರಸ್ತೆ, ದಾವಣಗೆರೆ.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas